ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ ತರಿಸಿಕೊಂಡಲ್ಲಿ ೫ ಆಣೆ ಹೆಚ್ಚಿಗೆ ಬೀಳುವದು.

ಬೆಲೆ: ಎರಡು ಆಣೆ

ಕರ್ಮವೀರ

KARMAVEER
WEEKLY
HUBLI
★
APRIL 29
1946

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.]

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

[*Editor :* H. R. Purohit, M. A.

ಸಂಪುಟ ೧೮] 卐 ಹುಬ್ಬಳ್ಳಿ ಸೋಮವಾರ ತಾರೀಖು ೨೯ — ೪ — ೧೯೪೬ 卐 [ಸಂಚಿಕೆ ೪

ಮಂತ್ರಿತ್ರಯರ ಮಾತುಕತೆ ಅಯಶಸ್ವಿಯಾದರೆ ?

ಮಂತ್ರಿತ್ರಯರು ಹಿಂದೀ ಮುಖಂಡರೊಡನೆ ವಿಚಾರವಿನಿಮಯ ಮಾಡಿಕೊಂಡು ಈಸ್ಟರ ಹಬ್ಬದ ನಿಮಿತ್ತ ವಿಶ್ರಾಂತಿ ಪಡೆಯಲು ಕಾಶ್ಮೀರಕ್ಕೆ ಹೋಗಿದ್ದರು. ಅವರು ಗಾಂಧೀಜಿ ರಾಷ್ಟ್ರಪತಿ ಅಜಾದ ಮತ್ತು ಜಿನ್ನಾರವರೊಡನೆ ಎರಡನೆಯ ಸಲ ಮಾತುಕತೆಯಾಡಿದರು. ಕಾಂಗ್ರೆಸ್ ಮತ್ತು ಲೀಗಗಳಲ್ಲಿ ಇದ್ದ ಭಿನ್ನಾಭಿಪ್ರಾಯಗಳನ್ನು ಎಂತು ಸರಿಪಡಿಸಬಹುದೆಂಬ ಬಗ್ಗೆ ಆಯಾ ಪಕ್ಷ ಪ್ರಮುಖರೊಡನೆ ದೀರ್ಘ ವಿಚಾರವಿನಿಮಯ ಮಾಡಿರುವರು. ಕಾಶ್ಮೀರದಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಸಂಪೂರ್ಣ ವಿಶ್ರಾಂತಿ ಹೊಂದಿ ಬುಧವಾರ ದಿಲ್ಲಿಗೆ ಮರಳಿದರು. ಹೀಗೆ ವಿಶ್ರಾಂತಿ ಪಡೆಯುತ್ತಿದ್ದರೂ ಪ್ರತಿ ದಿನ ಅವರಿಗಾಗಿ ದಿಲ್ಲಿ ಶ್ರೀನಗರ ನಡುವಿನ ಟೆಲಿಫೋನ ಮಾರ್ಗವನ್ನು ಎರಡು ಗಂಟೆ ಕಾಯ್ದಿಡಬೇಕೆಂದು ಗೊತ್ತಾಗಿತ್ತು. ಈ ಮೊದಲು ಬರೆದಂತೆ ಮಂತ್ರಿತ್ರಯರು ಈ ಸಲ ಬಂದ ಕೆಲಸ ಮುಗಿಸದೆ ಹಿಂದುಸ್ತಾನದಿಂದ ಮರಳುವದಿಲ್ಲೆಂಬ ಮಾತಿಗೆ ಪುಷ್ಟಿ ದೊರೆಯಹತ್ತಿದೆ. ಇದಕ್ಕಾಗಿ ಹಿಂದುಸ್ತಾನದಲ್ಲಿ ತಿಂಗಳಗಟ್ಟಲೆ ಇರುವ ಪ್ರಸಂಗ ಬಂದರೂ ಚಿಂತೆಯಿಲ್ಲೆಂದು ಅವರು ಅಭಿಪ್ರಾಯ ಪಡುತಿರುವರಂತೆ. ಕ್ರಿಪ್ಸರ ಹೆಂಡತಿ ಇಷ್ಟರಲ್ಲಿಯೆ ಹಿಂದುಸ್ತಾನಕ್ಕೆ ಬರಲಿರುವ ಹರಿಂದ ಇದಕ್ಕೆ ಬೆಂಬಲ ಸಿಕ್ಕುತ್ತದೆ. ಭಾರತದ ಸಮಸ್ಯೆ ಬಿಡಿಸಲು ಬ್ರಿಟಿಶ್ ಸರಕಾರದವರು ಎಷ್ಟು ಪ್ರಾಮಾಣಿಕ ಮತ್ತು ಉತ್ಸುಕರಿರುವರೆಂಬುದು ಸದ್ಯಕ್ಕೆ ನಡೆದ ತರ್ಕವಿತರ್ಕ, ಸುದ್ದಿ ಸಂಗತಿಗಳಿಂದ ನಿಶ್ಚಿತವಾಗದೆ, ಪ್ರತ್ಯಕ್ಷ ಈ ಸಮಸ್ಯೆ ಯಶಸ್ವಿಯಾಗಿ ಬಿಡಿಸಿದ ಬಳಿಕವೇ ಸ್ಪಷ್ಟವಾಗುವುದು.

ಪರಿಸ್ಥಿತಿಯಲ್ಲಿ ಬದಲಾವಣೆ

ಹಿಂದುಸ್ತಾನದ ಸದ್ಯದ ಸಮಸ್ಯೆಯನ್ನು ಬಿಡಿಸುವುದು ಎಷ್ಟೊಂದು ಅವಶ್ಯವಾಗಿದೆಂಬುದನ್ನು ಬೇರೆ ಹೇಳಬೇಕಿಲ್ಲ. ಯುದ್ಧ ಸಮಯದಲ್ಲಿ ಭಾರತಕ್ಕೆ ಬೇಕಾದಷ್ಟು ಅಶ್ವಾಸನ ಕೊಟ್ಟು ಇಲ್ಲಿಯ ಜನ, ಧನ ಬಲವನ್ನು ಸೂರೆಮಾಡಿದ್ದುಂಟು. ಆ ಅಶ್ವಾಸನಗಳನ್ನು ಯುದ್ಧಾನಂತರ ಪೂರ್ಣ ಮಾಡದಿದ್ದರೆ ಆಂತರ್‌ರಾಷ್ಟ್ರೀಯದಲ್ಲಿ ಬ್ರಿಟಿಶ ಸರಕಾರದವರಿಗೆ ಎಳ್ಳಷ್ಟು ಮರ್ಯಾದೆಯುಳಿಯುವುದಿಲ್ಲ. ಸದ್ಯಕ್ಕೆ ಅಧಿಕಾರಾರೂಢವಾದ ಕೂಲಿಕಾರ ಸರಕಾರವು ತನ್ನ ಚುನಾವಣೆ ಕಾರ್ಯಕ್ರಮಕ್ಕಿಂತ ಈ ಸಂಬಂಧದಲ್ಲಿ ಮುಂದಡಿ ಇಟ್ಟಿದೆ. ಭಾರತಕ್ಕೆ ಸ್ವಯಂನಿರ್ಣಯಾಧಿಕಾರವನ್ನೂ ಅದರಲ್ಲಿಯೂ ಬ್ರಿಟಿಶ ಸಾಮ್ರಾಜ್ಯದಿಂದ ಹೊರಗುಳಿಯಬೇಕೋ ಬೇಡವೋ ಎಂಬುದನ್ನು ನಿರ್ಧರಿಸುವ ಅಧಿಕಾರ ಕೊಡಲು ಬ್ರಿಟಿಶ ಸರಕಾರ ನಿರ್ಧರಿಸಿ ತನ್ನ ಸಾಮ್ರಾಜ್ಯಶಾಹಿಯನ್ನು ಕರಗಿಸಲು ಭಾರಿ ಮಾರ್ಗ ಅನುಸರಿಸಿದೆಂದು ಹೇಳಲಾಗುತ್ತದೆ. ಅಂತರ್‌ರಾಷ್ಟ್ರೀಯ ಪರಿಸ್ಥಿತಿಯೇ ಇದಕ್ಕೆ ಕಾರಣವೆನ್ನಬಹುದು. ಹಿಂದುಸ್ತಾನವನ್ನು ಗುಲಾಮಗಿರಿಯಲ್ಲಿಟ್ಟು ದ್ವೇಷ ಕಟ್ಟಿಕೊಳ್ಳುವದಕ್ಕಿಂತಲೂ ಸ್ವತಂತ್ರ ಹಿಂದುಸ್ತಾನದೊಡನೆ ಸ್ನೇಹಭಾವದಿಂದಿರುವದು ಹಿತಕರವೆಂದು ಬ್ರಿಟಿಶ ಸರಕಾರಕ್ಕೆ ಈಗ ಎನಿಸಹತ್ತಿದೆಯಂತೆ.

ಹೃದಯಪರಿವರ್ತನ ?

ಬ್ರಿಟಿಶ ವಿಚಾರಪರಂಪರೆಯಲ್ಲಿಯೂ ಬದಲಾವಣೆಯಾದುದು ಸ್ಪಷ್ಟವಾಗಿ ಕಾಣುತ್ತದೆ. ಹಿಂದಿನ ಸಾಮ್ರಾಜ್ಯಶಾಹಿತ್ವದ ಧೋರಣವನ್ನು ಬ್ರಿಟಿಶ ಜನಸಾಮಾನ್ಯರು ಮತ್ತು ಇತರರು ಬಿಟ್ಟುಕೊಡಹತ್ತಿರುವರು. ಭಾರತದಿಂದ ಬಹಳ ಮಟ್ಟಿಗೆ ಋಣಿಯಾದ ಬ್ರಿಟಿಶ್‌ರೀಗ ಅದಕ್ಕೆ ಉಚಿತವಾದ ಉಪಕಾರ ಮಾಡಬೇಕೆಂಬ ಪ್ರವೃತ್ತಿಯನ್ನು ತಾಳಿದಾರೆಂದು ಆಗಾಗ ಅವರು ಮಾಡುವ ಭಾಷಣ, ಬರೆಯುವ ಬರೆಹಗಳಿಂದ ಗೊತ್ತಾಗುವದು. ಹಿಂದುಸ್ತಾನಕ್ಕೆ ತಾವು ಪ್ರತ್ಯಕ್ಷವಾಗಿ ಕೊಡಬೇಕಾದ ಸಾಲದ ಹೊರೆಯ ಬಗ್ಗೆ ಇಂಗ್ಲಿಶ್ ಮನುಷ್ಯನು ಮೊದಲನೆಯ ಸಲವೆ ಒಂದು ಬರೆಹ ಬರೆದಿದ್ದಾನೆ. ಹೆನ್ರಿ ಗ್ರೆಗ್‌ಸನ್‌ನೆಂಬವನು ಟಿಟ್‌ಬಿಟ್ಸ ಪತ್ರಿಕೆಯಲ್ಲಿ ಬರೆಯುತ್ತ ಪ್ರತಿಯೊಬ್ಬ ಬ್ರಿಟಿಶನಿಗೆ ಹಿಂದುಸ್ತಾನವೆಷ್ಟೊಂದು ಮಹತ್ವದ್ದಾಗಿದೆಂಬುದನ್ನು ವಿವರಿಸಿದ್ದಾನೆ. ಬ್ರಿಟನದಲ್ಲಿಯ ಐವರಲ್ಲಿಯ ಒಬ್ಬ ಮನುಷ್ಯ ತನ್ನ ಉಪಜೀವನವನ್ನು ಹಿಂದುಸ್ತಾನದಿಂದಲೆ ಸಾಗಿಸುತ್ತಾನೆಂದು ಕೆಲ ವರುಷಗಳ ಹಿಂದೆ ಚರ್ಚಿಲ್ಲರೇ ಹೇಳಿದುದನ್ನು ಈ ಲೇಖಕನು ಪ್ರತಿಯೊಬ್ಬ ಬ್ರಿಟಿಶ್‌ನ ಗಮನಕ್ಕೆ ತಂದುಕೊಡುತ್ತಾನೆ. ಬ್ರಿಟಿಶ ಸಾಮ್ರಾಜ್ಯದಲ್ಲಿಯ ಅಮೂಲ್ಯ ರತ್ನವೆಂದು ಕೀರ್ತಿವೆತ್ತ ಭಾರತವು ಬ್ರಿಟಿಶ್ ಬಂಡವಲುಗಾರರ ಸಂಪತ್ತಿಯನ್ನು ಹೆಚ್ಚಿಸಲು ಎಷ್ಟೊಂದು ಸಹಾಯಕವಾಗಿದೆಂಬುದನ್ನು ಪ್ರತಿಯೊಬ್ಬ ಬ್ರಿಟಿಶ ಒಪ್ಪುತ್ತಾನೆ. ಈಗ ಮುಗಿದ ಎರಡು ಮಹಾಯುದ್ಧಾನಂತರ ಪ್ರತಿಯೊಬ್ಬ ಭಾರತೀಯ ಬ್ರಿಟನಕ್ಕೆ ೭ ಪೌಂಡು ಸಾಲಗಾರನುಳಿಯದೆ ಪ್ರತಿಯೊಬ್ಬ ಬ್ರಿಟಿಶ್‌ನೆ ಭಾರತಕ್ಕೆ ೨೪ ಪೌಂಡು ಕೊಡದೇಕಾದ ಪರಿಸ್ಥಿತಿಯುಂಟಾಗಿದೆ. ಭಾರತದ ಈ ಸಾಲ ತೆತ್ತಬೇಕಾದರೆ ಪ್ರತಿಯೊಬ್ಬ ಬ್ರಿಟಿಷ ಪ್ರತಿವಾರ ೧೦ ಶಿಲಿಂಗಗಳಂತೆ ಒಂದು ವರ್ಷ ಹಣ ಸಲ್ಲಿಸಬೇಕಾಗುವದು. ವ್ಯಾಪಾರ, ಉದ್ದಿಮೆ, ನೋಕರಿ ಮೊದಲಾದ ಸಂದರ್ಭಗಳಲ್ಲಯೂ ಬ್ರಿಟನ್ ಭಾರತಕ್ಕೆ ಬಹಳಮಟ್ಟಿಗೆ ಋಣಿಯಾಗಿದೆ. ಇದೆಲ್ಲವನ್ನು ವಿಚಾರ ಮಾಡಿ ಬ್ರಿಟಿಶ್ ಜನಸಾಮಾನ್ಯರು ಹಿಂದುಸ್ತಾನಕ್ಕೆ ನ್ಯಾಯ್ಯವಾಗಿ ಸಲ್ಲಬೇಕಾದ ಸ್ವಾತಂತ್ರ್ಯವನ್ನು ಕೊಟ್ಟುಬಿಡಬೇಕೆಂದು ಅಭಿಪ್ರಾಯ ಪಡುತಿರುವರು.

ಸ್ವಾತಂತ್ರ್ಯ ಕೊಡದಿದ್ದರೆ ?

ಸದ್ಯದ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡದಿದ್ದರೆ ಭಾರತದಲ್ಲೆಲ್ಲ ಅತ್ಯಂತ ಅತೃಪ್ತಿ ಅಸಂತೋಷವುಂಟಾಗಬಹುದೆಂಬುದನ್ನೂ ಬ್ರಿಟಿಶರು ಮನಗಂಡಿರುವರು. ಭಾರತವು ಸಂತುಷ್ಟವುಳಿದರೆ ಉಳಿದ ಬ್ರಿಟಿಶ ಕಾಮನವೆಲ್ಥದೊಡನೆ ಸಹಾನುಭೂತಿ ಪ್ರೇಮಮಯ ಧೋರಣದಿಂದ ನಡೆದದ್ದಾದರೆ ಬ್ರಿಟನ್‌ದ ಜೀವನಮಟ್ಟ ಹೆಚ್ಚುವುದಲ್ಲದೆ ಭಾರತದ ಜೀವನಮಟ್ಟವೂ ಏರುವುದೆಂದು ಗ್ರೆಗ್‌ಸನ್‌ರ ಅಭಿಪ್ರಾಯ. ಇದರಿಂದ ಬ್ರಿಟನ್‌ದ ಭದ್ರತೆಯೂ ಹೆಚ್ಚುವದು; ಭಾರತವೂ ಭದ್ರವಾಗುವದು. ಎಲ್ಲಕ್ಕೂ ಹೆಚ್ಚಿನದೆಂದರೆ ಯಾವ ಪ್ರಜಾಪ್ರಭುತ್ವದ ಸಲುವಾಗಿ ನಾವು ಈ ಯುದ್ಧ ಹೋರಾಡಿ ಇಷ್ಟೊಂದು ರಕ್ತ ಸುರಿಸಿದೆವೊ ಆ ಧ್ಯೇಯ ಏಶಿಯದಲ್ಲಿ ಭದ್ರವಾಗಿ ಸಾಧಿಸಿದಂತಾಗುವದೆಂದೂ ಗ್ರೆಗ್‌ಸನ್ ಅಭಿಪ್ರಾಯಪಟ್ಟಿರುವರು. ಬ್ರಿಟನ್‌ದ ಸ್ವತಂತ್ರ ಕೂಲಿಕಾರ ಪಕ್ಷದ ಅಧ್ವರ್ಯುಗಳಾದ ಫೆನ್‌ರ ಬ್ರಾಕ್ವೆಯವರು ಈ ವಿಷಯವನ್ನು ಚರ್ಚಿಸುತ್ತ ಹಿಂದುಸ್ತಾನಕ್ಕೆ ನಾವು ಸ್ವಾತಂತ್ರ್ಯ ಕೊಡದಿದ್ದರೆ ಕನ್ಯಾಕುಮಾರಿಯಿಂದ ಪೇಶಾವರದ ವರೆಗೆ ಪ್ರಚಂಡ ಚಳವಳಿ ಹಬ್ಬುವದು. ಅದನ್ನು ಹತ್ತಿಕ್ಕಲು ಒಂದು ಆಕ್ರಮಣ ಸೇನೆಯನ್ನೆ ಬ್ರಿಟನ್ನು ಕರೆಸಬೇಕಾಗುವದು. ಇದಕ್ಕೆ ಅವಕಾಶ ಕೊಟ್ಟರೆ ರಶಿಯಾವು ನಮ್ಮ ವಿರುದ್ಧ ಪ್ರಚಾರ ಮಾಡಿ ಹಿಂದುಸ್ತಾನದ ಸ್ನೇಹ ಸಂಪಾದಿಸುವದು ಎಂದು ಮುಂತಾಗಿ ಹೇಳಿರುವರು. ಬ್ರಿಟಿಶ್ ಮುಖ್ಯ ಮಂತ್ರಿ ಅ್ಯಟ್ಲಿಯವರೂ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಅಭಿಪ್ರಾಯಪಟ್ಟಿರುವರು. ಇದೆಲ್ಲವನ್ನು ನೋಡಿದರೆ ಬ್ರಿಟಿಶರ ಹೃದಯಪರಿವರ್ತನವಾಗಿದೆಯೆ ಎಂಬ ಸಂದೇಹವುಂಟಾಗುವದು.

ಯಶಸ್ವಿಯಾಗದಿದ್ದರೆ...?

ಬ್ರಿಟಿಶ ಸರಕಾರದವರ ನಿಜವಾಗಿ ಹೃದಯಪರಿವರ್ತನವಾಗಿ ಅಧಿಕಾರ ಬಿಟ್ಟುಗೊಡಲು ಅವರು ಸಿದ್ಧರಾಗಿದ್ದರೆ ಹಿಂದೀ ಸಮಸ್ಯೆ ಬಗೆಹರಿಯುವುದೆಂಬಲ್ಲಿ ಸಂದೇಹವಿಲ್ಲ. ಮುಸ್ಲಿಂ ಲೀಗಿನ ಹಟಮಾರಿತನವನ್ನೂ ಲೆಕ್ಕಿಸದೆ ಅವರು ಸ್ವಾತಂತ್ರ್ಯ ಕೊಡಲು ಮುಂದಾಗಬೇಕು. ಮಂತ್ರಿತ್ರಯರ ವಿಚಾರವಿನಿಮಯ ಯಶಸ್ವಿಯಾಗುವದೊ ಇಲ್ಲವೊ ಎಂಬ ಬಗ್ಗೆ ಬ್ರಿಟಿಶ್ ಸರಕಾರದಲ್ಲಿಯೆ ಸಂದೇಹವುಂಟಾದಂತೆ ಕಾಣುತ್ತದೆ. ಏಕೆಂದರೆ ಸದ್ಯದ ವಿಚಾರವಿನಿಮಯ ಅಯಶಸ್ವಿಯಾದರೆ ಏನು ಮಾಡಬೇಕೆಂಬದನ್ನು ಈಗಾಗಲೇ ಸರಕಾರದವರು ನಿಶ್ಚಯಿಸಿರುವರೆಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಫೆನ್‌ರ ಬ್ರಾಕ್ವೆಯವರು ವ್ಯಕ್ತಪಡಿಸಿದ ಅಭಿಪ್ರಾಯ ವಿಚಾರಣೀಯವಾಗಿದೆ. ವಿಚಾರವಿನಿಮಯ ಅಯಶಸ್ವಿಯಾದರೆ ಹಿಂದೀಯರು ಹೂಡಬಹುದಾದ ರಾಷ್ಟ್ರೀಯ ಚಳವಳವನ್ನು ಹತ್ತಿಕ್ಕಲು ಬ್ರಿಟಿಶ್ ಅಧಿಕಾರಿಗಳು ಈಗಿನಿಂದಲೆ ಸಿದ್ಧತೆ ನಡೆಸುತಿದ್ದಾರೆಂದು ನನಗೆ ವಿಶ್ವಸನೀಯವಾಗಿ ತಿಳಿದುಬಂದಿದೆ. ಎಲ್ಲ ಪ್ರಾಂತಗಳ ಪೋಲಿಸೆ ಇನ್ಸಪೆಕ್ಟರ ಜನರಲ್‌ರ ಸಭೆ ಹೊಸದಿಲ್ಲಿಯಲ್ಲಿ ಇತ್ತೀಚೆಗೆ ಕೂಡಿದಾಗ ಈ ಬಗ್ಗೆ ನಿರ್ಧರಿಸಲಾಯಿತಂತೆ. ಕಾಂಗ್ರೆಸ ಹಾಗು ಅದರ ಸಹಾಯಕ ಸಂಸ್ಥೆಗಳ ಕಾರ್ಯಕರ್ತರ ಮತ್ತು ಕಾಂಗ್ರೆಸ್ಸಿನ ಆದೇಶದಂತೆ ನಡೆದುಕೊಳ್ಳುವ ರಾಷ್ಟ್ರೀಯ ಪಕ್ಷಗಳ ಹಾಗು ಪಂಗಡಗಳ ಯಾದಿಯನ್ನು ತಯಾರಿಸಲು ಆಯಾ ಇನಸ್ಪೆಕ್ಟರ ಜನರಲ್‌ರು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ವಿಧಿಸಿರುವರಂತೆ. ದಂಡಿನ ಕಾಯಿದೆ ಜಾರಿಯಲ್ಲಿರುವ ನಾಗರೀಕ ಆಡಳಿತೆಯನ್ನು ಹೇಗೆ ಸಾಗಿಸಬೇಕೆಂಬ ಬಗ್ಗೆ ತಮಗೆ ಶಿಕ್ಷಣ ಕೊಡಲಾಗುತ್ತದೆಂದೂ ಈ ತರಬೇತು ಇದೇ ಮೇ ೧ನೇ ತಾರೀಕಿಗೆ ಮುಗಿಯುವದೆಂದೂ ವರಿಷ್ಠಾಧಿಕಾರಿಯೊಬ್ಬನನಗೆ ತಿಳಿಸಿರುವನು ಎಂದು ಮುಂತಾಗಿ ಬ್ರಾಕ್ವೆಯವರು ನುಡಿದರು. ಇದೆಲ್ಲ ಸ್ವಯಂಪ್ರೇರಣೆಯಿಂದ ನಡೆದಿದೆಯೊ ಇಲ್ಲವೆ ಭಾರತಮಂತ್ರಿಗಳಿಗೆ ಇದೆಲ್ಲ ಗೊತ್ತಿದೆಯೊ ಎಂದು ಮುಂತಾಗಿಯೂ ಅವರು ಕೇಳಿರುವರು. ಫೆನ್‌ರ ಬ್ರಾಕ್ವೆಯವರಿಗೆ ಹತ್ತಿದ ಸುದ್ದಿ ನಿಜವಿದ್ದರೆ ಭಾರತದ ಸಮಸ್ಯೆ ಇನ್ನಷ್ಟು ಬಿಕ್ಕಟ್ಟಿನದಾಗುವುದೆಂಬುದು ಖಂಡಿತ.

ಕಾಂಗ್ರೆಸ್ ಹತ್ತಿಕ್ಕುವದನ್ನು ಸಹಿಸಲಾರೆ

ಬ್ರಿಟಿಶ್ ಮಂತ್ರಿತ್ರಯರ ಈ ವರೆಗಿನ ಮಾತುಕತೆ ಪ್ರಕಟನೆ, ಸಂದರ್ಶನ ಮೊದಲಾದವುಗಳನ್ನು ನೋಡಿದರೆ ಅವರು ತಮ್ಮ ಕೆಲಸದಲ್ಲಿ ಒಳ್ಳೆ ಪ್ರಾಮಾಣಿಕರಾಗಿರುವರೆಂಬುದು ಕಂಡುಬರುವದು. ಆದರೆ ಬ್ರಿಟಿಶ್ ಸರಕಾರದ ಹಿಂದಿನ ಕಟು ಅನುಭವವಿದ್ದ ಅನೇಕರು ಹಿಂದೀ ಸಮಸ್ಯೆ ಬಿಡಿಸಲ್ಪಡುವದೆಂಬ ಬಗ್ಗೆ ಸಾಶಂಕರಾಗಿರುವರು. ಇತ್ತೀಚೆ ಬಿಡುಗಡೆ ಹೊಂದಿದ ಜಯಪ್ರಕಾಶ ನಾರಾಯಣರು ಸ್ವಾತಂತ್ರ್ಯ ಕೊಡಲು ಬ್ರಿಟಿಶ ಮಂತ್ರಿಗಳು ಬಂದಿಲ್ಲೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟು ಭಾವೀ ಸ್ವಾತಂತ್ರ್ಯ ಸಮರಕ್ಕಾಗಿ ಸಂಘಟಿತರಾಗಲು ಭಾರತೀಯರನ್ನು ಕೇಳಿಕೊಂಡಿದ್ದಾರೆ. ಫೆನ್‌ರ ಬ್ರಾಕ್ವೆಯವರ ಸಂದೇಹದ ಬಗ್ಗೆ ಮುಂಬಯಿ ಸರಕಾರದ ಗೃಹಖಾತೆಯ ಮಂತ್ರಿಗಳಾದ ಮಾನ್ಯ ಮುರಾರಜಿಯವರು ಉತ್ತರ ಕೊಡುತ್ತ 'ನಾವಿರುವಾಗ ತೆರೆಯ ಮರೆಯಲ್ಲಿ ಯಾರೂ ಏನನ್ನೂ ನಡೆಸಲಾರರು. ಒಂದುವೇಳೆ ಯಾರಾದರೂ ಅಂಥ ಧೈರ್ಯ ತೋರಿಸಿದರೆ ಅವರನ್ನು ಮನೆಗೆ ಕಳಿಸಲಾಗುವದು.' ಎಂದು ಸ್ಪಷ್ಟವಾಗಿ ಹೇಳಿರುವರು. ಭಾರತದ ಚಳವಳವನ್ನು ಹತ್ತಿಕ್ಕಲು ವಿಶಿಷ್ಟರೀತಿಯಿಂದ ಸರಕಾರದವರು ಸಿದ್ಧತೆ ನಡೆಸಿರದಿದ್ದರೂ ಚಳವಳಿ ಪ್ರಾರಂಭವಾದರೆ ಅವನ್ನು ಹತ್ತಿಕ್ಕುವ ಮನಸು ಅವರದಿದೆಂಬುದು ಸುಸ್ಪಷ್ಟ.

ಸರಕಾರದ ಕರ್ತವ್ಯ

ಭಾರತೀಯರು ಸ್ವಾತಂತ್ರ್ಯಕ್ಕಾಗಿ ಎಷ್ಟೊಂದು ಆತುರರಾಗಿದ್ದಾರೆಂಬುದು ಇತ್ತೀಚಿನ ಘಟನೆಗಳಿಂದ ಗೊತ್ತಾಗುವದು. ನಾವಿಕರಲ್ಲಿ ಉಂಟಾದ ಸಂಪು ಸರಕಾರದ ಕಣ್ಣಲ್ಲಿ ಅಂಜನ ಹಾಕುವಂತಹದಾಗಿತ್ತು. ಹಿಂದುಸ್ತಾನಕ್ಕೆ ರಾಜಕೀಯ ಸ್ವಾತಂತ್ರ್ಯ ಈ ಮೊದಲೆ ಬರಬೇಕಾಗಿತ್ತೆಂದು ಆಯರಿಶ್ ಪ್ರಜಾರಾಜ್ಯದ ಅಧಿಪತಿ ಡಿ. ವೆಲರಾ ಇವರು ಅಭಿಪ್ರಾಯಪಡುತ್ತ ಭಾರತ ಸ್ವಾತಂತ್ರ್ಯ

-೧೨ನೇ ಪುಟ ನೋಡಿರಿ

ಕರ್ನಾಟಕದ ಅಂದು ಮತ್ತು ಇಂದು

[ಶ್ರೀ ಶಂ. ಬಾ. ಜೋಶಿ]

(ಮುಂಬಯಿ ಏಕೀಕರಣ ಪರಿಷತ್ತಿನಲ್ಲಿ ಆದ ವಿಚಾರಮಾಲೆಯಲ್ಲಿ ಪವಣಿಸಿದ ಪುಷ್ಪವಿದು)

ಮಾನ್ಯರೇ ನನ್ನ ಇಂದಿನ ವಿಷಯ ಕರ್ನಾಟಕದ ಅಂದು ಮತ್ತು ಇಂದು ಎಂಬುದಾಗಿದೆ. ಇದರಲ್ಲಿ ಮೊದಲು ಅಂದಿನ ಕರ್ನಾಟಕದ ವಿಚಾರ.

೧

ಕರ್ನಾಟಕ, ಕನ್ನಡ, ಎಂಬ ಎರಡು ಹೆಸರು ನಮ್ಮ ಕಿವಿಗೆ ಆಗಾಗ ಬೀಳುತ್ತವೆ. ಆದರೆ ಇವುಗಳ ಅರ್ಥವೇನು ? ಅದರ ವಿಸ್ತಾರವೆಷ್ಟು ? ಅದರ ಉಗಮವು ಎಲ್ಲಿ? ಹುಟ್ಟು ಬೆಳಗೆಯ ಕ್ರಮವೇನು ? ಎಂಬಿವೇ ಮೊದಲಾದ ಮಾತುಗಳನ್ನು ಕುರಿತು ಕೂಲಂಕಷವಾದ ವಿಚಾರ ವಿಮರ್ಶೆಗಳನ್ನು ನಡೆಸಿದ ವಿದ್ವಾಂಸರೇ ಕಡಿಮೆ. ಅಂದ ಮೇಲೆ ಜನಸಾಮಾನ್ಯರಿಗೆ ಈ ವಿಷಯವು ಎಲ್ಲಿಂದ ತಿಳಿದಿರಬೇಕು ?

ಕರ್ನಾಟ, ಕನ್ನಾಡು, ಮತ್ತು ಕಣ್ಣವಿಷಯ

ಶ್ರೀಶೈಲದ ಬಳಿಯ ಪ್ರದೇಶಕ್ಕೆ ಕಣ್ಣವಿಷಯವೆಂದು ಹೆಸರಿದ್ದುದದಾಗಿ ಚಲುಕ್ಯರ ಒಂದು ಶಾಸನದಿಂದ ತಿಳಿದು ಬರುತ್ತದೆ. ಅದೇ ಪ್ರದೇಶಕ್ಕೆ ಕನ್ನಾಡು ಎಂದು ೧೪ ನೇ ಶತಮಾನದ ಒಂದು ಶಾಸನದಲ್ಲಿ ಉಲ್ಲೇಖಿಸಿದೆ. ಇದನ್ನು ಕುರಿತು ಮದ್ರಾಸ ವಿಶ್ವವಿದ್ಯಾನಿಲಯದ ಡಾ. ವೆಂಕಟರಮಣಯ್ಯನವರು ಬರೆದಿರುವದೇನಂದರೆ—

It has already been pointed out that in ancient times a small district lying at the foot of the Srtshail hill was called ಕಣ್ಣವಿಷಯ, ಕನ್ನಾಡು, and ಕರ್ಣಾಟಸೀಮಾ. Now. Mr. Narasimhacharya correctly derives the word Karnata from Kannada, though he is not able to establish its identity, I believe that the country ಕನ್ನಾಡು from which the ಕನ್ನಡ language is said to have obtained its name. is identical with ಕನ್ನಾಡು(ಕಣ್ಣವಿಷಯ-ಕರ್ಣಾಟಸೀಮಾ) that lay at the foot of the Shrishaila hill (Andhra Historica Journal Vol x p 95)

ಆದುದರಿಂದ ಕರ್ಣಾಟ, ಕನ್ನಾಡು, ಮತ್ತು ಕಣ್ಣವಿಷಯ ಎಂಬುವು ಇವು ... ಒಂದೇ ಅರ್ಥದ ವಿಷಯ ಶಬ್ದಗಳೆಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಕಾಲಕ್ರಮದಲ್ಲಿ ಕನ್ನಾಡು ಎಂಬ ಶಬ್ದವು ಶ್ರೀಮಾನ್ ಆರ್ ನೃಸಿಂಹಾಚಾರ್ಯರು ಹೇಳುವಂತೆ ಕನ್ನಡ ಎಂಬ ರೂಪವನ್ನು ತಾಳಿತು. ಮತ್ತು ಅದೇ ಜನರ ಬಾಯಿಯಲ್ಲಿ ಉಳಿಯಿತು. ಆದುದರಿಂದ "ಕನ್ನಡ" ಎಂಬುದರ ಮೂಲಾರ್ಥವು ದೇಶವಾಚಕವಾಗಿದೆಯೆಂಬಲ್ಲಿ ಸಂದೇಹವಿಲ್ಲ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳು 'ಕನ್ನಡ' ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿವೆ. ವಿಜಾಪೂರ ಜಿಲ್ಹೆಯಲ್ಲಿ ಕನ್ನಡ, ನಾಲ್ಕುಸಾವಿರದ ನಾಡು. ಇದ್ದಿತೆಂದು ಒಂದು ಶಾಸನವು ಹೇಳುತ್ತದೆ. ಔರಂಗಾಬಾದ ಜಿಲ್ಹೆಯಲ್ಲಿ ಕನ್ನಡ ಎಂಬ ಒಂದು ತಾಲೂಕು, ಮತ್ತು ಅದೇ ಹೆಸರಿನ ಊರು ಇದೆ.

ಕಣ್ಣವಿಷಯ ಎಂಬಲ್ಲಿ ವಿಷಯ ಅಂದರೆ ದೇಶವಾಯಿತು. ಹಾಗಾದರೆ ಕಣ್ಣ ಎಂಬುದೇನು ? ಕರ್ನಾಟಕದಲ್ಲಿ ಕಣ್ಣ, ಅಥವಾ ಕನ್ನ ಹೆಸರಿನ ಹಲವು ಊರುಗಳು ಇವೆ. ಕಣ್ಣಂಬಾಡಿ, ಕನ್ನವಳ್ಳಿ, ಕನ್ನೂರು, ಕಣ್ಣನೂರು ಎಂಬೀ ಬಗೆಯ ಹೆಸರಿನ ಊರುಗಳು ಮೈಸೂರು, ಧಾರವಾಡ, ವಿಜಾಪುರಭಾಗದಲ್ಲಿ ಈಗಲೂ ಇವೆ. ದಕ್ಷಿಣಕನ್ನಡ ಜಿಲ್ಹೆಯಲ್ಲಿ ಇನ್ನೂ, ಕಣ್ಣಾರು ಎಂಬ ಎರಡು ಊರುಗಳು ಇರುವವಲ್ಲದೆ ಕಣ್ಣರಪಾಡಿ ಎಂಬ ಹೆಸರಿನ ಸ್ಥಳವೂ ಇದ್ದುದು ಕಂಡು ಬರುತ್ತದೆ. ಕಣ್ಣನೂರು ಮತ್ತು ಕಣ್ಣರಪಾಡಿ ಎಂಬ ಕಣ್ಣನ ಮತ್ತು ಕಣ್ಣರ ಎಂಬ ಮಾತು, ಕಣ್ಣ ಎಂಬ ಜನಸೂಚಕವಾದ ಹೆಸರು ಇದ್ದಿತೆಂದು ನಿಶ್ಚಿತವಾಗಿ ನಿರ್ಧರಿಸಬಹುದಾಗಿದೆ. ಕುರುಬಗಟ್ಟಿ, ರಡ್ಡೇಹಟ್ಟಿ ಅಭೀರಪಲ್ಲಿ ಎಂಬೀ ಬಗೆಯಾದ ಜನಾಂಗ ಸೂಚಕ ಸ್ಥಳಗಳಂತೆ ಕಣ್ಣ ಅಥವಾ ಕನ್ನರ ಹೆಸರಿನ ಊರು, ನಾಡುಗಳು ಇವು.

ಸ್ಕಂಧ ಪುರಾಣದ ಬ್ರಹ್ಮಾರಣ್ಯಖಂಡದಲ್ಲಿ (ಅಧ್ಯಾಯದ) ಕರ್ನಾಟ ರಾಕ್ಷಸನ ಉಲ್ಲೇಖವು ಇದ್ದು ಈತನಿಂದಲೇ ಈ ನಾಡಿಗೆ ಈ ಹೆಸರು ಬಂದಿತೆಂದು ಸೂಚಿಸಿದ್ದಾಗಿದೆ. ಮೇಲಣ ಕಣ್ಣ, ಅಥವಾ ಕನ್ನ ಎಂಬ ಹೆಸರಿನ ಸಂಬಂಧವು ಈ ಕರ್ಣಾಟ ರಾಕ್ಷಸನಿಗೆ ಏನಾದರೂ ಇರಬಹುದೇ ? ಆದರೆ ಕಣ್ಣರಪಾಡಿ ಎಂಬುವದರಿಂದ ಈ ಹೆಸರು ಒಂದು ವ್ಯಕ್ತಿಯದಾಗಿರದೆ ಒಂದು ಜನಾಂಗದಾಗಿರಬೇಕೆಂದು ನಾವು ಊಹಿಸಬಹುದಾಗಿದೆ.

ಮತ್ಸ್ಯ ಪುರಾಣದಲ್ಲಿ, ತುರುವಸುವಿನ ಸಂತತಿಯವರು ಕೆಲವು ವ್ರಾತ್ಯರೂ ಅನಾಚಾರಿಗಳೂ ಆದುದರಿಂದ ಅವರನ್ನು ಆರ್ಯಾವರ್ತದಿಂದ ತಳ್ಳಿ ದಕ್ಷಿಣಕ್ಕೆ ಅಟ್ಟಲಾಯಿತೆಂದು ಒಂದು ವರ್ಣನೆಯಿದೆ. ತುರುವಸುವಿನ ವಂಶವೃಕ್ಷವನ್ನು ಹೇಳುವಾಗ

ಪಾಂಡ್ಯಶ್ಚ ಕೇರಳಶ್ಚೈವ ಚೋಳಃ

ಕರ್ಣಸ್ತಥೈವಚ ।

ತೇಷಾಂಜನಪದಾಃ ಸ್ಪೀತಾಃ ಪಾಂಡ್ಯಾಃ ಚೋಳಾಃ

ಸಕೇರಳಾಃ ॥ ೪೮೦೫

ಈ ಶ್ಲೋಕದಲ್ಲಿ ಪಾಂಡ್ಯ, ಕೇರಳ ಮತ್ತು ಚೋಳರೊಡನೆ ಕರ್ಣ ಎಂಬ ಒಂದು ಹೆಸರೂ ಬರುತ್ತದೆ. ಈ 'ಕರ್ಣರೇ' ಮೇಲೆ ಉಲ್ಲೇಖಿಸಿದ ಕಣ್ಣರಾಗಿರಬೇಕೆಂದು ನಿರ್ಧರಿಸಲು ಅಡ್ಡಿ ತೋರುವದಿಲ್ಲ. ಸಂಸ್ಕೃತದಲ್ಲಿ ಕರ್ಣ ಎಂದಿರುವದು ಪ್ರಾಕೃತದಲ್ಲಿ 'ಕಣ್ಣ' ಎಂದು ರೂಪ ತಾಳುವದೆಂದು ವ್ಯಾಕರಣದ ಆಧಾರದಿಂದ ವಿದ್ವಾಂಸರು ನಿರ್ಧರಿಸಿದ್ದಾರೆ. ಆದುದರಿಂದ ಈ ಕಣ್ಣರ ಎಂಬ ಜನಾಂಗವು ಸಂಸ್ಕೃತದಲ್ಲಿ ಕರ್ಣ ಎಂಬ ಹೆಸರಿನಿಂದ ಉಲ್ಲೇಖಿಸಲ್ಪಟ್ಟದೆಯೆಂದು ಅರಿತುಕೊಳ್ಳಬಹುದು.

ಮನುಸ್ಮೃತಿಯಲ್ಲಿ ವ್ರಾತ್ಯ ಕ್ಷತ್ರಿಯರನ್ನು ಕುರಿತು ಹೇಳುವಾಗ ಕರಣರು ಎಂಬವರ ಉಲ್ಲೇಖವು ಬರುವದು-(೩) ಮೇಲಣ ಮತ್ಸ್ಯ ಪುರಾಣದೊಳಗಿನ ಕರ್ಣರು ಮತ್ತು ಮನುಸ್ಮೃತಿಯೊಳಗಿನ ಕರಣರು ಭಿನ್ನ ಜನಾಂಗವೋ ಅಥವಾ ಅವೆರಡೂ ಒಂದೇ ಜನಾಂಗವೋ ಎಂಬ ಪ್ರಶ್ನೆಯು ಇಲ್ಲಿ ತಲೆದೋರುತ್ತದೆ. ನಮ್ಮಲ್ಲಿ Eng ish ಎಂಬುದನ್ನು ಇಂಗ್ರೇಜಿ, ಇಂಗ್ಲಿಷ ಅಥವಾ ಅಂಗ್ರೇಜಿ ಎಂದು ಬೇರೆ ಬೇರೆಯಾಗಿ ಹೇಳುವದನ್ನು ಕಾಣುತ್ತೇವೆ. ಅಷ್ಟರಿಂದಲೇ ಅವು ಬೇರೆ ಬೇರೆ ಪದಗಳೆಂದು ಹೇಳಲಿಕ್ಕಾಗುವದಿಲ್ಲ. ಹೀಗೆ ಉಚ್ಚಾರಭೇದವು ಆಗುವದಕ್ಕೆ ಮೂಲಶಬ್ದವು ಪರಭಾಷೆಯದಾಗಿರುವದೇ ಮುಖ್ಯ ಕಾರಣ. ಪರಭಾಷೆಯೊಳಗಿನ ಪದಗಳನ್ನು ತಮ್ಮ ಭಾಷೆಯಲ್ಲಿ ಉಚ್ಚರಿಸುವಾಗ ಆ ಮೂಲ ಉಚ್ಚಾರವು ಸರಿಯಾಗಿ ಒಗ್ಗದೇ ಇರುವುದರಿಂದ ಆ ಹೊಸ ಶಬ್ದವು ಎರಡೆರಡು—ಮೂರು ಮೂರು ತೆರನಾಗಿ ರೂಢಿಯಲ್ಲಿ ಬರುವದು. ಅದರಂತೆ ಕನ್ನ ಅಥವಾ ಕಣ್ಣ ಎಂಬ ಹೆಸರಿನ ಉಚ್ಚಾರವು ಸಂಸ್ಕೃತದಲ್ಲಿ ಅದನ್ನಾಡುವವರ ಬಾಯಿಗೆ ಸರಿ ಹೋಗುವಂತೆ ಕರ್ಣ ಅಥವಾ ಕರಣ ಎಂಬ ರೂಪು ತಾಳಿರುವದು ಸಹಜವಾಗಿದೆ. ಈಗ 'ಪ್ರಕರಣ' ಎಂಬುದನ್ನು 'ಪ್ರಕರ್ಣ' ಎಂದು ಉಚ್ಚರಿಸುವದನ್ನು ನಾವು ಕೇಳುವದಿಲ್ಲವೇ ?

ಆದಕಾರಣ ಕರ್ಣಾಟ ಎಂಬುದರೊಳಗಿನ ಕರ್ಣ ಎಂಬುದು ಒಂದು ಜನಾಂಗದ ಹೆಸರೆಂಬುದು ನಿಶ್ಚಿತ. ಇದರಲ್ಲಿ ಕರ್ಣ ಅಟ ಎಂದು ಬಿಡಿಸಿದರೆ ಅಟ ಎಂಬುದಕ್ಕೆ ಅರ್ಥವೇ ಉಳಿಯುವದಿಲ್ಲ. ಏಕೆಂದರೆ ಇದು ಮೂಲ ಸಂಸ್ಕೃತ ಶಬ್ದವೇ ಅಲ್ಲ. ಕಣ್ಣ ವಿಷಯ ಎಂದರೆ ಕನ್ನಾಡು ಕನ್ನಾಡು. ಎಂಬುದು ಪ್ರಾಕೃತದಲ್ಲಿ ಕಣ್ಣಾಡ ರೂಪತಾಳಿ ಅದೇ ಸಂಸ್ಕೃತದಲ್ಲಿ ಕರ್ಣಾಟ ಆಗಿದೆ.

ಕಣ್ಣವಿಷಯ ಶ್ರೀಶೈಲದ ಬಳಿಯಲ್ಲಿ ಇದ್ದಿತೆಂದು ಒಂದು ಉಲ್ಲೇಖದಿಂದ ಗೊತ್ತಾಗುವದಷ್ಟೆ. ಕನ್ನಡ ಎಂಬ ಊರು ಔರಂಗಾಬಾದ ಜಿಲ್ಹೆಯಲ್ಲಿ ಗೋದಾವರಿಯ ಉತ್ತರದಲ್ಲಿ ಇದ್ದುದು ಈಗಲೂ ಕಂಡು ಬರುತ್ತದೆ. ಇವೆರಡೂ ಸಂಗತಿಗಳು ಈ ವರೆಗೆ ಅನೇಕ ಸಂಶೋಧಿಗರಿಗೆ ದಿಗಿಲುಗೊಳಿಸಿರುವ ಒಂದು ತೊಡಕನ್ನು ಬಿಡಿಸಲು ಬಹಳ ಚೆನ್ನಾಗಿ ನೆರವಾಗುತ್ತಲಿವೆ. ಈ ಕನ್ನಡ ತಾಲೂಕಿಗೆ ಸಮೀಪದಲ್ಲಿಯೇ ಮಹಾರಾಷ್ಟ್ರದ ಖಾನದೇಶ ಎಂಬ ಜಿಲ್ಹೆ ಇದೆ. ಖಾನದೇಶ ಎಂಬ ಹೆಸರು ಹೇಗೆ ಬಂದಿದೆ ಎಂಬುದನ್ನು ಕುರಿತು ಅನೇಕ ವಿದ್ವಾಂಸರು ಈ ವರಗೆ ತುಂಬ ಕಷ್ಟಪಟ್ಟು ಅದರ ನೆಲೆ ಹತ್ತದೇ ನಿರಾಶರಾಗಿದ್ದಾರೆ. ೪

ಇದು ಖಾನರ ದೇಶ ಆದುದರಿಂದ ಈ ಹೆಸರು ಎಂದು ಐನೇ ಅಕಬರಿಯಲ್ಲಿ ಅಬುಲ್ ಫಜುಲ್‌ನು ಹೇಳುತ್ತಾನೆ. ಅಲ್ಲಿ ಖಾನರ ಮುಸಲ್ಮಾನರ ಜನಸಂಖ್ಯೆಯು ೧೦೦ ಕ್ಕೆ ೩೦ ರಷ್ಟು ಇಲ್ಲ. ಅಲ್ಲದೆ ದಕ್ಷಿಣದಲ್ಲಿಯೇ ಅನೇಕ ವರ್ಷಗಳನ್ನು ಕಳೆದ ಫೆರಿಸ್ತನು, ಈ ಹೆಸರು ಮುಸಲ್ಮಾನರು ಬರುವ ಪೂರ್ವದಲ್ಲಿಯೆ ಈ ಪ್ರಾಂತಕ್ಕೆ ಇದ್ದಿತೆಂದು ಹೇಳುತ್ತಾನೆ ಕರ್ನಲ್ ಸಾಯಿಕ್ ಎಂಬವನಿಗೂ ಈ ಮಾತು ಮಾನ್ಯವಿಲ್ಲ. ಅವನು ಖಿಂಡ್ (ಎಂದರೆ ಇಕ್ಕಟ್ಟಾದ ಕಣಿವೆಗಳ) ಮೂಲಕ ಈ ನಾಡಿಗೆ ಖಿಂಡದೇಶ—ಖಾನದೇಶ ಎಂಬ ಹೆಸರು ಬಂದಿರಬೇಕೆಂದು ಹೇಳುತ್ತಾನೆ ಆದರೆ ಖಿಂಡ ಹೋಗಿ ಅದು ಖಾನವಾಗುವದು ಹೇಗೊ ತಿಳಿಯದು. ಅಮ್ಮಳ್‌ನೇರಿಯ ಸಬ್‌ಜಜ್‌ರಾದ ಮರಾಠೆಯವರು ಇದನ್ನು ಖಂಡಿಸಿ ಶ್ರೀಕೃಷ್ಣನಿಂದ ಈ ಹೆಸರು ಬಂದಿರಬೇಕೆಂದು ಪ್ರತಿಪಾದಿಸುತ್ತಾರೆ. ಕೃಷ್ಣದೇಶ—ಕಣ್ಣದೇಶ—ಖಾನದೇಶ ಎಂದು ಅವರ ಅಭಿಪ್ರಾಯ. ಆದರೆ ಶ್ರೀಮಾನ್ ಮರಾಠೆಯವರ ಅಭಿಪ್ರಾಯದ ವಿಷಯದಲ್ಲಿ ಒಂದು ಸಂದೇಹವು ಉಂಟಾಗುವದು. ಮಥುರಾ ವೃಂದಾವನವು ಕೃಷ್ಣನ ದೇಶ, ಅದೂ ಹೋಗಲಿ ದ್ವಾರಕೆ ಆತನ ಆಶ್ರಯ ಭೂಮಿ ವರ್ಹಾಡವು ಆತನ ನಲ್ಲೆಯ ನಾಡು ಆದರೆ ಇದಾವ ಭಾಗಕ್ಕೂ ಕೃಷ್ಣನ ಹೆಸರು ಇಲ್ಲದೇ ಕೃಷ್ಣನು ಬಂದ ಅಥವಾ ಹೋದ ಏನೂ ಸಂಬಂಧವಿಲ್ಲದ ಈ ಖಾನದೇಶಕ್ಕಷ್ಟೇ ಆತನ ಹೆಸರು ಬರಲು ಕಾರಣವೇನು, ತಿಳಿಯದು. ಆದುದರಿಂದ ಶ್ರೀಕೃಷ್ಣನಿಂದ ಈ ಹೆಸರು ಬಂದಿತೆಂಬ ಮಾತನ್ನು ಒಪ್ಪಲಿಕ್ಕೆ ಆಗುವದಿಲ್ಲ. ಶ್ರೀ ಮರಾಠೆಯವರ. ಸತ್ಯದ ಹತ್ತರ ಸುಳಿದಾಡುತ್ತಿದ್ದರೂ ಅವರಿಗೆ ಕರ್ನಾಟಕದ ಪೂರ್ವಪರಂಪರಯು ಗೊತ್ತಿಲ್ಲದಿದ್ದುದರಿಂದ ಸರಿಯಾದ ಅರ್ಥವು ಅವರಿಗೆ ಹೊಳೆಯದೇ ಇದ್ದುದರಲ್ಲಿ ಸೋಜಿಗವಿಲ್ಲ. ಶ್ರೀ ಮರಾಠೆಯವರು ಹೇಳುವಂತೆ ಅದು ಕಣ್ಣದೇಶವಲ್ಲ, ಕಣ್ಣದೇಶ. ಕಣ್ಣರ ಪ್ರದೇಶ ಅದುವೆ ಅರಬಾಯಲ್ಲಿ ಕಾನದೇಶ-ಖಾನದೇಶವಾಯಿತು.

ಇಂತಿದು ವಿಂಧ್ಯದ ದಕ್ಷಿಣದಿಂದ ಕಣ್ಣರ ದೇಶಕ್ಕೆ ಆರಂಭವಾಗಿ ಶ್ರೀಶೈಲ, ನೀಲಗಿರಿಯ ವರೆಗೆ ಕಣ್ಣವಿಷಯವು ಹಬ್ಬಿದ್ದಿತೆಂದು ನಾವು ಅರಿತುಕೊಳ್ಳಬಹುದಾಗಿದೆ. ಕನ್ನಾಡು (ಕನ್ನಡ) ಎಂಬಂತೆ ಕನ್ನವಾಡನೆಂಬ ಜಿಲ್ಹೆಯಂತಹ ಒಂದು ದೊಡ್ಡ ವಿಭಾಗವು ರಾಷ್ಟ್ರಕೂಟರ ಕಾಲದಲ್ಲಿದ್ದುದು ಬೆಳಕಿಗೆ ಬಂದಿದೆ. ಕನ್‌ನಾಡು, ಕನ್ನವಾಡಗರಂತೆ ಇದು ಕನ್ನದೇಶ—ಖಾನದೇಶವೂ ಒಂದು ಎಂದು ನಿರ್ಧರಿಸಲು ಅಡ್ಡಿತೋರುವದಿಲ್ಲ.

ಕಣ್ಣರ ಪೂರ್ವಪೀಠಿಕೆ

ಕಣ್ಣರು ಅಥವಾ ಕರ್ಣರು ತುರುವಸುವಿನ ವಂಶಜರೆಂದು ಮತ್ಸ್ಯಪುರಾಣದಿಂದ ಗೊತ್ತಾಗುತ್ತದೆ. ಯದು ಮತ್ತು ತುರುವಸು ಇವೆರಡೂ ಪಂಗಡಗಳು ವೇದಕಾಲದಿಂದಲೂ ನಿಕಟ ಸಂಬಂಧವುಳ್ಳವುಗಳು. ಋಗ್ವೇದದಲ್ಲಿ ಇವರ ಹೆಸರು ಸುಮಾರು ೧೪ ಸಾರೆ ಕೂಡಿಯೇ ಬಂದಿದೆ. ಆದುದರಿಂದ ಯದು ಮತ್ತು ತುರುವಸುಗಳು ಆಪ್ತಬಾಂಧವರು. ಒಂದೇ ಪಂಗಡದ ಎರಡು ಗುಂಪುಗಳೆಂದು ಮೆಕ್ಡೋನೆಲ್ ಮತ್ತು ಕೀಥರು ನಿರ್ಧರಿಸಿದ್ದಾರೆ. ೫ ಕರ್ನಾಟಕದ ಗಂಗರು ತಾವು ಗಂಗಾತೀರದಿಂದ ಬಂದವರೆಂದೂ ತುರುವಸುವಿನ ಸಂತತಿಯವರೆಂದೂ ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ವಿಜಯ ನಗರದ ರಾಜರಲ್ಲಿಯೂ ಒಂದು ಮನೆತನದವರು ತಾವು ತುರುವಸುವಿನ ಸಂತತಿಯವರೆಂದು ಅಂದುಕೊಳ್ಳುತ್ತಾರೆ. ನಮ್ಮ ಚಾಲುಕ್ಯರು ಮತ್ತು ರಾಷ್ಟ್ರಕೂಟರು ತಾವು ಯಾದವಕುಲದವರೆಂದು ಹೇಳಿಕೊಳ್ಳುತ್ತಾರೆ. ೭. ಚಲುಕ್ಯರು ಅಯೋಧ್ಯೆಯಿಂದ ಬಂದು ಇಲ್ಲಿ ನೆಲಸಿದರೆಂದೂ ಒಂದು ದಂತಕಥೆ ಇದೆ. ಹೀಗೆ ನಮ್ಮನಾಡಿನ ಅರಸುಮನೆತನಗಳೆಲ್ಲವೂ ಯದು, ತುರುವಸುವಿನ ವಂಶದವರೆಂದು ಗೊತ್ತಾಗುತ್ತದೆ.

ಯದುಗಳು ದ್ರಾವಿಡರು, ಎಂದು ಪುರಾಣ ಪರಂಪರೆಗಳ ಆಧಾರದಿಂದ ಕಂಡುಹಿಡಿಯಬಹುದಾಗಿದೆ. ಯಾದವರು ಗೋವಳರು, ಎಂದರೆ ದನಗಾರರು. ಇವರು ಅಂಧಕ ವೃಷ್ಣಿಯ ವಂಶದವರು. ಅಂಧಕವೇಣ್ಣು ದಾಸನೆಂದು ಪಾಲೀ ಸಾಹಿತ್ಯದಲ್ಲಿ ಹೇಳಿದೆ. ಅಂಧಕ ವೃಷ್ಣಿಗಳು ಕಾಡಾಡಿಗಳು (ಬರ್ಬೇರಿಯನ್ಸ) ಎಂದು ಪಾಣಿಣಿಯು ಹೇಳುತ್ತಾನೆ. ೮. ವೃಷ್ಣಿ ಎಂದರೆ ಟಗರು, ಕುರಿ ಕರ್ನಾಟಕದಲ್ಲಿ ಅಂಡೆಗುರುಬರು ಉಂಟು. ಅಂಧಕವೃಷ್ಣಿ ಎಂಬ ಹೆಸರು ಕೂಡಲ ಸಂಗಮ ಎಂಬಂತೆ ಎರಡು ಭಿನ್ನ ಭಾಷೆಗಳ ಒಂದೇ ಅರ್ಥದ ಜೋಡುನುಡಿಯಾಗಿದೆ. ಅಂಡೆಗಳು ಎಂದರೂ ಕುರುಬರು; ವೃಷ್ಣಿಗಳು ಎಂದರೂ ಕುರುಬರು; ದನಗಾರರು. ತುರುವಸುಗಳೆಂಬುದು ಇದೇ ಬಗೆಯ ಹೆಸರಾಗಿದೆ. ತುರು ಮತ್ತು ವಸು ಇವರಿಗೆ ಕೆಲವಡೆಯಲ್ಲಿ ವಶಾಃ ಎಂದೂ ಕೆಲವಡೆ ತುರುವಃ ಎಂದೂ ಋಗ್ವೇದದಲ್ಲಿ ಕರೆದಿದೆ. ವಸು ಮತ್ತು ವಶಾ ಎಂದರೆ ಗೋವು, ದನಗಳು. ತುರು ಎಂದರೂ ಗೋವುಗಳೇ. ಆದುದರಿಂದ ತುರು—ವಸು, ಅಥವಾ ತುರ್ವಸು ಎಂಬುದು ಕೂಡಲು ಸಂಗಮನಂತಹ ಶಬ್ದವೇ ಆಗಿದೆ ಎಂಬುದು ಹೇಳಬಹುದು. ಅಂಧಕವೃಷ್ಣಿಗಳೆಂದರೆ ಕುರಿಗಾರರಾಯಿತು. ತುರುವಸುಗಳೆಂದರ ದನಗಾರರಾಯಿತು ೯.

ಯದು-ತುರುವಸುಗಳು ದಾಸರೆಂದು, ಅಂದರೆ ಆರ್ಯೇತರ ಎಂದು ಶ್ರೀ ಎನ್. ಕೆ. ದತ್ತ ಶ್ರೀ ರಾಮಪ್ರಸಾದ ಚಂದಾ ಇವರು ಈ ಮೊದಲೇ ಸಿದ್ಧಪಡಿಸಿದ್ದಾರೆ. ೧೦. ಯಾದವ ವಂಶದೊಳಗಿನ ಶ್ರೀ ಕೃಷ್ಣನ ದಾಯಾದಿಗಳಾದ ಕಂಸ, ಶಿಶುಪಾಲ, ಜರಾಸಂಧಾದಿಗಳ ಮೇಲಿಂದಲೂ ಯಾದವರೊಳಗಿನ ಶ್ರೀಕೃಷ್ಣನಂತಹ ಹಲವರು ವೈದಿಕ ಧರ್ಮದ ಬೆಂಬಲಿಗರಾಗಿದ್ದರು; ಉಳಿದವರು ಭಾರತಕಾಲದಲ್ಲಿಯೂ ಕೂಡ ವಿರೋಧಿಗಳಾಗಿಯೇ ಉಳಿದಿದ್ದರೆಂದು ಕಂಡು ಬರುತ್ತದೆ. ಆದುದರಿಂದ ಯದು ತುರುವಸುಗಳು ಮೂಲತಃ ಆರ್ಯೇತರರಾಗಿದ್ದು ಕಾಲಕ್ರಮದಲ್ಲಿ ಅವರು ಆರ್ಯರಲ್ಲಿ ಒಂದುಗೂಡಲಾರಂಭಿಸಿದರೆಂದು ಹೇಳಬೇಕಾಗುತ್ತದೆ.

ಪ್ರಾಕೃತ ಭಾಷೆಯು ಮೊದಲು ವ್ರಜಭಾಷೆ ಎಂದು ಅನಿಸುತ್ತಿತ್ತು. ವ್ರಜ ಎಂದರೆ ಸಮುದಾಯ, ಗೋವಳರ ತಂಡ. ಮಥುರಾ ವೃಂದಾವನದ ಬಳಿಯಲ್ಲಿ ನೆಲೆಸಿದ ಯಾದವರ ತಂಡದಲ್ಲಿಯೇ ಮೊದಲು ಈ ವ್ರಜಭಾಷೆಯು ತಲೆದೋರಿತೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಈ ಪ್ರಾಕೃತದಲ್ಲಿ ಕಾಣಿಸಿಕೊಂಡ ಹಲವು ಶಬ್ದ ಮತ್ತು ಕೆಲವು ಉಚ್ಚಾರಗಳ ವೈಚಿತ್ರ್ಯವನ್ನು ಕುರಿತು ಅನೇಕ ಸಂಶೋಧಿಗರು ತುಂಬಾ ಕುತೂಹಲಿಗಳಾಗಿದ್ದಾರೆ. ಸಂಸ್ಕೃತದಲ್ಲಿ ಇಲ್ಲದ ಹ್ರಸ್ವ 'ಎ, ಒ, ಕಾರಗಳು 'ಳ, ಕಾರವೂ ಪ್ರಾಕೃತದಲ್ಲಿ ಧಾರಾಳವಾಗಿ ಬಂದುದು ಹೇಗೆ ? ಎಂಬ ಸಂದೇಹ ಉಂಟಾಗಿ ಇವು ಅನಾರ್ಯರ ಸಂಪರ್ಕದ ಮೂಲಕವಾಗಿ ಎಂದು ಡಾ. ರಾಮಕೃಷ್ಣ ಭಾಂಡಾರಕರರು ಹೇಳುತ್ತಾರೆ. ೧೧. ತೈಲ—ತೆಲ್ಲ; ಪ್ರೇಮ-ಪೆಮ್ಮ, ಮುಂತಾದವು. ಗಂಗಾ ಯಮುನಾ ತೀರದ ಆರ್ಯರಲ್ಲಿ ಬೆರೆತುಕೊಂಡು ಈ ಬಗೆಯ ಭಾಷೆಯ ಬದಲಾವಣೆಗೆ ಕಾರಣರಾದ ಅನಾರ್ಯರು ಯಾರು, ಎಂಬುದು ತಿಳಿಯದೇ ಸಂಶೋಧಕರೆಲ್ಲ ಈ ವಿಷಯದಲ್ಲಿ ಮುಗ್ಧತೆಯನ್ನೇ ತಾಳುತಲಿದ್ದಾರೆ ಆದರೆ ಅವರು ಯದು ತುರುವಸರೇ ಎಂಬುದನ್ನು ನೆನೆದರೆ ಈ ತೊಡಕು ತಾನೇ ಬಿಡುವುದು. ೧೨.

—೧೬ನೇ ಪುಟ ನೋಡಿರಿ.

ಶಿಕ್ಷಕರ ಸಮಸ್ಯೆ ಪರಿಹಾರ

ಮುಂಬಯಿ ಸರಕಾರದವರು ೨೪ ನೇ ತಾರೀಖಿನ ದಿನ ಪ್ರಕಟನೆಯೊಂದನ್ನು ಹೊರಡಿಸಿ ಪ್ರಾಂತದಲ್ಲಿಯ ಪ್ರಾಥಮಿಕ ಶಿಕ್ಷಕರಿಗೆ ೧೯೪೪ ನೇ ಜುಲೈ ೧ ರಿಂದ ಸರಕಾರಿ ದರದ ಪ್ರಕಾರ ತುಟ್ಟಿ ಭತ್ತೆ ಕೊಡಲಾಗುವುದೆಂದು ಸಾರಿದ್ದಾರೆ. ಆಯಾ ಸ್ಥಾನಿಕ ಸರಕಾರಗಳು ಕೂಡಲೆ ಈ ಹಣವನ್ನು ಪ್ರಾಥಮಿಕ ಶಿಕ್ಷಕರಿಗೆ ಕೊಡಬೇಕೆಂದೂ ಸರಕಾರದವರು ಹಿಂದುಗಡೆ ಆ ಹಣವನ್ನು ಕೊಡುವರೆಂಬೂ ಪ್ರಕಟಿಸಲಾಗಿದೆ. ಶಿಕ್ಷಕರ ಸಂಪಿನ ಅವಧಿಯನ್ನು ಬೇಸಿಗೆಯ ಬಿಡುವಿನ ದಿನಗಳೆಂದು ಹಿಡಿಯಬೇಕೆಂದೂ ಗೊತ್ತುಪಡಿಸಿದ್ದಾರೆ. ಲೋಕಪ್ರಿಯ ಮಂತ್ರಿಗಳು ಆಶ್ವಾಸನ ಕೊಟ್ಟ ಒಂದು ವಾರದಲ್ಲಿಯೇ ಶಿಕ್ಷಕರ ತುಟ್ಟಿಭತ್ತೆಯ ಸಮಸ್ಯೆಯನ್ನು ಇಂತು ಪರಿಹರಿಸಿದ್ದು ಅಭಿನಂದನೀಯವಾಗಿದೆ. ಸಂಪನ್ನು ಸಶರ್ತ ಹಿಂತೆಗೆದುಕೊಳ್ಳಬೇಕೊ ಇಲ್ಲವೆ ಲೋಕಪ್ರತಿನಿಧಿ ಸರಕಾರದಲ್ಲಿ ವಿಶ್ವಾಸವಿಟ್ಟು ಕೂಡಲೆ ಸಂಪು ಹಿಂತೆಗೆದುಕೊಳ್ಳಬೇಕೊ ಎಂಬ ಬಗ್ಗೆ ಶಿಕ್ಷಕ ಸಂಘದವರು ದೀರ್ಘ ವಿಚಾರವಿನಿಮಯ ಮಾಡಿದರು. ಕಾಂಗ್ರೆಸ್ ವಿರೋಧಿಗಳು ಹಲವರು ಸರಕಾರದಿಂದ ಮೊದಲು ಆಶ್ವಾಸನ ಪಡೆದೇ ಸಂಪು ಹಿಂತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟರು. ಆದರೆ ಕೊನೆಗೆ ಸಮಂಜಸವೃತ್ತಿಯ ಶಿಕ್ಷಕರು ತಮ್ಮ ಪ್ರತಿನಿಧಿಗಳ ಮೇಲೆಯೆ ಇಂತು ಅವಿಶ್ವಾಸ ವ್ಯಕ್ತಪಡಿಸುವುದು ಸರಿಯಲ್ಲೆಂದು ಹೇಳಿ ಯಾವ ಕರಾರ ಹಾಕದೆ ಸಂಪನ್ನು ಹಿಂತೆಗೆದುಕೊಂಡು ಇದೇ ೨೪ ನೇ ತಾರೀಖಿನಿಂದ ಮತ್ತೆ ಕೆಲಸ ಪ್ರಾರಂಭಿಸಿದ್ದಾರೆ. ಮಾನ್ಯ ಮಂತ್ರಿಗಳಾದರೂ ಶಿಕ್ಷಕರು ತಮ್ಮ ಮೇಲೆ ಇಟ್ಟ ವಿಶ್ವಾಸಕ್ಕನುಸರಿಸಿ ಒಂದು ವಾರದಲ್ಲಿಯೆ ತುಟ್ಟಿಭತ್ತೆಯ ಪ್ರಶ್ನೆ ಬಿಡಿಸಿದರು. ಇದರಿಂದ ತಮಗಾಗುವ ಹೆಚ್ಚಿನ ಹಾನಿಯನ್ನು ಲೆಕ್ಕಿಸಲಿಲ್ಲ. ಕಾಂಗ್ರೆಸ್ ಪ್ರತಿನಿಧಿಗಳ ಈ ಕಾರ್ಯವನ್ನು ಶಿಕ್ಷಕರು ಎಂದೂ ಮರೆಯಲಾರರು. ಸಂಬಳ ಸ್ಕೇಲಿನ ಪ್ರಶ್ನೆಯನ್ನೂ ಸರಕಾರದವರು ಇದೇ ರೀತಿ ಸಮಾಧಾನಕರವಾಗಿ ಬಿಡಿಸುವರೆಂದು ನಂಬುತ್ತೇವೆ.

ಮದ್ರಾಸ ಮಂತ್ರಿಮಂಡಳ ತೊಡಕು

ಮದ್ರಾಸ ಶಾಸನ ಸಭೆಯ ಆಯ್ಕೆಯಲ್ಲಿ ಕಾಂಗ್ರೆಸ್ಸು ಪ್ರಚಂಡ ಬಹುಮತವನ್ನು ಪಡೆದು ಆಡಳಿತ ನಡೆಸುವ ಅಧಿಕಾರವನ್ನು ಪಡೆಯಿತು. ನಿಯಮದಂತೆ ತಮ್ಮ ಧುರೀಣರನ್ನಾರಿಸುವುದು ಕ್ರಮಪ್ರಾಪ್ತವಾಯಿತು. ಕಾಂಗ್ರೆಸ್ ಪಾರ್ಲಮೆಂಟರಿ ಬೋರ್ಡಿನವರು ಎಲ್ಲ ಪ್ರಾಂತಗಳ ಚುನಾವಣೆಗಳಲ್ಲಿ ನಿರ್ದಿಷ್ಟ ಧ್ಯೇಯ ಧೋರಣಗಳಿಂದ ಹೋರಾಡಿದರು. ತಮ್ಮ ಪರವಾಗಿ ಹುರಿಯಾಳುಗಳನ್ನು ನಿಲ್ಲಿಸಿದರು. ಕಾಂಗ್ರೆಸ್ಸಿನ ಪ್ರಚಾರ ಮಾಡಿದರು. ಚುನಾವಣೆಯನ್ನು ಹೋರಾಡಿದ ಕಾಂಗ್ರೆಸ್ಸೆ ಮಂತ್ರಿಮಂಡಳ ರಚನೆಯಲ್ಲಿಯೂ ತನ್ನ ಧ್ಯೇಯ ಧೋರಣಗಳಂತೆ ಕಾರ್ಯಕಲಾಪ ನಡೆಸುವುದು ಕ್ರಮಪ್ರಾಪ್ತ. ಅದರಂತೆ ಎಲ್ಲ ಪ್ರಾಂತಗಳಲ್ಲಿಯೂ ಕಾಂಗ್ರೆಸ್ಸಿನ ಸಲಹೆಯಂತೆಯೆ ಮಂತ್ರಿಮಂಡಳ ರಚಿತವಾಗಿವೆ. ಆದರೆ ಮದ್ರಾಸದಲ್ಲಿ ಮಾತ್ರ ಧುರೀಣರನ್ನಾರಿಸಿಕೊಳ್ಳುವ ಸಂಬಂಧದಲ್ಲಿ ಶಾಸನ ಸಭೆಯವರು ಕಾಂಗ್ರೆಸ್ ವರಿಷ್ಠರ ಸಲಹೆ ಕೇಳಲಿಲ್ಲ. ಕಾಂಗ್ರೆಸ್ ವರಿಷ್ಠರು ಮದ್ರಾಸಿನ ವಿಶಿಷ್ಟ ಪರಿಸ್ಥಿತಿ, ಇಡೀ ದೇಶದ ಪರಿಸ್ಥಿತಿ ಮತ್ತು ಸದ್ಯದ ಆಯಕಟ್ಟಿನ ಪ್ರಸಂಗವನ್ನು ಗಮನಿಸಿ ಶ್ರೀ ರಾಜಗೋಪಾಲಾಚಾರಿಯವರನ್ನೆ ಆರಿಸಿರೆಂದು ಸಲಹೆ ಕೊಟ್ಟರು. ಆದರೆ ಶಾಸನ ಸಭಾ ಸದಸ್ಯರು ಪ್ರಾಂತೀಯ, ವೈಯಕ್ತಿಕ ಮೊದಲಾದ ಕಾರಣಗಳನ್ನು ಮುಂದೆ ಮಾಡಿಕೊಂಡು ರಾಜಾಜಿಯವರನ್ನಾರಿಸಲಿಲ್ಲ. ಕಾಂಗ್ರೆಸ್ಸಿನ ಶಿಸ್ತಿಗೆ ಇದು ಸರಿಯಾಗಲಿಲ್ಲೆಂದು ಯಾರಾದರೂ ಹೇಳಬಹುದಾಗಿದೆ. ಬಹುಮತದಿಂದ ಧುರೀಣರಾಗಿ ಆರಿಸಲ್ಪಟ್ಟ ಶ್ರೀ ಟಿ. ಪ್ರಕಾಶಂ ರೀಗ ಮಂತ್ರಿಮಂಡಳ ರಚನೆಯಲ್ಲಿ ತೊಡಗಿ ಕಾಂಗ್ರೆಸ್ ವರಿಷ್ಠರ ಸಲಹೆ ಕೋರಿದರು. ಆದರೆ ಧುರೀಣರಾಯ್ಕೆಯಲ್ಲಿಯೆ ತಮ್ಮ ಸಲಹೆ ಕೇಳದ್ದರಿಂದ ಈಗ ಯಾವದೆ ಬಗೆಯ ಸಲಹೆ ಕೊಡಲು ತಾವು ಸಮರ್ಥರಿಲ್ಲೆಂದು ಪಾರ್ಲಮೆಂಟರಿ ಬೋರ್ಡಿನ ಚೇರಮನ್‌ರಾದ ಸರದಾರ ಪಟೇಲರು

ಸಂಪಾದಕೀಯ
ಟೀಕೆ-ಟಿಪ್ಪಣೆಗಳು

ಟಿ. ಪ್ರಕಾಶಂರಿಗೆ ತಿಳಿಸಿದ್ದಾರೆ. ಇದು ಯಥೋಚಿತವೆಂದು ಹೇಳಬಹುದಾಗಿದೆ. ಕಾಂಗ್ರೆಸ್ ವರಿಷ್ಠರು ಹೀಗೆ ಸಲಹೆ ಕೊಡುವುದು ಪ್ರಜಾಪ್ರಭುತ್ವ ತತ್ವಕ್ಕೆ ಸರಿಯೆ? ಇದೊಂದು ಬಗೆಯ 'ಫೆಸಿಜಂ' ಅಲ್ಲವೆ, ಎಂದು ಕಾಂಗ್ರೆಸ್ ವಿರೋಧಿಗಳು ಹಲವರು ಟೀಕಿಸುವರು ಆದರೆ ನಿಷ್ಪಕ್ಷಪಾತತನದಿಂದ ವಿಚಾರ ಮಾಡಿದರೆ ಕಾಂಗ್ರೆಸ್ಸು ಧುರೀಣರಾಯ್ಕೆಯಲ್ಲಿ ಮತ್ತು ಮಂತ್ರಿಮಂಡಳ ರಚನೆಯಲ್ಲಿ ಕೈಹಾಕುವದು ನ್ಯಾಯ್ಯವೆಂದು ಯಾರಾದರೂ ಹೇಳಬಹುದಾಗಿದೆ. ಕಾಂಗ್ರೆಸ್ಸು ಇಡೀ ಜನತೆಯ ಪ್ರಾತಿನಿಧಿಕ ಸಂಸ್ಥೆ. ಚುನಾವಣೆ ಹೋರಾಡುವ, ಮಂತ್ರಿಮಂಡಳ ರಚಿಸುವ ಮೊದಲಾದ ಅಧಿಕಾರವೆಲ್ಲ ಅದಕ್ಕಿದೆ. ಹೀಗೆ ಮಾಡಿರೆಂದು ಸಲಹೆ ಕೊಡಲು ಅದು ಬದ್ಧವಿದೆ. ಆದರೆ ಕಾಂಗ್ರೆಸ್ಸಿನ ಸಲಹೆ ಕೇಳದೆ ಧುರೀಣರನ್ನಾರಿಸಿಕೊಂಡು ಮದ್ರಾಸ ಶಾಸನ ಸಭಾ ಸದಸ್ಯರು ತಮ್ಮ ತಪ್ಪನ್ನೊಪ್ಪಿಕೊಂಡು ಕಾಂಗ್ರೆಸ್ ವರಿಷ್ಠರ ಸಲಹೆಯಂತೆ ವರ್ತಿಸುವದು ಅತ್ಯವಶ್ಯವಾಗಿದೆ. ಅಂದರೇನೆ ಕಾಂಗ್ರೆಸ್ ಚುನಾವಣೆ ಘೋಷಣೆಯನ್ವಯ ಮತದಾರರಿಗೆ ಆಶ್ವಾಸನ ಕೊಟ್ಟು ಆರಿಸಿ ಬಂದ ಸದಸ್ಯರು ತಮ್ಮ ಕರ್ತವ್ಯ ಮಾಡಿದಂತಾಗುತ್ತದೆ. ಪ್ರಾಂತ ಮತ್ತು ದೇಶ ಹಿತವನ್ನನುಲಕ್ಷಿಸಿ ಅವರು ಹಾಗೆ ಮಾಡುವರೆಂದು ನಂಬುತ್ತೇವೆ.

ಅಧಿಕಾರಿಗಳೆಂದರೆ ಜನತಾಸೇವಕರು

ಓಡಿಸಾದ ಕಾಂಗ್ರೆಸ ಮಂತ್ರಿಗಳು ಅಧಿಕಾರ ಸ್ವೀಕರಿಸುವಾಗ ಅಲ್ಲಿನ ಹಿಂದೀ ಗವರ್ನರರಾದ ಸರ್ ಚಂದೂಲಾಲ ತ್ರಿವೇದಿಯವರು ಸರಕಾರಿ ನೋಕರರ ಪರವಾಗಿ ಅವರನ್ನಭಿನಂದಿಸುತ್ತ ಕೆಲ ಮಾತುಗಳನ್ನು ಹೇಳಿದರು. ಪಬ್ಲಿಕ್ ಸರ್ವಿಸ್ ಅಧಿಕಾರಿಗಳು ತಮ್ಮ ಭವಿತವ್ಯದ ಬಗ್ಗೆ ಅಂಜುವ ಕಾರಣವಿಲ್ಲ. ಕಾರ್ಯಕ್ಷಮ ಹಾಗು ವಿಶ್ವಾಸಾರ್ಹ ಅಧಿಕಾರಿಗಳ ಅವಶ್ಯಕತೆ ಮುಂದಾದರೂ ಇದ್ದು ಮಂತ್ರಿಗಳು ಅಧಿಕಾರಿಗಳನ್ನು ಯೋಗ್ಯರೀತಿಯಿಂದ ನಡೆಸಿಕೊಳ್ಳುವ ವಿಶ್ವಾಸ ತಮಗಿದೆಂದು ಮುಂತಾಗಿ ಹೇಳಿದರು. ಮುಖ್ಯ ಮಂತ್ರಿಗಳಾದ ಶ್ರೀ ಹರಿಕೃಷ್ಣ ಮೆಹತಾಬರು ಇದಕ್ಕೆ ಉತ್ತರ ಕೊಡುತ್ತ ಸೇಡು ತೀರಿಸಿಕೊಳ್ಳುವದಕ್ಕಾಗಿ ತಾವು ಅಧಿಕಾರ ವಹಿಸಿಲ್ಲೆಂದೂ ಜನಸಾಮಾನ್ಯರ ಹಿತ ಮಾಡುವ ಇಚ್ಛೆ ಹಾಗು ನಿರ್ಧಾರದಿಂದ ಬಂದಿರುವದಾಗಿಯೂ ಹೇಳಿದರು. ಅಧಿಕಾರಿಗಳು ತಾವು ಜನತೆಯ ಸೇವಕರೆಂಬುದನ್ನು ಮರೆಯದೆ ಜನ ಸಾಮಾನ್ಯರ ಹಾಗು ನಮ್ಮನ್ನಾರಿಸಿ ಕಳಿಸಿದವರ ಹಿತ ಲಕ್ಷಿಸಿ ಕಾರ್ಯ ಮಾಡಲು ಅವರನ್ನು ಬಿನ್ನವಿಸಿದರು. ನಿಜವಾಗಿ ವಿಚಾರ ಮಾಡಿದರೆ ಮಂತ್ರಿಮಂಡಳದ ಧೋರಣದ ಬಗ್ಗೆ ಗವರ್ನರರು ಈ ರೀತಿ ಭೀತಿಯನ್ನು ವ್ಯಕ್ತಪಡಿಸಿದ್ದೇಕೋ ತಿಳಿಯದು. ಅಧಿಕಾರಿಗಳು ತಮ್ಮ ಹೊಟ್ಟೆ, ಹಿತಕ್ಕಾಗಿ ತಾವು ಅಧಿಕಾರದಲ್ಲಿರುವದು ಎಂದು ಮುಂತಾದ್ದನ್ನು ಚೆನ್ನಾಗಿ ತಿಳಿದುಕೊಂಡು ಕೆಲಸ ಮಾಡಹತ್ತಿದರೆ ಯಾವ ಸರಕಾರ ಬಂದರೂ ಅಂಜುವ ಕಾರಣವಿಲ್ಲ. ಸೇಡು ತೀರಿಸಿಕೊಳ್ಳುವ ವೃತ್ತಿಯಿಂದ ಅಧಿಕಾರ ಸ್ವೀಕರಿಸಿಲ್ಲ ಎಂದು ಮಾನ್ಯಮಂತ್ರಿಗಳು ಆಶ್ವಾಸನ ಕೊಟ್ಟಿದ್ದರೂ ಅಧಿಕಾರಿಗಳ ಅನ್ಯಾಯ, ಅಧಿಕಾರದ ಅತಿಕ್ರಮಣ, ಅತ್ಯಾಚಾರ ಮೊದಲಾದವುಗಳನ್ನು ಯಾರೂ ಕ್ಷಮಿಸಲಾರರೆಂಬುದು ಸುಸ್ಪಷ್ಟವಾಗಿದೆ. ಮಾನ್ಯಮಂತ್ರಿಗಳು ಹೇಳಿದಂತೆ ಅಧಿಕಾರಿಗಳು ತಾವು ಜನತೆಯ ಸೇವಕರೆಂದು ತಿಳಿದುಕೊಂಡು ಆಡಳಿತವನ್ನು ನಡೆಸಬೇಕಲ್ಲದೆ ಜನತೆಯನ್ನು ಛಲಿಸುವದಕ್ಕಾಗಿ ಅದರ ತಲೆಯ ಮೇಲೆ ಮೆಣಸು ಅರಿಯುವದಕ್ಕಾಗಿ ತಮ್ಮ ಅಸ್ತಿತ್ವವಿಲ್ಲೆಂಬುದನ್ನು ಮನಗಾಣಬೇಕು. ಅಂದರೆ ಎಲ್ಲಿಯೂ ತಿಕ್ಕಾಟಕ್ಕವಕಾಶವುಳಿಯದು. ಆಡಳಿತವೂ ಸುಖಸಮಾಧಾನಗಳಿಂದ ಸಾಗಿ ಜನತೆಯು ಸುಖ ಸಮೃದ್ಧಿಗಳಿಂದ ನಲಿದಾಡಬಲ್ಲದು.

ಬಂಗಾಲದಲ್ಲಿ ಲೀಗ ಸರಕಾರ

ಸದ್ಯದ ಪರಿಸ್ಥಿತಿಯನ್ನನುಲಕ್ಷಿಸಿ ಪ್ರಾಂತದ ಹಿತ ಸಾಧಿಸುವ ಇಚ್ಛೆಯಿಂದ ಬಂಗಾಲ ಶಾಸನ ಸಭೆಯಲ್ಲಿಯ ಕಾಂಗ್ರೆಸ ಪಕ್ಷದವರು ಲೀಗಿನವರೊಡನೆ ಮಂತ್ರಿಮಂಡಳ ರಚನೆಯಲ್ಲಿ ಸಹಕರಿಸಿ ಆಡಳಿತ ಭಾರವನ್ನು ವಹಿಸಬೇಕೆಂದು ನಿರ್ಧರಿಸಿದರು. ಈ ಧೋರಣಕ್ಕನುಸಾರವಾಗಿ ಕಾಂಗ್ರೆಸ್ ಧುರೀಣರಾದ ಶ್ರೀ ಕಿರಣಶಂಕರರಾಯರು ಲೀಗ ಧುರೀಣರಾದ ಸುರ್ಹವರ್ದಿಯವರೊಡನೆ ವಿಚಾರ ವಿನಿಮಯ ಮಾಡಿದರು. ಪತ್ರವ್ಯವಹಾರವೂ ನಡೆಯಿತು. ಕೊನೆಗೆ ಎಲ್ಲವೂ ನಿಷ್ಫಲವಾಗಿ ಪರಿಣಮಿಸಿತು. ಕಾಂಗ್ರೆಸ್ಸಿನವರು ಹಾಕಿದ ನ್ಯಾಯ್ಯವಾದ ಕರಾರುಗಳನ್ನು ಒಪ್ಪಲು ಲೀಗ ಧುರೀಣರು ಸಿದ್ಧರಾಗಲಿಲ್ಲ. ಮುಖ್ಯ ಕರಾರುಗಳೆಂದರೆ ೧) ಮುಸ್ಲಿಂ ಲೀಗ ಶಾಸನ ಸಭಾ ಸದಸ್ಯರ ಸಭೆಯಲ್ಲಿ ಸುರ್ಹವರ್ದಿಯವರು ಮಾಡಿದ ಭಾಷಣ ಮತ್ತು ಪತ್ರಿಕೆಗಳಲ್ಲಿ ಕೊಟ್ಟ ಪ್ರಕಟನೆಗಳಬಗ್ಗೆ ಸ್ಪಷ್ಟೀಕರಣ ೨) ಜಾತೀಯ ಸ್ವರೂಪದ ವಿವಾದಾಸ್ಪದ ಮಸೂದೆ ಮಂಡಿಸತಕ್ಕದ್ದಲ್ಲ. ಯಾವದೊಂದು ವಿಷಯವು ಜಾತೀಯ ಸ್ವರೂಪದ್ದಿದೆಯೊ ಇಲ್ಲವೊ ಎಂಬದನ್ನು ಸಮ್ಮಿಶ್ರ ಪಕ್ಷದ ೨।೩ ದಷ್ಟು ಮತಗಳಿಂದ ನಿರ್ಣಯಿಸಬೇಕು. ೩) ಮಂತ್ರಿಮಂಡಳದಲ್ಲಿ ಮುಖ್ಯ ಪ್ರಧಾನರನ್ನು ಬಿಟ್ಟು ಉಳಿದ ಮಂತ್ರಿಗಳಲ್ಲಿ ಕಾಂಗ್ರೆಸ ಹಾಗು ಲೀಗಿನವರು ಬಹುಸಂಖ್ಯೆಯಲ್ಲಿರಬೇಕು ಇಲ್ಲವೆ ಅದಕ್ಕೆ ಬದಲಾಗಿ ಕನಿಷ್ಠ ಗೃಹಖಾತೆ ಹಾಗೂ ನಾಗರಿಕ ಪೂರಯಿಕೆ ಖಾತೆ ಕಾಂಗ್ರೆಸ್ಸಿಗೆ ಕೊಡಬೇಕು. ೪) ರಾಜಕೀಯ ಸ್ಥಾನಬದ್ಧರ ಬಿಡುಗಡೆ ಮಾಡಲು ಒಪ್ಪಿಕೊಂಡಂತೆ ರಾಜಕೀಯ ಅಪರಾಧಗಳಿಗಾಗಿ ಶಿಕ್ಷೆಗೊಳಗಾದವರನ್ನೂ ಬಿಡುಗಡೆ ಮಾಡುವದವಶ್ಯ. ಈ ನಾಲ್ಕು ಮಹತ್ವದ ಕರಾರುಗಳನ್ನು ಕಾಂಗ್ರೆಸಪಕ್ಷದವರು ಹಾಕಿದ್ದರು. ಇದಕ್ಕೆ ಸುರ್ಹವರ್ದಿಯವರು ಅಲ್ಪಸಂಖ್ಯಾಕರನ್ನು ಕುರಿತು ಮುಸ್ಲಿಂ ಲೀಗ ಧೋರಣ ನಿರ್ದೇಶಿಸುವ ಪ್ರಕಟನೆ ಹೊರಡಿಸಲಾಗುವದೆಂದು ಮೊದಲನೆ ಕರಾರಕ್ಕೆ ಉತ್ತರ ಕೊಟ್ಟರು. ಎರಡನೇ ಕರಾರಿನ ಬಗ್ಗೆ ಸುರ್ಹವರ್ದಿಯವರು ಭಿನ್ನಾಭಿಪ್ರಾಯ ವ್ಯಕ್ತಮಾಡುತ್ತ ಬಂಗಾಲ ಮಾಧ್ಯಮಿಕ ಶಿಕ್ಷಣ ಮಸೂದೆ ಒಳಗೊಂಡು ಕೆಲವೊಂದು ಮಸೂದೆ ತರಲು ಬದ್ಧವಾಗಿರುವದೆಂದು ಉತ್ತರಿಸಿದರು. ಮೂರನೇ ಪ್ರಶ್ನೆಯನ್ನು ಸುರ್ಹವರ್ದಿಯವರು ಮಾನ್ಯಮಾಡಲಿಲ್ಲ. ಮುಖ್ಯ ಪ್ರಧಾನರೆ ಗೃಹಖಾತೆ ವಹಿಸುವರೆಂದು ಅವರ ಹೇಳಿಕೆ. ನಾಲ್ಕನೆಯ ಪ್ರಶ್ನೆಯ ಬಗ್ಗೆ ವಿಚಾರ ಮಾಡಲಾಗುವುದಾಗಿ ಆಶ್ವಾಸಿಸಿದರು. ಈ ರೀತಿಯಾಗಿ ಲೀಗ ಧುರೀಣರು ಯಾವ ಕರಾರುಗಳಿಗೂ ಸಮಾಧಾನಕರ ಉತ್ತರ ಕೊಡದ್ದರಿಂದ ಕಾಂಗ್ರೆಸ್ಸು ಸಹಕರಿಸಲು ಸಿದ್ಧವಾಗಲಿಲ್ಲ. ಲೀಗು ಇತ್ತೀಚೆಗೆ ತಳೆದ ಧೋರಣವನ್ನು ನೋಡಿದರೆ ಬಂಗಾಲದಲ್ಲಿ ಕಾಂಗ್ರೆಸ್ ಸಮ್ಮಿಶ್ರ ಸರಕಾರ ಸ್ಥಾಪನೆಯಾಗದಿದ್ದುದರಲ್ಲಿ ಆಶ್ಚರ್ಯವಿಲ್ಲ. ಸಿಂಧ, ಪಂಜಾಬ ಪ್ರಾಂತಗಳಲ್ಲಿ ಅವರು ಅನುಸರಿಸಿದ ಧೋರಣವನ್ನೆ ಬಂಗಾಲದಲ್ಲಿಯೂ ಅನುಸರಿಸಿದರು. ಬಂಗಾಲದ ವಿಶಿಷ್ಟ ಪರಿಸ್ಥಿಯನ್ನನುಲಕ್ಷಿಸಿ ಲೀಗಿನವರು ಕಾಂಗ್ರೆಸ್ಸಿನ ಸಹಕಾರದಿಂದ ಆಡಳಿತ ಸಾಗಿಸಿದ್ದರೆ ವಿಹಿತವಾಗುತ್ತಿತ್ತು. ಯುರೋಪಿಯನ್‌ರ ಬೆಂಬಲದಿಂದ ಆಡಳಿತ ಸಾಗಿಸುವ ಲೀಗಿನವರು ಪ್ರಾಂತದಲ್ಲಿ ಅದೆಂತು ಸುಖ ಸಮಾಧಾನ ಶಾಂತಿ ಸಮೃದ್ಧಿ ನೆಲಸಲು ಶಕ್ತರಾಗುವರೊ ನೋಡಬೇಕಾಗಿದೆ.

ಇಂಡೊನೇಶಿಯದ ಸಹಾಯ

ಭಾರತದ ಸದ್ಯದ ಆಹಾರ ದುಃಸ್ಥಿತಿಯನ್ನನ್ನು ಲಕ್ಷಿಸಿ ಇಂಡೊನೇಶಿಯದ ರಿಪಬ್ಲಿಕು ತನಗೆ ಸಾಧ್ಯವಿದ್ದುದನ್ನೆಲ್ಲ ಮಾಡಲು ಮುಂದಾಗಿದೆಂದು ಅಲ್ಲಿಂದ ಬಂದ ಸುದ್ದಿಯಿಂದ ತಿಳಿಯುತ್ತದೆ. ಇಂಡೋನೇಶಿಯದ ಮುಖ್ಯ ಮಂತ್ರಿ ಡಾ. ಶಹರೀರರು ಈ ಸಂಬಂಧದಲ್ಲಿ 'ಭಾರತೀಯರ ಬಗ್ಗೆ ನಮಗೆ ವಿಶೇಷ ಸಹಾನುಭೂತಿಯಿದೆ. ಎರಡು ಸ್ವತಂತ್ರ ರಾಷ್ಟ್ರಗಳು ಆರ್ಥಿಕ ಮತ್ತು ಆಧ್ಯಾತ್ಮಿಕ ಸಂಬಂಧವನ್ನು ಬೆಳಿಸಿಕೊಳ್ಳಲಿಚ್ಛಿಸುವಂತೆ ನಾವು ಭಾರತದೊಡನೆ ಸಂಬಂಧ ಬೆಳಿಸಿಕೊಳ್ಳಲಿಚ್ಛಿಸುತ್ತೇವೆ. ಇಂಡೋನೇಶಿಯಕ್ಕೆ ಬಟ್ಟೆಬರೆಗಳ ಅತ್ಯಗತ್ಯವಿದೆ. ಅದುದರಿಂದ ನಾವು ಬಟ್ಟೆಬರೆಗಳನ್ನು ಸಂಪಾದಿಸುವ ಉದ್ದೇಶದಿಂದ ಭಾರತಕ್ಕೆ ೫ ಲಕ್ಷ ಟನ್ ಅಕ್ಕಿ ಕೊಡಲು ಸಿದ್ಧರಿದ್ದೇವೆಂದು, ಮುಂತಾಗಿ ಸಾರಿದ್ದಾರೆ. ಹಿಂದುಸ್ತಾನ ಸರಕಾರದವರು ಸಹಕಾರದ ಈ ಹಸ್ತವನ್ನು ಸ್ವಾಗತಿಸಿ ಇಂಡೋನೇಶಿಯದವರು ಕೊಡಮಾಡಿದ ೫ ಲಕ್ಷ ಟನ್ ಅಕ್ಕಿಯನ್ನು ತೆಗೆದುಕೊಂಡು ಅವರಿಗೆ ಅವಶ್ಯವಿದ್ದ ಬಟ್ಟೆಬರೆಗಳನ್ನು ಪೂರಯಿಸಬೇಕು. ಯಾವದೆ ಬಗೆಯ ಒಣ ಪ್ರತಿಷ್ಠೆಗೊಳಗಾಗದೆ ಹಿಂದುಸ್ತಾನ ಸರಕಾರದವರು ಈ ಕೊಡುಗೆಯನ್ನು ಸ್ವೀಕರಿಸಬೇಕು. ಆಹಾರ ಪ್ರಶ್ನೆ ಸಂಬಂಧದಲ್ಲಿ ಕೇಂದ್ರ ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿದಾಗ ಆಹಾರ ಪದಾರ್ಥ ಎಲ್ಲಿಂದಲೆ ಸಿಕ್ಕಲಿ ಅದನ್ನು ಬರಮಾಡಿಕೊಳ್ಳುವುದಾಗಿ ಸರಕಾರದವರು ಹೇಳಿದ್ದುಂಟು. ಅನಾಯಾಸವಾಗಿ ಮುಂದೆ ಬಂದ ಈ ಕೊಡುಗೆಯನ್ನು ಹಿಂದುಸ್ತಾನ ಸರಕಾರದವರು ಸ್ವೀಕರಿಸಿ ಕೊಂಚ ಮಟ್ಟಿಗಾದರೂ ಆಹಾರ ಪರಿಸ್ಥಿತಿ ಸುಧಾರಿಸಬೇಕೆಂದು ಸೂಚಿಸುತ್ತೇವೆ.

೩॥ಕೋಟಿ ಮುಸ್ಲಿಮರ ಗತಿಯೇನು?

ಮುಸ್ಲಿಂ ಲೀಗಿನವರು ಪಾಕಿಸ್ತಾನದ ಬಗ್ಗೆ ಹಟ ಹಿಡಿದು ಹಿಂದುಸ್ತಾನದ ಅಖಂಡತ್ವಕ್ಕೇ ಅರೆದಾಳ ಬಡೆಯಲುಪಕ್ರಮಿಸಿರುವರಷ್ಟೆ- ಅವರೀ ಧೋರಣೆಯಿಂದ ಪಾಕಿಸ್ತಾನ ಪ್ರದೇಶದಲ್ಲಿಯ ಮುಸಲ್ಮಾನರ ಹಿತ ಸಾಧಿಸುವರೆಂದು ಅವರ ಭ್ರಮೆ. ಪಾಕಿಸ್ತಾನ ಪ್ರದೇಶವು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗುವದಿಲ್ಲೆಂದೂ ಪರಕೀಯರ ಮೋರೆ ನೋಡುತ್ತ ಕೂಡ್ರಬೇಕಾಗುವದೆಂದೂ ಅರ್ಥಶಾಸ್ತ್ರಜ್ಞರು ಹೇಳುವದುಂಟು. ಆದರೂ ಲೀಗ ಅಧ್ವರ್ಯುಗಳು ಆ ಬಗ್ಗೆ ಹಟ ನಡೆಸಿದ್ದಾರೆ. ಹೀಗೆ ಪಾಕಿಸ್ತಾನದಬಗ್ಗೆ ಹಟ ಹಿಡಿಯುವಾಗ ಪಾಕಿಸ್ತಾನೇತರ ಪ್ರಾಂತಗಳಲ್ಲಿಯ ಮುಸಲ್ಮಾನರ ಗತಿಯೇನಂಬದನ್ನು ಜಿನ್ನಾ ಪ್ರಭೃತಿಗಳು ವಿಚಾರಸಿರುವಿರೊ ಎಂಬದಾಗಿ ಮದ್ರಾಸ ಪ್ರಾಂತಿಕ ರಾಷ್ಟ್ರೀಯ ಮುಸಲ್ಮಾನ ಮಜಲಿಸ್‌ದ ಅಧ್ಯಕ್ಷರಾದ ಎ ಎಂ ಅಲ್ಲಾಪಿಚಾಯ ಇವರು ಒಂದು ಪ್ರಕಟನೆಯಲ್ಲಿ ಅಭಿಪ್ರಾಯಪಟ್ಟಿರುವರು. 'ಪಾಕಿಸ್ತಾನೇತರ ಪ್ರದೇಶದಲ್ಲಿರುವ ೩॥ ಕೋಟಿ ಮುಸಲ್ಮಾನರು ಲೀಗು ತಮ್ಮನ್ನು ಮೋಸಮಾಡಿತೆಂಬದನ್ನು ಬೇಗ ಕಂಡು ಹಿಡಿಯುವರು. ಪಾಕಿಸ್ತಾನಕ್ಕಾಗಿ ತಮ್ಮ ಸರ್ವಸ್ವವನ್ನು ಸೂರೆಮಾಡಿದರೆಂಬದೂ ಅವರ ಮನವರಿಕೆಯಾಗುವದು ಎಂದು ಅವರು ಅಭಿಪ್ರಾಯಪಟ್ಟಿರುವರು. ಕಾಂಗ್ರೆಸು ಮುಂದೆ ಮಾಡಿದ ಸಹಕಾರದ ಹಸ್ತವನ್ನು ಧಿಕ್ಕರಿಸಿ ಕಾಂಗ್ರೆಸ ಅಧ್ಯಕ್ಷರನ್ನು ಮನವಾರೆ ನಿಂದಿಸುತಿರುವರು. ಪಾಕಿಸ್ತಾನಕ್ಕಾಗಿ ಲೀಗ ಸದಸ್ಯರು ಕುರಾಣ ಸಾಕ್ಷಿಯಾಗಿ ಪ್ರತಿಜ್ಞೆ ತೆಗೆದುಕೊಂಡಿರುವರಂತೆ. ಆದರೆ ಹೀಗೆ ಪ್ರತಿಜ್ಞೆ ತೆಗೆದುಕೊಳ್ಳುವಾಗ ಅವರು ಪಾಕಿಸ್ತಾನೇತರ ಪ್ರದೇಶದಲ್ಲಿಯ ೩॥ ಕೋಟಿ ಮುಸಲ್ಮಾನರ ಜೀವನವನ್ನೇ ಮಾರಿಬಿಟ್ಟಿರುವರೆಂಬುದನ್ನು ಅವರರಿತಿರುವರೊ? ತಿಳಿಯದಲೆ ಮಾಡಿದ ತಪ್ಪನ್ನು ಯಾರಾದರೂ ಕ್ಷಮಿಸಬಹುದು, ಆದರೆ ಬುದ್ಧಿಪೂರ್ವಕ ಮಾಡಿದ ತಪ್ಪನ್ನು ಕ್ಷಮಿಸುವದೆಂತು ಎಂದೂ ಅವರು ಕೇಳಿರುವರು. ಮೇಲಿನ ವಿವರಣೆಯನ್ನು ನೋಡಿದರೆ ಪಾಕಿಸ್ತಾನೇತರ ಪ್ರದೇಶದಲ್ಲಿಯ ಮುಸಲ್ಮಾನರು ಪಾಕಿಸ್ತಾನದ ಬಗ್ಗೆ ಎಷ್ಟೊಂದು ಭಯಭೀತರಾಗಿರುವರೆಂಬುದು ಸ್ಪಷ್ಟವಾಗುವದು. ದಕ್ಷಿಣ ಹಿಂದುಸ್ತಾನದಲ್ಲಿರುವ ಮುಸಲ್ಮಾನರೂ ಪಾಕಿಸ್ತಾನ ಪಾಕಿಸ್ತಾನವೆಂದು ಕೂಗುತಿರುವರು. ಅವರು ಅಲ್ಲಾಪಿಚಾಯಿಯವರ ಪ್ರಕಟನೆಯನು ಚೆನ್ನಾಗಿ ಓದಿಕೊಂಡು ಆತ್ಮಘಾತಕ ಧೋರಣೆವನ್ನು ಬಿಟ್ಟುಗೊಡುವದು ವಿಹಿತವಾಗಿದೆ. ಬರಿ ಘೋಷಣೆಗಳಿಂದ ಯಾವ ಪುರುಷಾರ್ಥವೂ ಸಾಧ್ಯವಾಗದು. ತಮ್ಮ ಹಿತಯಾತರಲ್ಲಿ ಅಡಕವಾಗಿದೆಂಬದನ್ನು ಮನದಂದು ಅದರಂತೆ ಕಾರ್ಯಪ್ರವೃತ್ತರಾಗುವುದು ಜಾಣರ ಲಕ್ಷಣ.

ಜಿನ್ನಾ ಸಾಹೇಬರು ಕೆಳಗಿಳಿದು ಬರುವರೆ?

ಕೇಂದ್ರದ ನಡುಗಾಲ ಸರಕಾರದಲ್ಲಿ ಭಾಗವಹಿಸಬಹುದು

ಕಾಂಗ್ರೆಸ್ ಧೋರಣೆಯ ಬಗ್ಗೆ ಸರದಾರರ ಸ್ಪಷ್ಟೀಕರಣ

ಜಿನ್ನಾರಿಗೆ ಸೊಪ್ಪು ಹಾಕುವ ಲಕ್ಷಣವಿಲ್ಲ

ಜಗತ್ತಿನ ಅತಿ ಮೋಹಕ ಸೌಂದರ್ಯ ಸ್ಥಾನವಾದ ಕಾಶ್ಮೀರದಲ್ಲಿ "ಮೀನು ಹಿಡಿಯುವ ಬೇಟೆಯಾಡುವ" ಮೂಲಕ ವಿಶ್ರಾಂತಿ ಪಡೆಯುವದಾದ ಮೇಲೆ ಬ್ರಿಟಿಶ ಮಂತ್ರಿತ್ರಯರು ಉರಿಬಿಸಿಲಿನ ದಿಲ್ಲಿಯ ತಮ್ಮ ಹದಬಿಸಿ ಕೋಣೆಗಳಿಗೆ ತಾ. ೨೪ ಕ್ಕೆ ಮರಳಿದ್ದಾರೆ. ಈ ಸಂಚಿಕೆ ಓದುಗರ ಕೈ ಸೇರುವ ಮುನ್ನ ಇತಿಹಾಸಪ್ರಸಿದ್ಧ ನಿರ್ಣಯಗಳನ್ನು ಅವರು ಮಾಡಬಹುದೆಂದು ತೋರುತ್ತದೆ.

ಅವರ ಒಂದು ವಾರದ ಅನುಪಸ್ಥಿತಿಯ ಅವಸರದಲ್ಲಿ ದೇಶದ ಪ್ರಮುಖ ಪಕ್ಷಗಳು, ಮುಖ್ಯವಾಗಿ ಕಾಂಗ್ರೆಸ್ ಮತ್ತು ಲೀಗ ಮುಂದಾಳುಗಳು ಒಂದೆಡೆ ಸೇರಿ ತಮ್ಮೊಳಗೆ ಒಪ್ಪಂದ ಮಾಡಿಕೊಳ್ಳಲು ಕೆಣಗಬೇಕೆಂಬ ಆಶೆಯನ್ನು ಬ್ರಿಟಿಶ ಮಂತ್ರಿಗಳು ವ್ಯಕ್ತಗೊಳಿಸಿದ್ದರು. ಆದರೆ ಅಂಥ ಭೆಟ್ಟಿ ಯಾವುದೂ ಸಂಭವಿಸಲಿಲ್ಲ. ಅದರಲ್ಲಿ ಆಶ್ಚರ್ಯವೂ ಇಲ್ಲ. ತನ್ನ ಪಾಲಿಗೆ ಕಾಂಗ್ರೆಸ್ಸು ತನ್ನ ನಿಲುಮೆಯನ್ನು ನಿಸ್ಸಂದಿಗ್ಧ ವಚನಗಳಲ್ಲಿ ಸ್ಪಷ್ಟಗೊಳಿಸಿ ಆಗಿತ್ತು. ದೇಶದ ವಿಭಜನೆಗೆ ತಾನು ಸರ್ವಥಾ ಸಮ್ಮತಿಸಲಾರೆ, ಪರಮಾವಧಿ ಸ್ವಾಯತ್ತತೆಯುಳ್ಳ ಪ್ರಾಂತಗಳು ಮತ್ತು ಪ್ರಬಲ ಕೇಂದ್ರವುಳ್ಳ ಸಂಯುಕ್ತ ಘಟನೆಯೇ ತನಗೆ ಮಾನ್ಯವಾದುದು, ಎಂದು ಅದು ನಿರ್ಧಾರವಾಗಿ ನುಡಿದಾಗಿತ್ತು. ಅತ್ತ ಮುಸ್ಲಿಂ ಲೀಗಾದರೂ ಎರಡು ಪ್ರತ್ಯೇಕ ರಾಷ್ಟ್ರಗಳು ತನ್ನ ಅಚಲ ಆದರ್ಶವೆಂದು ಹಟ ತೊಟ್ಟಿತ್ತು. ಇಂಥ ಸ್ಥಿತಿಯಲ್ಲಿ ಮಾತುಕತೆ ನಡೆಸುವದು ವ್ಯರ್ಥವೇ ಆಗಿತ್ತು. ಜಿನ್ನಾ ಸಾಹೇಬರು ಎಂದಿನಿಂದಲೂ ತಮ್ಮ ಶ್ರೀಮದ್ಗಾಂಭೀರ್ಯ ಔದ್ಧತ್ಯಗಳಿಂದಲೇ ಮುಸ್ಲಿಂ ಜನಸಾಮಾನ್ಯದ ಮನಸ್ಸನ್ನು ಕೊಚ್ಚಿಕೊಂಡು ಹೋದವರು. ಗಾಂಧೀಜಿ ಇಲ್ಲವೆ ಮೌಲಾನಾ ಅಝಾದರು ಇನ್ನೊಮ್ಮೆ ಅವರನ್ನು ಭೆಟ್ಟಿಯಾಗಹೋದರೆ ಆ ಪ್ರಸಂಗವನ್ನು ಜಿನ್ನಾ ಸಾಹೇಬರು, ಹಿಂದೆ ಎಷ್ಟೋ ಬಾರಿ ಮಾಡಿದಂತೆ, ತಮ್ಮ ಪ್ರತಿಷ್ಠೆಯನ್ನು ಬೆಳೆಸಲು ಉಪಯೋಗಿಸಿಕೊಂಡು ಕೊನೆಗೆ ಯಾವ ಒಪ್ಪಂದಕ್ಕೂ ಎಡೆಯಿಲ್ಲದಂತೆ ಮಾಡಿ ಮಾತುಕತೆ ಮುರಿಯುವದರಲ್ಲಿ ಸಂದೇಹವೇ ಇದ್ದಿಲ್ಲ. ಅದುದರಿಂದ ಈ ಸ್ಥಿತಿಯಲ್ಲಿ ಜಿನ್ನಾರ ಭೆಟ್ಟಿಗೆ ಹೋಗದಂತೆ ಮಹಾತ್ಮರಿಗೆ ಕಾಂಗ್ರೆಸ ಪ್ರಮುಖರು ಪ್ರಾರ್ಥಿಸಿಕೊಂಡರೆಂದು ತೋರುತ್ತದೆ.

ಇನ್ನೂ ಆಶೆ ಇದೆ?

ಬ್ರಿಟಿಶ್ ಮಂತ್ರಿತ್ರಯರಿಗೆ ಕಾಂಗ್ರೆಸ್ ಲೀಗುಗಳ ನಡುವೆ ಒಂದು ಒಡಂಬಡಿಕೆಯನ್ನು ತಂದೊಡ್ಡುವ ಆಶೆ ಇನ್ನೂ ಇದೆಯೆಂದು ತಿಳಿಸಲಾಗಿದೆ. ಅವರ ಯೋಜನೆ ಪ್ರತ್ಯೇಕ ಹಿಂದೂ ಮತ್ತು ಮುಸ್ಲಿಂ ಸಂಯುಕ್ತ ರಾಜ್ಯಗಳನ್ನು ಮಾಡಿ ಅವುಗಳ "ಸಡಿಲಾದ" ನಾಡಕೂಟವೊಂದನ್ನು ನಿರ್ಮಿಸುವದನ್ನೇ ಉಪಾಯವೆಂದು ಪರಿಗಣಿಸುತ್ತಿದೆಯೆಂದು ನಂಬಲು ಎಡೆಯುಂಟು. ತಾ. ೨೪ ಕ್ಕೆ ಅವರು ದಿಲ್ಲಿಯಲ್ಲಿ ಪಂ. ಜವಾಹರಲಾಲರನ್ನು ಭೋಜನ ಸಮಾರಂಭದಲ್ಲಿ ಭೆಟ್ಟಿಯಾಗಿ ಸೂಚನೆಗಳನ್ನು ಅವರ ಮುಂದಿರಿಸಿದರೆಂದೂ ತಾ. ೨೫ ಕ್ಕೆ (ಅಂದರೆ ಇದನ್ನು ಬರೆಯುತ್ತಿರುವ ಹೊತ್ತಿಗೆ) ಜಿನ್ನಾರನ್ನು ಔತಣ ಕೂಟದಲ್ಲಿ ಭೆಟ್ಟಿಯಾಗಿ ಆ ಸೂಚನೆಗಳನ್ನು ಅವರ ಮುಂದಿರಿಸುವರೆಂದೂ ಹೇಳಲಾಗಿದೆ. ಸರ್ ಸ್ಟಾಫೋರ್ಡ್ ಕ್ರಿಪ್ಸರು ಈಗ ವಿಶೇಷ ಚಪಲತೆಯನ್ನು ತೋರಿಸುತಿದ್ದಾರೆ. ಬೇಗನೆ ಬ್ರಿಟಿಶ ಮಂತ್ರಿತ್ರಯರು, ಕಾಂಗ್ರೆಸ್ ಮತ್ತು ಲೀಗ ಸಂಯುಕ್ತ ಸಭೆಯೊಂದು ಸೇರಬಹುದೆಂಬ ನಂಬಿಕೆ ಪ್ರಬಲವಾಗಿದೆ.

ಸರದಾರರ ಹೇಳಿಕೆ

ಜಿನ್ನಾರ ಬಾಗಿಲು ಕಾಯುವ ಧೋರಣೆಯನ್ನು ಕಾಂಗ್ರೆಸ್ಸು ಸಂಪೂರ್ಣವಾಗಿ ಪರಿತ್ಯಜಿಸಿದೆ. ಬದಲಿಗೆ ಕಾಶ್ಮೀರದಿಂದ ಬ್ರಿಟಿಶ ಮಂತ್ರಿಗಳು ಮರಳುವದಕ್ಕೆ ಸ್ವಲ್ಪ ಮೊದಲು ಸರದಾರ ವಲ್ಲಭಭಾಯಿ ಪಟೇಲರು ಕೊಟ್ಟ ಹೇಳಿಕೆ ಜಿನ್ನಾರಿಗೊಂದು ಆಹ್ವಾನವೇ ಆಗಿದೆಯೆಂದು ಹೇಳಬಹುದು. ಹಿಂದೀ ಜಾತೀಯ ಸಮಸ್ಯೆಯನ್ನು ಅಂತರ್‌ರಾಷ್ಟ್ರೀಯ ಮಧ್ಯಸ್ಥಿಕೆಗೊಪ್ಪಿಸಲು ಕಾಂಗ್ರೆಸ್ಸು ಸಿದ್ಧವಿದೆಯೆಂದು ಅವರು ಹೇಳಿದರು. ಅದಕ್ಕಿಂತ ಉತ್ತಮವಾದ ಮಾರ್ಗ ಬೇರೊಂದಿಲ್ಲವೆಂದು ಅವರಅಭಿಪ್ರಾಯ. ಅವರು ಇನ್ನೊಂದು ವಿಕಲ್ಪವನ್ನೂ ಸೂಚಿಸಿದರು. ಬ್ರಿಟಿಶರು ಕಾಂಗ್ರೆಸ್ ಅಥವಾ ಲೀಗಿಗೆ ಅಧಿಕಾರ ವಹಿಸಿಕೊಟ್ಟು ಹೊರಬಿದ್ದು ಹೋಗಲೆಂಬುದೇ ಅದು. ಹೀಗೆ ಮಾಡಿದರೆ ಅಧಿಕಾರ ವಹಿಸಿದ ಪಕ್ಷದೊಡನೆ ಇತರ ಪಕ್ಷಗಳು ಒಪ್ಪಂದಕ್ಕೆ ಬರಲೇಬೇಕಾಗುವದು. ಶಾಂತಕ್ರಮಬದ್ಧ ರೀತಿಯಿಂದ ಇದು ಜರಗದಿರಬಹುದೆಂದು ಸರದಾರರು ಒಪ್ಪುತ್ತಾರೆ. ಸ್ವಲ್ಪ ಗಲಭೆಯಾದರೂ ಆದೀತು. ಆದರೆ ವಿಧಿಯಿಲ್ಲ, ಎಂದು ಅವರ ಹೇಳಿಕೆ. ಬ್ರಿಟಿಶರೇ ಏನಾದರೊಂದು ನಿರ್ಣಯವನ್ನು ಹೇರುವದಕ್ಕೆ ಮಾತ್ರ ಅವರು ವಿರುದ್ಧವಾಗಿದ್ದಾರೆ. ಕೇಂದ್ರದಲ್ಲಿ ಒಡನೆ ನಡುಗಾಲದ ಸರಕಾರವನ್ನು ಸ್ಥಾಪಿಸಬೇಕೆಂದೂ ಅವರು ಒತ್ತಿ ಹೇಳಿದರು. ಪ್ರತಿಯೊಂದು ಪ್ರಾಂತದಿಂದ ಒಬ್ಬೊಬ್ಬ ಮಂತ್ರಿಯನ್ನು ಕೇಂದ್ರಕ್ಕೆ ಕಳಿಸಬೇಕು. ಉಳಿದ ನಾಲ್ಕೈದು ಸ್ಥಾನಗಳನ್ನು ಅಲ್ಪಸಂಖ್ಯಾಕರಿಗೆ, ಹರಿಜನರಿಗೆ ಕೊಡಬೇಕೆಂದು ಅವರು ಅಭಿಪ್ರಾಯಪಟ್ಟರು. ಪ್ರಾಥಮತದಾನದಿಂದಲೇ ಘಟನಾಸಮಿತಿಯನ್ನಾರಿಸಬೇಕೆಂದು ಕಾಂಗ್ರೆಸ್ಸು ಮೊದಲಿಂದ ಹೇಳಿಕೊಂಡು ಬಂದಿದ್ದರೂ ಈಗಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲದ್ದರಿಂದ ಒಂದು ಪ್ರಮಾಣವನ್ನು ಗೊತ್ತುಮಾಡಿ ಈಗಿನ ಪ್ರಾಂತಿಕ ಶಾಸನ ಸಭಾ ಸದಸ್ಯರಿಂದಲೇ ಘಟನಾ ಸಮಿತಿಯನ್ನು ನಿರ್ಮಿಸಬೇಕೆಂದೂ ಅವರು ಹೇಳಿದರು.

ಜಿನ್ನಾರು ಕೆಳಗಿಳಿದು ಬರುವರೆ?

ಮೇಲಿನ ಸೂಚನೆಗಳು ಕಾಂಗ್ರೆಸ್ಸಿನ ನಿರ್ಧಾರವನ್ನು ವ್ಯಾಜಾಂತರದಿಂದ ಹೇಳಿದಂತಿವೆ. ಅಂತರಾಷ್ಟ್ರೀಯನಿರ್ಣಯಕ್ಕೆ ಪಾಕಿಸ್ತಾನದ ಪ್ರಶ್ನೆಯನ್ನು ಬಿಟ್ಟುಕೊಟ್ಟರೆ ಪಾಕಿಸ್ತಾನಕ್ಕೆ ಆ ನಿರ್ಣಯ ವಿರುದ್ಧವಾಗಿರುವ ಸಂಭವವೇ ಹೆಚ್ಚು, ಮತ್ತು ಹಾಗಾದರೆ ಆ ನಿರ್ಣಯಕ್ಕೆ ಅಂತರ್‌ರಾಷ್ಟ್ರೀಯ ಜನಾಭಿಪ್ರಾಯ, ಶಕ್ತಿಗಳ ಬೆಂಬಲ ದೊರಕುವದು. ಇದು ಜಿನ್ನಾರಿಗೆ ಅಪ್ರಿಯವಾಗಿರುವದು ಸ್ವಾಭಾವಿಕ. ಕಾಂಗ್ರೆಸ್ ಅಥವಾ ಮುಸ್ಲಿಂಲೀಗಿಗೆ ಅಧಿಕಾರ ಬಿಟ್ಟುಕೊಡಿರೆಂಬ ಹೊರನೋಟಕ್ಕೆ "ನಿರುಪದ್ರವಿ" ಸೂಚನೆಯ ಹಿಂದೆ ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದರೆ ಲೀಗದ ವಿರೋಧ, ಏಕೆ ಬಂಡಾಯವನ್ನು ಕೂಡ ಎದುರಿಸಲು ಸಿದ್ಧವಾಗಿದೆ; ಒಂದು ವೇಳೆ ಲೀಗೇ ಅಧಿಕಾರ ವಹಿಸಿದರೂ ತನ್ನ ಶಕ್ತಿಯಿಂದ ಅದನ್ನು ದಾರಿಗೆ ತರುವ ಧೈರ್ಯವನ್ನೂ ಕಾಂಗ್ರೆಸ್ಸು ತೋರುವದು ಎಂದ ಹಾಗಾಗಿದೆ. ಪಂಜಾಬದಲ್ಲಿ ೫ ಲಕ್ಷ ಮುಸ್ಲಿಂ ಸ್ವಯಂಸೇವಕರ ತರಬೇತಿಯ ಬೆದರಿಕೆ, ದಿಲ್ಲಿಯಲ್ಲಿ ನೆರೆದ ಮುಸ್ಲಿಂಲೀಗ್ ಶಾಸನ ಸಭಾ ಸದಸ್ಯರ ಸಭೆಯಲ್ಲಿ ಹಾರಿಸಲ್ಪಟ್ಟ ಬೆದರು ಗುಂಡು, ಇವೆಲ್ಲವೂ ಕಾಂಗ್ರೆಸ್ಸನ್ನು ಎಳ್ಳಷ್ಟು ಬೆದರಿಸಿಲ್ಲವೆಂದು ಸ್ಪಷ್ಟವಾಗುತ್ತದೆ. ಇನ್ನು ಪ್ರಾಂತಗಳಿಂದ ಕೇಂದ್ರ ಮಂತ್ರಿಮಂಡಲಕ್ಕೆ ಪ್ರತಿನಿಧಿಯನ್ನು ಕಳಿಸುವ ಸೂಚನೆಯನ್ವಯ ಅಂತೂ ಮುಸ್ಲಿಂಲೀಗಿಗೆ ಸಿಂಧ ಬಂಗಾಲ ಪ್ರಾಂತಗಳ ಎರಡು ಸ್ಥಾನಗಳಷ್ಟೇ ದೊರೆಯುವವು. ಹೀಗೆ ಕಾಂಗ್ರೆಸ್ಸು ಜಿನ್ನಾರಿಗೆ ಬಗ್ಗುವದಿಲ್ಲೆಂಬುದು ಸಿದ್ಧವಾಗುತ್ತದೆ.

ನಡುಗಾಲ ಸರಕಾರ

ನಡುಗಾಲದ ಸರಕಾರವನ್ನು ರಚಿಸುವಲ್ಲಿ ಕಾಂಗ್ರೆಸ್ಸು ಎಷ್ಟು ಆತುರವಾಗಿದೆಯೋ ಬ್ರಿಟಿಶ ಮಂತ್ರಿಗಳೂ ಅಷ್ಟೇ ಆತುರರಾಗಿರ ವರಂತೆ. ಈ ವಿಷಯದಲ್ಲಿ ಅದು ಯಾರ ಕಾಲೊತ್ತಡಕನ್ನೂ ಲಕ್ಷಿಸುವದಿಲ್ಲೆಂದೂ ದೂರನಿಂತ ಪಕ್ಷವನ್ನು ಬಿಟ್ಟೇ ನಡುಗಾಲ ಸರಕಾರ ರಚಿಸಲು ಅವರು ಮುಂದಾಗುವರೆಂಬೂ ದಟ್ಟವಾಗಿ ಸುದ್ದಿ ಹಬ್ಬಿದೆ. ಇದೂ ಅಲ್ಲದೆ ಜಿನ್ನಾ ಸಾಹೇಬರು ಮಂತ್ರಿಗಳ ಕಾಶ್ಮೀರ ಪ್ರವಾಸದ ಮುಂಚೆ ಕೊನೆಯ ಬಾರಿ ಅವರನ್ನು ಭೆಟ್ಟಿಯಾದಾಗ ಜಿನ್ನಾ ಛಾಪಿನ ಪಾಕಿಸ್ತಾನವನ್ನು ಒಪ್ಪುವದು ಸಾಧ್ಯವೇ ಇಲ್ಲೆಂದು ನೇರವಾಗಿ ತಿಳಿದು ಬಂದಿದೆ. ಹೀಗಿರುವದರಿಂದ ಜಿನ್ನಾ ಅವರ ಆಶೆಯೆಲ್ಲ ನಿರಾಶೆಯಾಗಿದೆಯೆಂದೂ ಪರಿಣಾಮವಾಗಿ ಅವರು ಏನಾದರೊಂದು ಮುಖವುಳಿಸಿಕೊಳ್ಳುವ ನೆವ ತೆಗೆದು ಕೇಂದ್ರದಲ್ಲಿ ಸ್ಥಾಪಿಸುವ ನಡುಗಾಲ ಸರಕಾರದಲ್ಲಿ ಭಾಗವಹಿಸಲು ಸಿದ್ಧರಾಗಬಹುದೆಂದೂ ತರ್ಕಿಸಲಾಗಿದೆ. ತಾ ೨೫ ಕ್ಕೆ ಸೇರುವ ಲೀಗ್ ವರ್ಕಿಂಗ ಕಮೀಟಿಯ ಮುಂದೆ ಜಿನ್ನಾ ಅವರು ವಿಷಯಗಳನ್ನೆಲ್ಲ ಇಡಬಹುದು. ಭೋಪಾಲದ ನವಾಬರೊಡನೆ ಈ 'ಬಿಡುವಿನ' ವಾರದಲ್ಲಿ ಪಂಡಿತ ಜವಾಹರಲಾಲರು ಮಾತುಕತೆ ನಡೆಸಿದ್ದಾರೆ. ಅದರಿಂದ ನರೇಂದ್ರ-ಕಾಂಗ್ರೆಸ್ ನಡುವಣ ಅಂತರ ಕಡಿಮೆಯಾಗತೊಡಗಿದೆ. ಜವಾಹರಲಾಲರು ಸಂಸ್ಥಾನಿ ಪ್ರಜೆಗಳ ಪರವಾಗಿ ಈಚೆಗೆ ಹೊರಡಿಸಿದ ಹೇಳಿಕೆಗಳನ್ನು ನೋಡಿದರೆ ಪ್ರಜೆಗಳ ವಿಷಯದಲ್ಲಿ ನರೇಂದ್ರರು ಹೆಚ್ಚಿನ ಉದಾರ ಧೋರಣ ವಹಿಸಬಹುದೆಂದೆನಿಸುತ್ತದೆ. ಇದಲ್ಲದೆ ನರೇಂದ್ರರು ಕೇಂದ್ರದಲ್ಲಿ ಸ್ಥಾಪಿಸಲ್ಪಡುವ ನಡಗಾಲದ ಸರಕಾರದಲ್ಲಿ ಭಾಗವಹಿಸಲು ಆತುರರಾಗಿರುವರೆಂದು ಹೇಳಲಾಗಿದೆ. ಇವೆಲ್ಲ ಸಂಗತಿಗಳು ಜಿನ್ನಾ ಸಾಹೇಬರಿಗೆ ಅನುಕೂಲವಾಗಿಲ್ಲ ಮೇಲಾಗಿ ಬ್ರಿಟಿಶ ಮಂತ್ರಿಗಳು ಹಿಂದುಸ್ತಾನದ ಪ್ರಶ್ನೆಯನ್ನು ನಿರ್ಣಯಿಸದೆ ಇಲ್ಲಿಂದ ಹೊರಡಲು ಒಪ್ಪುವದಿಲ್ಲವಾದುದರಿಂದ ಕಾಲಯಾಪನೆ ಮಾಡಿ ಹೊಸ ಶಕ್ತಿ ಸಂಗ್ರಹಿಸುವ ಜಿನ್ನಾರ ಗತ್ತುಗಾರಿಕೆಗೂ ಅಡಚಣಿಯಾಗಿದೆ

ಇರಾಕದ ಮಾದರಿ?

ಕಾಂಗ್ರೆಸ–ಲೀಗ ಒಡಂಬಡಿಕೆಯ ಅಭಾವದಲ್ಲಿ ಬ್ರಿಟಿಶ ಮಂತ್ರಿಗಳು ಯಾವ ಉಪಾಯವನ್ನು ಸೂಚಿಸಬಹುದು ಎಂಬ ಬಗ್ಗೆ ಹಲ ವಿತರ್ಕಗಳು ನಡೆದಿವೆ ಸಡಿಲು ಕೇಂದ್ರವುಳ್ಳ 'ನಾಡಕೂಟ'ವನ್ನು ರಚಿಸುವ ವಿಷಯ ಈಗಾಗಲೆ ಚರ್ಚಿಸಲ್ಪಟ್ಟಿದೆ ಪ್ರಾಂತಗಳ ಪುನರ್ವಿಭಜನೆ, ಮುಖ್ಯವಾಗಿ ಬಂಗಾಲ, ಪಂಜಾಬಗಳ, ಹಿಂದೂ ಬಹುಸಂಖ್ಯಾ ಪ್ರದೇಶಗಳನ್ನು ಬಿಟ್ಟು ಪಾಕಿಸ್ತಾನ ಪ್ರಾಂತಗಳನ್ನು ರಚಿಸುವದು ಮತ್ತು ಅವು ಕೆಲಕೆಲವೊಂದು ವಿಷಯದಲ್ಲಿ ಕೇಂದ್ರದೊಡನೆ ಸಹಕರಿಸುವದು ಇವು ಇತರ ಸಾಮಾನ್ಯ ಸೂಚನೆಗಳಾಗಬಹುದು. ಆದರೆ ಬ್ರಿಟಿಶ - ಹಿಂದೀ ಸಂಬಂಧ ಹೇಗಿರಬೇಕೆಂದು ಅವರು ಅಶಿಸಬಹುದು? ಇರಾಕದ ಮಾದರಿಯಲ್ಲಿ ಹಿಂದೀ ಬ್ರಿಟಿಶ ಒಪ್ಪಂದವನ್ನು ಅವರು ಅಪೇಕ್ಷಿಸಬಹುದೆಂದು ತೋರುತ್ತದೆ. ಈ ವಿಷಯದಲ್ಲಿ ಹಿಂದಿ ಸೈನ್ಯದ ನಾಯಕರ ಅಭಿಪ್ರಾಯಕ್ಕೆ ಹೆಚ್ಚಿನ ಗೌರವ ದೊರಯುವ ಸಂಭವವುಂಟು. ಸೇನಾಪತಿ ಕ್ಲಾಡ್ ಅಚಿನಲೆಕ್‌ರು ಕೆಲದಿನಗಳ ಹಿಂದೆ ಕೇಂದ್ರ ವಿಧಿ ಮಂಡಲದಲ್ಲಿ ಹಿಂದೀ ಸೈನ್ಯದ ಪೂರ್ಣ ಹಿಂದೀಕರಣಕ್ಕೆ ೨೦ ವರ್ಷ ಹಿಡಿದೀತೆಂಬ ಅಭಿಮತವನ್ನು ವ್ಯಕ್ತಗೊಳಿಸಿದ್ದರು. ಅಂದಮೇಲೆ ಸದ್ಯಕ್ಕೆ ದೇಶರಕ್ಷಣೆಯಲ್ಲಿ ಬ್ರಿಟಿಶ ಸೈನ್ಯಾಧಿಕಾರಿಗಳಿಗೆ ಮಹತ್ವ ದೊರತಂತಾಯಿತು. ಇರಾಕದೊಡನೆ ಬ್ರಿಟಿಶರು ಮಾಡಿಕೊಂಡ ಒಪ್ಪಂದದನ್ವಯ ಆ ದೇಶದ ಆಡಳಿತೆ ಇರಾಕದ ಅರಸನ ಅಂಕಗೊಳಪಟ್ಟಿದ್ದರೂ ಬ್ರಿಟನಿಗೆ ಇರಾಕದಲ್ಲಿ ಸೈನ್ಯವಿಡುವ, ಸೈನ್ಯ ತರಬೇತಿಗೊಳಿಸುವ ಮತ್ತು ಯುದ್ಧಕಾಲದಲ್ಲಿ ಸೈನ್ಯ ಚಲನವಲನಗಳಿಗಾಗಿ ದೇಶದ ಸಂಪರ್ಕ ಸೌಕರ್ಯಗಳನ್ನು ಬಳಸುವ ಮೊದಲಾದ ಅಧಿಕಾರಗಳು ಬರುತ್ತವೆ. ಹೆಚ್ಚು ಕಡಿಮೆ ಇವೇ ಕರಾರುಗಳನ್ನು ಅವರು ನಮಗೂ

ಮುಂಬಯಿ ಆಹಾರ ಪರಿಸ್ಥಿತಿ

ಎರಡು ಲಕ್ಷ ಟನ್ ಕೊರತೆ

ಮುಂಬಯಿ ಪ್ರಾಂತದಲ್ಲಿ ಈ ವರ್ಷ ೨೦೬೦೦೦ ಟನ್ ಆಹಾರದ ಕೊರತೆ ಇದೆ. ಈ ವರ್ಷ ದಕ್ಷಿಣ ಭಾಗದಲ್ಲಿ ಮಳೆ ಅಭಾವದ ಮೂಲಕ ಕೊರತೆ ೯ ಲಕ್ಷಕ್ಕೇರಿತ್ತು. ಆದರೆ ಪ್ರಾಂತದಲ್ಲಿ ೨೬೬೦೦೦ ಟನ್ ಆಹಾರ ಸಂಗ್ರಹವದೆ. ೫೧೫೦೦೦ ಟನ್ ಪರಪ್ರಾಂತಗಳಿಂದ ಬರಲಿವೆ. ಮತ್ತು ೩೧೭೦೦೦ ಟನ್ ಇದೇ ಪ್ರಾಂತದ ಬೆಳೆಯಿಂದ ದೊರೆಯುವದು. ಪ್ರಾಂತಕ್ಕೆ ನವಂಬರ ತಿಂಗಳವರೆಗೆ ಬೇಕಾದುದು ೧೩೦೫೦೦೦ ಟನ್ ದೊರೆಯಲಿದ್ದು ೨೦೬೦೦೦ ಟನ್ ಇನ್ನು ಕೊರತೆಯಾಗುತ್ತಿದೆ. ಇದಲ್ಲದೆ ಪಂಜಾಬದಲ್ಲಿ ಗೋದಿ ಬೆಳೆ ಈ ಸಲ ಹುಲುಸಾಗಿರದ್ದರಿಂದ ನಮ್ಮ ಪಾಲಿಗೆ ಹಿಂದುಸ್ತಾನ ಸರಕಾರದವರು ಕೊಡಮಾಡಿದಷ್ಟು ಸಿಗಲಿಕ್ಕಿಲ್ಲ. ಇದರಿಂದ ಮುಂಬಯಿ ಸರಕಾರದವರು ಫೆಬ್ರುವರಿ ೨೧ ರಿಂದ ಸೀದಾ ಪ್ರಮಾಣವನ್ನು ನೂರಕ್ಕೆ ೨೫ ರಷ್ಟು ಕತ್ತರಿಸಿದ್ದಾರೆ. ಇದರಿಂದ ೧೫೦೦೦ ಟನ್ ಉಳಿತಾಯವಾಗುವುದು. ಇಷ್ಟು ಮಿತವ್ಯಯ ಮಾಡಿದಾಗ್ಯೂ ಇನ್ನೂ ಎರಡು ಲಕ್ಷ ಟನ್ ಆಹಾರ ಕಡಮೆಯಾಗುವುದು. ಅಮೇರಿಕೆಯ ಬರಗಾಲ ಸಮಿತಿಯ ಅಧ್ಯಕ್ಷರಾದ ಹರ್ಬರ್ಟ ಹೂವರರು ಇದೀಗ ಮುಂಬಯಿಗೆ ಬಂದಿದ್ದು ಮುಂಬಯಿ ಮಂತ್ರಿಗಳು ಮತ್ತು ಗವರ್ನರರು ಅವರನ್ನು ಕಂಡು ಪ್ರಾಂತದ ಆಹಾರ ಪರಿಸ್ಥಿತಿಯನ್ನು ತಿಳಿಸಿದರು.

ಮುಂಬಯಿ "ಎಕ್ಸ್‌ಪ್ರೆಸ್" ಗಾಡಿಯಲ್ಲಿ ನೇತಾಜಿ ಬೋಸ

ಅರ್ಕೋಣಂ ತಾಲೂಕಿನ ಕೆ. ಎಸ್. ಎಂ. ಸ್ವಾಮಿ ಅವಧಾನಿ ಇವರು ಮದ್ರಾಸದ ಫ್ರೀಪ್ರೆಸ್ಸಿನಲ್ಲಿ ಈ ರೀತಿ ಬರೆಯುತ್ತಾರೆ.

ಕಳೆದ ಗುರುವಾರ (ತಾ. ೧೮) ನಾನು ಮುಂಬಯಿ ಎಕ್ಸ್‌ಪ್ರೆಸ್ಸಿನಲ್ಲಿ ಎರಡನೆ ವರ್ಗದ ತಿಕೀಟಿದ್ದರೂ ಮೂರನೇ ವರ್ಗದಲ್ಲಿ ಪ್ರಯಾಣ ಮಾಡಿದೆ. ಮುಸಲ್ಮಾನ ಉಡುಪಿನಲ್ಲಿದ್ದ ಒಬ್ಬ ಮನುಷ್ಯನು ನನ್ನ ಬದಿ ಕುಳಿತಿದ್ದನ್ನು ನಾನು ಅಕಸ್ಮಾತ್ ನೋಡಿದೆ. ಅವನು ಮುಸಲ್ಮಾನನಂತೆ ಕಾಣಿಸಿದರೂ ನನಗೇಕೋ ಅವನ ಬಗ್ಗೆ ಸಂಶಯ ಹುಟ್ಟಿತು. ನೇತಾಜಿ ಸುಭಾಷ ಬೋಸರ ಹೋಲಿಕೆ ಅವನದಿತ್ತು 'ನೀನೆಲ್ಲಿಗೆ ಹೊರಟಿ?' ಎಂದು ನಾನು ತಮಿಳಿನಲ್ಲಿ ಕೇಳಿದೆ. ಇದಕ್ಕುತ್ತರ ಕೊಡದೆ ಅವರು ನನ್ನನ್ನು ದಿಟ್ಟಿಸಿ ನೋಡಿದರು. ಮುಂದೆ ನಾನು ಹಿಂದುಸ್ತಾನಿಯಲ್ಲಿ ಅವರನ್ನು ಮಾತಾಡಿಸಿದೆ ಅದಕ್ಕೂ ಅವರ ಮೌನ. ತದ್ವಿರುದ್ಧವಾಗಿ ಅವರು ಕುಳಿತುಕೊಳ್ಳಲು ನನಗೆ ಸಂಜ್ಞೆ ಮಾಡಿದರು. ಅವರು ಸುಭಾಷರೆಂದೇ ನನ್ನ ಮನವರಿಕೆಯಾದ್ದರಿಂದ ಅವರಿಗೆ ಗೌರವ ತೋರಿಸಲು ನಾನು ನಿಂತುಬಿಟ್ಟೆನು. ಅನಂತರ ನಾನು ಅವರ ಸೇವೆಗೆ ಸಿದ್ಧನೆಂದು ಹೇಳಿದೆನು. ಇದಕ್ಕವರು ಸಂತೋಷ ಪ್ರದರ್ಶಿಸಿ,ನನ್ನ ವೆಚ್ಚಕ್ಕಾಗಿಯೆಂದು ೧೦ರ ಎರಡು ನೋಟುಗಳನ್ನು ಕೊಟ್ಟರು. ನಾನು ವಿನಯದಿಂದ ಆ ಹಣ ನಿರಾಕರಿಸಿದೆನು. ಆದರೆ ಅವರು ಒತ್ತಾಯ ಪಡಿಸಿದರು. ನಾನದನ್ನು ಸ್ವೀಕರಿಸಿ ನನ್ನ ಗ್ರಾಮ ನಾಗರಿ ಸ್ಟೇಶನ ಬಂದ ಕೂಡಲೆ ನಮಸ್ಕಾರ ಮಾಡಿ ಅವರ ಅಪ್ಪಣೆ ಪಡೆದು ಇಳಿದು ಹೋದೆನು.

ಯುದ್ಧಾನಂತರ ದನಕರುಗಳ ಅಭಿವೃದ್ಧಿಗಾಗಿ ಸಿದ್ಧಗೊಳಿಸಿದ ಯೋಜನೆಯ ವ್ಯಯ ಮೈಸೂರು ಸರಕಾರದವರು ೫ ವರ್ಷಗಳಲ್ಲಿ ೨೩.೫೬ ಲಕ್ಷ ರೂಪಾಯಿ ವೆಚ್ಚ ಮಾಡುವರೆಂದು ತಿಳಿಯುತ್ತದೆ.

ಕೊಡಮಾಡಬಹುದು. ಇಂಡೋಚೀನದ ಅನ್ನಂ ರಾಜ್ಯದೊಡನೆ ಫ್ರೆಂಚರು ಮಾಡಿಕೊಂಡ ಒಪ್ಪಂದವೂ ಸಾಧಾರಣ ಇದೇ ಮಾದರಿಯದಿದೆ. ಏಶಿಯಾದಲ್ಲಿ ವಸಾಹತು ಸಾಮ್ರಾಜ್ಯಗಳುಳ್ಳ ಯುರೋಪಿಯನ್ ರಾಷ್ಟ್ರಗಳೆಲ್ಲ ಸಮಾನವಾದ ಧೋರಣ ವಹಿಸುವ ದೃಷ್ಟಿಯಿಂದ ಇಂಗ್ಲಂಡಿಗೆ ಇದು ಅಪೇಕ್ಷಣೀಯವಾಗಿರಬಹುದು ಆದರೆ ಕಾಂಗ್ರೆಸ್ಸು ಈ ಬಗೆಯ "ಸ್ವರಾಜ್ಯ" ಒಪ್ಪುವದು ಅಸಾಧ್ಯವೆಂದೇ ತೋರುತ್ತದೆ.

ಅಂತರ್‌ರಾಷ್ಟ್ರೀಯ

ಬ್ರಿಟಿಶ್ ಉಕ್ಕಿನ ಉದ್ದಿಮೆಯ ರಾಷ್ಟ್ರೀಕರಣ

ಬ್ರಿಟಿಶ್ ಉಕ್ಕಿನ ಉದ್ದಿಮೆಯನ್ನು ರಾಷ್ಟ್ರೀಕರಿಸಬೇಕೆಂದು ಸರಕಾರ ನಿರ್ಧರಿಸಿರುವದಾಗಿ ಕಳೆದ ವಾರ ಬ್ರಿಟಿಶ ಪೂರೈಕೆ ಮಂತ್ರಿ ವಿಲ್ಮಾಟರು ಪಾರ್ಲಮೆಂಟಿನಲ್ಲಿ ತಿಳಿಸಿದರು. ಉದ್ದಿಮೆಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳುವ ಕಾರ್ಯವನ್ನು ಪೂರೈಸುವ ಸಲುವಾಗಿ ಒಂದು ನಿಯಂತ್ರಣ ಮಂಡಲವನ್ನು ನೇಮಿಸಲಾಗುವದು. ಸರಕಾರದ ಅಧೀನಕ್ಕೆ ಪೂರ್ಣವಾಗಿ ಈ ಉದ್ದಿಮೆಯನ್ನು ವಹಿಸಿಕೊಳ್ಳುವ ವರೆಗೆ ಈ ಮಂಡಲದವರು ಉಕ್ಕಿನ ಉದ್ದಿಮೆಯ ಮೇಲ್ವಿಚಾರಣೆ ನಡೆಸುವರು. ಈ ನಿರ್ಣಯವನ್ನು ಕುರಿತು ಮಾತಾಡುತ್ತ ಚರ್ಚಿಲ್ಲರು ಸರಕಾರವನ್ನು ಅನವಶ್ಯಕ ಕಠೋರ ವಚನಗಳಿಂದ ತೆಗಳುತಿದ್ದಾಗ ಹಲವು ಬಾರಿ ಅವರನ್ನು ಸಭಾಧ್ಯಕ್ಷರು ತಡೆಯಬೇಕಾಯಿತು. ಆದರೆ ಬಂಡವಲಗಾರರ ಆಡಳಿತದಿಂದ ಸರಕಾರದ ಆಡಳಿತಕ್ಕೆ ಉಕ್ಕಿನ ಕಾರಖಾನೆಗಳಂಥ ಮಹತ್ವದ ಉದ್ದಿಮೆಯನ್ನು ವರ್ಗಾಯಿಕೊಳ್ಳುವದರಲ್ಲಿ ಜನತೆಯ ಬೆಂಬಲದ ಧೈರ್ಯವಿದ್ದುದರಿಂದ ಮುಖ್ಯಮಂತ್ರಿ ಅಟ್ಲಿಯವರು ಚರ್ಚಿಲ್ಲರ ಸಭ್ಯತೆ ಮೀರಿದ ನುಡಿಗಳನ್ನು ಲೆಕ್ಕಿಸದೆ ಸುಸಭ್ಯ ಗೌರವ ಗಂಭೀರ ಮಾತುಗಳಿಂದ ಉತ್ತರಿಸಿದರು ಈ ಭಾಷಣದಿಂದ ಚರ್ಚಿಲ್ಲರ ಗೌರವ ಬೆಳೆಯುವ ಬದಲು ಇಳಿಯಿತೆಂದೂ ಅವರು "ತೂತುಬಿದ್ದ ಆಕಾಶಬುಟ್ಟಿಯಂತಾಗಿದ್ದಾರೆ"ಂದೂ ಲಂಡನ್ನಿನಲ್ಲಿ ಟೀಕೆ ಲಾಗುತಿದೆ.

ಪ್ಯಾರಿಸ್ ಸಮ್ಮೇಲನ

ಪ್ರಬಲ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಭೆ ಇದೀಗ ಪ್ಯಾರಿಸಿನಲ್ಲಿ ಸೇರುತಿದ್ದು ಅದರಲ್ಲಿ ಭಾಗವಹಿಸಲು ಸೋವಿಯೆಟ್ ಯೂನಿಯನ್ ಪರವಾಗಿ ವಿದೇಶ ಮಂತ್ರಿ ಮುಲಟೊವ್ ಮತ್ತು ಉಪ ವಿದೇಶ ಮಂತ್ರಿ ವಿಶಿನ್ಸಿ ತಮ್ಮ ೨೦೦ ಪರಿವಾರ ಜನರೊಂದಿಗೆ ಬರುವರೆಂದು ಗೊತ್ತಾಗಿದೆ. ಈ ಸಭೆಯ ಮುಂದಿರುವ ಅನೇಕ ಸಮಸ್ಯೆಗಳನ್ನು ಈ ಹಿಂದೆ ಈ ವಿಭಾಗದಲ್ಲಿ ವಿವರಿಸಲಾಗಿದೆ. ಆದರೆ ಈಗ ಇನ್ನೂ ಹೊಸ ಸಮಸ್ಯೆಗಳು ಅದರ ತಲೆಗೆಡಿಸಲು ಸಿದ್ಧವಾದಂತೆ ತೋರುತ್ತದೆ. ಇಟಲಿಯಿಂದ ರಶಿಯಾ ಬೇಡಿರುವ ೩೦ ಕೋಟಿ ಚಿನ್ನದ ಡಾಲರುಗಳಷ್ಟು ಪರಿಹಾರ ದ್ರವ್ಯ, ಟ್ರಿಪೋಲಿಟಾನಾ ಬಂದರದ ಮೇಲೆ ಅದು ಬೇಡಿದ ಸಂಪೂರ್ಣ ಆದೇಶ (ಮ್ಯಾಂಡೇಟ) ಅಧಿಕಾರ, ಡೊಡಕಾನೀಸ್ ದ್ವೀಪಸ್ತೋಮದಲ್ಲಿ ನೌಕಾ ಸಿಲ್ದಾಣದ ಅಧಿಕಾರ, ಮತ್ತು ಡಾರ್ಡೆನಲ್ಸ ಜಲಸಂಧಿಯ ಒಪ್ಪಂದದ ಪುನರ್ವಿಮರ್ಶೆ— ಇವು ಆ ಹೊಸ ಸಮಸ್ಯೆಗಳಲ್ಲಿ ಕೆಲವು. ಇಟಲಿಯಿಂದ ರಶಿಯಾ ಬೇಡಿರುವ ಪರಿಹಾರದ ಪ್ರಮಾಣವನ್ನು ಅಮೇರಿಕೆ ವಿರೋಧಿಸದಿರದು. ಇಟಲಿ ಬೇಗನೆ ಆರ್ಥಿಕ ಪುನರುಜ್ಜೀವನಗೊಳ್ಳಬೇಕೆಂದು ತನ್ನದೇ ಹಿತ ದೃಷ್ಟಿಯಿಂದ ಅಮೇರಿಕೆ ಬಯಸುತ್ತಿದೆ. ಇನ್ನುಳಿದ ಬೇಡಿಕೆಗಳನ್ನು ಒಪ್ಪಿದರೆ ಭೂಮಧ್ಯ ಸಮುದ್ರದ ಮೇಲೆ ರಶಿಯಾದ ಪ್ರಭಾವ ಹೆಚ್ಚಾಗಿ ಬೆಳೆಯುವದು. ಅದು ಬ್ರಿಟನಕ್ಕೆ ಹಿತವಿಲ್ಲ. ಭೂಮಧ್ಯ ಸಮುದ್ರದ ಮೇಲೆ ರಶಿಯಾದ ಪ್ರಭಾವವನ್ನು ತಡೆಯಲು ಬ್ರಿಟನ್ ಪ್ರಯತ್ನಿಸಿದರೆ ಇರಾಣದಲ್ಲಿ ಅನುಕೂಲ ಸರಕಾರ ಸ್ಥಾಪನೆಯಾದ ಪಕ್ಷದಲ್ಲಿ ರಶಿಯಾ ಪರ್ಶಿಯನ್ ಆಖಾತಕ್ಕೂ ತನ್ಮೂಲಕ ಹಿಂದೀ ಸಾಗರಕ್ಕೂ ಪ್ರವೇಶ ಪಡೆದು ಇಂಗ್ಲಂಡಿಗೂ ಅದರ ಸಾಮ್ರಾಜ್ಯಕ್ಕೂ ನಡುವೆ ಕಾಲು ಚಾಚಬಹುದು. ಹಲವು ಸಮಸ್ಯೆಗಳಿಂದ ಕೂಡಿದ ಈ ವಿದೇಶ ಮಂತ್ರಿ ಸಭೆ ಯಾವೊಂದು ನಿರ್ಣಯಕ್ಕೂ ಬರಲಾರದೆ ಶಾಂತಿ ಪರಿಷತ್ತು ಕೂಡುವದೇ ಅಸಾಧ್ಯವಾಗಿ ಬಿಡುವ ಸಂಭವ ತೋರಿಬರುತ್ತಿದೆ.

ಸ್ಪೇನದ ಭವಿತವ್ಯ

ಸ್ಪೇನದ ಜನರಲ್ ಫ್ರಾಂಕೋನ ಆಡಳಿತಕ್ಕೆ ಇರುವ ಮನ್ನಣೆಯನ್ನು ಯುಕ್ತರಾಷ್ಟ್ರ ಸದಸ್ಯರು ಹಿಂತೆಗೆದುಕೊಳ್ಳಬೇಕೆಂದು ಯುಕ್ತ ರಾಷ್ಟ್ರ ಭದ್ರತಾ ಮಂಡಲದಲ್ಲಿ ಪೋಲಂಡು ಒಂದು ಗೊತ್ತುವಳಿಯನ್ನು ಮಂಡಿಸಿತು. ಅದಕ್ಕೆ ಸೋವಿಯೆಟ್ ಬೆಂಬಲವಿದ್ದರೂ ಅಂಗ್ಲೋ-ಅಮೇರಿಕನ್ ವಿರೋಧ ಮಾತ್ರ ಪ್ರಬಲವಾಗಿತ್ತು. ಸ್ಪೇನದಲ್ಲಿ ಪ್ರಜಾತಂತ್ರ ಸ್ಥಾಪಿತವಾಗಬೇಕೆಂಬ ಆಸೆ ಅಂಗ್ಲೋ ಅಮೇರಿಕನ್ನರಲ್ಲಿ ಪ್ರಬಲವಾಗಿದ್ದರೂ ಅಲ್ಲಿನ ಫ್ರಾಂಕೋನ ಆಡಳಿತೆಯಿಂದ ಜಾಗತಿಕ ಶಾಂತಿಗೆ ಭಂಗಬರುತಿದೆಯೆಂಬುದನ್ನು ಒಪ್ಪಲು ಅವು ಸಿದ್ಧವಾಗಿರಲಿಲ್ಲ. ಈ ವಿಷಯದ ಚರ್ಚೆ ಮುಂದೆ ಹಾಕಲ್ಪಟ್ಟಿದ್ದರೂ ಸ್ಪೇನದ ದೇಶಭ್ರಷ್ಟ ರಿಪಬ್ಲಿಕನ್ ಸರಕಾರದ ಚಟುವಟಿಕೆಗಳು ಹೆಚ್ಚಿದ್ದು ಪೂರ್ವ ಯುರೋಪದ ಸೋವಿಯೆಟ್ ಪಕ್ಷಪಾತಿ ಬಲ್ಗೇರಿಯಾ ಅವಕ್ಕೆ ಮನ್ನಣೆಯಿತ್ತಿದೆ. ಅಂಗ್ಲೋ-ಅಮೇರಿಕನ್ ಸ್ವಾರ್ಥದ ಕಾರಣದಿಂದಲೇ ಜನತೆಗೆ ಬೇಡಾದ ಫ್ರಾಂಕೋ ಸ್ಪೇನದಲ್ಲಿ ಅಧಿಕಾರ ನಡೆಸಬಲ್ಲವನಾಗಿದ್ದಾನೆ.

ಕಣ್ಮರೆಯಾದ ಮುಸೋಲಿನಿ ಹೆಣ

ದ್ವಿತೀಯ ಮಹಾ ಯುದ್ಧದ ಅವಸಾನ ಕಾಲದಲ್ಲಿ ದೇಶಪ್ರೇಮಿಗಳ ಕೈಗೆ ಸಿಲುಕಿ ದುರ್ಮರಣಕ್ಕೆ ಗುರಿಯಾದ ಇಟಲಿಯ ಸರ್ವಾಧಿಕಾರಿ ಬೆನಿಟೋ ಮುಸೋಲಿನಿಯ ಹೆಣವನ್ನು ಯಾರಿಗೂ ಅರಿಯದ ತಾಣದಲ್ಲಿ ಹೂಳಲಾಗಿತ್ತು. ಆದರೆ ಅವನ ಗೋರಿಯಿಂದ ಯಾರೋ ಸಾಹಸಿಗಳು ಆ ಹೆಣವನ್ನು ಕಿತ್ತು ಕದ್ದುಕೊಂಡು ಹೋಗಿರುವರೆಂಬ ಸುದ್ದಿ ಮಿಲಾನದಿಂದ ಬಂದು ಜನರನ್ನು ದಂಗುಬಡಿಸಿದೆ. ಇಟಲಿಯಲ್ಲಿ ಫ್ಯಾಸಿಸ್ಟ ಚಟುವಟಿಕೆಗಳು ಇನ್ನೂ ಅಡಗಿಲ್ಲವೆಂಬುದಕ್ಕೆ ಸಾಕ್ಷಿಯಾಗಿ ಮಿಲಾನದ ಸಾನ್ ವಿಟೋರ ಸೆರೆಮನೆಯ ಕೈದಿಗಳು ಸೆರೆಮನೆ ಕಾವಲುಗಾರರ ಮೇಲೇರಿ ಹೋಗಿ ದಂಗೆಯೆಬ್ಬಿಸಿ ಅನೇಕ ಪೋಲರನ್ನು ಬಂಧಿಸಿ ಗಾಯಗೊಳಿಸಿದ್ದನ್ನು ಉದಾಹರಿಸಬಹುದು.

ಇಂಗರಸೋಲರ ಚಮತ್ಕಾರಿಕ ಹೇಳಿಕೆ

ಯುರೋಪಿನಲ್ಲಿ ಅಮೇರಿಕನ್ ಮತ್ತು ಬ್ರಿಟಿಶ ಸೇನೆಗಳ ನಡುವೆ ದೌತ್ಯದ ಕಾರ್ಯವನ್ನು ಕೆಲಕಾಲ ನಡೆಸಿ ಆ ಮೇಲೆ ಸೈನ್ಯದಿಂದ ನಿವೃತ್ತರಾದ ಅಮೇರಿಕನ್ ಪತ್ರಿಕೋದ್ಯೋಗಿ ಮತ್ತು ಈಗ ಪ್ರಸಿದ್ಧ "ಪಿ. ಎಂ." ಪತ್ರಿಕಾ ಸಂಪಾದಕರಾಗಿರುವ ಇಂಗರಸೋಲರೆಂಬವರು ತಮ್ಮ ಪುಸ್ತಕವೊಂದರಲ್ಲಿ ಯುರೋಪಿಯನ್ ಯುದ್ಧದ ಕೆಲ ಗೋಪ್ಯಗಳನ್ನು ಹೊರಗೆಡಹಿ ಜಗತ್ತನ್ನು ಚಕಿತಗೊಳಿಸಿದ್ದಾರೆ. ಯುರೋಪಿನ ದಂಡಯಾತ್ರೆಯ ನಾಯಕರಾದ ಅಮೇರಿಕನ್ ಜನರಲ್ ಈಸೆನ್ ಹಾವರರ ದಡ್ಡತನದಿಂದ ೧೯೪೪ ಕ್ರಿಸ್‌ಮಸ್‌ದಷ್ಟಕ್ಕೆ ಮುಗಿಯಬಹುದಾಗಿದ್ದ ಯುದ್ಧ ಹೇಗೆ ಇತ್ತೆ ಕೆಲ ತಿಂಗಳು ಮುಂದೆ ಸಾಗಿತ್ತು, ಅವರಿಗೆ ಸಹಾಯಕರಾಗಿ ನೇಮಿಸಲ್ಪಟ್ಟಿದ್ದ ಬ್ರಿಟಿಶ್ ಜನರಲ್ ಮಾಂಟಿಗೋಮರಿಯವರು ಹೇಗೆ ಉದ್ಧಟತನದಿಂದ ವರ್ತಿಸಿದರು, ಬ್ರಿಟಿಶ ಪ್ರತಿಷ್ಠೆಯನ್ನು ಏರಿಸುವ ಸ್ವಾರ್ಥಕ್ಕೊಳಗಾಗಿ ಚರ್ಚಿಲ್ಲರು ಯಾವ ಪ್ರಕಾರವಾಗಿ ಬರ್ಲಿನದಲ್ಲಿ ರಶಿಯನ್ನರಿಗಿಂತ ಮೊದಲು ಬ್ರಿಟಿಶ ಧ್ವಜವನ್ನೇರಿಸುವ ಹವ್ಯಾಸಕ್ಕೆ ಬಿದ್ದು ಅಮೇರಿಕನ್ ಸಲಹೆಗಳನ್ನು ಅಲ್ಲಗಳೆದರು ಮತ್ತು ಈ ಕಾರಣದಿಂದ ಹೇಗೆ ಚರ್ಚಿಲ್ಲರಿಗೂ ರೂಜವೆಲ್ಟರಿಗೂ ಮನಸ್ತಾಪವುಂಟಾಯಿತು ಮೊದಲಾಗಿ ಅನೇಕ ಗುಪ್ತ ಸಂಗತಿಗಳು ಈ ಪುಸ್ತಕದಲ್ಲಿ ಬೆಳಕು ಕಂಡಿವೆ ರಾಜಕೀಯ ಸ್ವಾರ್ಥಕ್ಕಾಗಿ ಮಿತ್ರದ್ರೋಹ, ಅನೇಕ ನಿರಪರಾಧಿ ಸೈನಿಕರ ಬಲಿದಾನ ನಡೆಸಲೂ ಯುದ್ಧನಾಯಕರು ಹಿಂದೆ ಮುಂದೆ ನೋಡಲಿಲ್ಲ!

ಗ್ರೀಕ ಮಂತ್ರಿಮಂಡಲ

ಪಾಪ್ಯುಲಿಸ್ಟ್, ರಾಷ್ಟ್ರೀಯ ಲಿಬರಲ್ ಮತ್ತು ರಿಫಾರ್ಮಿಸ್ಟ (ಸುಧಾರಕ) ಎಂಬ ಮೂರೂ ರಾಜಸತ್ತಾವಾದಿ ಪಕ್ಷಗಳನ್ನೊಳಗೊಂಡ ೨೦೬ ಪಾರ್ಲಮೆಂಟ ಸದಸ್ಯರ ಬೆಂಬಲವುಳ್ಳ ೧೭ ಮಂತ್ರಿ, ೫ ಉಪಮಂತ್ರಿಗಳನ್ನೊಳಗೊಂಡ ಮಂತ್ರಿಮಂಡಲವನ್ನು ಗ್ರೀಸದಲ್ಲಿ ರಚಿಸಲಾಗಿದೆ. ಇನ್ನು ಅರಸನನ್ನು ಬೇಗನೆ ಕರೆತರುವ ಸಲುವಾಗಿ ಜನ ಮತಗ್ರಹಣ ಮಾಡಬಹುದು. ಆದರೆ ಅರಸನನ್ನು ಮರಳಿ ಬರಿಸಿದರೆ ಗ್ರೀಸದಲ್ಲಿ ಯಾದವೀ ಯುದ್ಧ ನಿಶ್ಚಿತವೆಂದೇ ತೋರುತ್ತದೆ. ಬ್ರಿಟಿಶ ಕೂಲಿಕಾರ ಪಕ್ಷದ ಅಧ್ಯಕ್ಷ ಪ್ರೊ. ಲಾಸ್ಕಿಯವರು ಇದನ್ನು ಒತ್ತಿ ಹೇಳಿ ಜಾರ್ಜ ಅರಸು ಗ್ರೀಸಿಗೆ ಮರಳಿ ಹೋಗಬಾರದೆಂದು ಪ್ರತಿಪಾದಿಸಿದ್ದಾರೆ.

ಪಾಲಿಸ್ತಾನದ ಬಗ್ಗೆ ವರದಿ

ಪಾಲಿಸ್ತಾನದಲ್ಲಿ ಯಹೂದ್ಯರಿಗೆ ಪ್ರವೇಶವನ್ನು ಕೊಡುವ ವಿಷಯದಲ್ಲುಂಟಾದ ತಂಟೆಯನ್ನು ಕುರಿತು ವಿಚಾರಣೆ ನಡೆಸಿ ವರದಿ ಮಾಡಲು ನೇಮಿಸಲ್ಪಟ್ಟಿದ್ದ ಅಂಗ್ಲೋ ಅಮೇರಿಕನ್ ಪಾಲಿಸ್ತಾನ ವಿಚಾರಣಾ ಸಮಿತಿಯವರು ಹಲದಿನದ ವಿಚಾರಣೆ ಮತ್ತು ಪರಸ್ಪರ ಭಿನ್ನಾಭಿಪ್ರಾಯಗಳ ನಂತರ ಇದೀಗ ಪ್ರಸಿದ್ಧಗೊಳಿಸಿದ ವರದಿಯಲ್ಲಿ ಕನಿಷ್ಠ ಒಂದು ಲಕ್ಷ ಜನ ಯಹೂದ್ಯರಿಗೆ ಪಾಲಿಸ್ತಾನದಲ್ಲಿ ಆದಷ್ಟು ಬೇಗನೆ ಪ್ರವೇಶಿಸಿ ವಸತಿ ಮಾಡಲು ಬಿಡಬೇಕೆಂದು ಒತ್ತಾಯಗೊಳಿಸಲಾಗಿದೆ. ಈ ಪ್ರಕಾರ ವರದಿ ಮಾಡಲೊಪ್ಪುವ ಮೊದಲು ಸಮಿತಿಯ ಬ್ರಿಟಿಶ ಪ್ರತಿನಿಧಿಗಳು ಬಹಳ ಮೀನಮೇಷ ಎಣಿಸಿದರೂ ಕೊನೆಗೆ ಅಮೇರಿಕೆಯ ಪ್ರಭಾವಕ್ಕೆ ತಲೆವಾಗಿದರು. ಮೊದಲನೆಯ ಮಹಾಯುದ್ಧಾನಂತರ ಪಾಲಿಸ್ತಾನ ಘೋಷಣೆಯನ್ನು ಬ್ರಿಟಿಶರು ತಿರುಮುರುಗು ಮಾಡಿದ್ದು ಇದು ಮೂರನೇ ಬಾರಿ. ಪಾಲಿಸ್ತಾನದ ಮೇಲೆ ಬ್ರಿಟನಕ್ಕೆ ಆದಿಷ್ಟ ಪ್ರಭುತ್ವವನ್ನು ಕೊಟ್ಟಾಗ ಅದನ್ನು ಯಹೂದ್ಯ ರಾಷ್ಟ್ರವಾಗಿ ಮಾಡಲು ಬ್ರಿಟನ್ ಒಪ್ಪಿಕೊಂಡಿತ್ತು. ಆದರೆ ಯುರೋಪಿನ ಮತ್ತು ಏಶಿಯಾದ ರಾಜಕಾರಣದ ಬಣ್ಣ ಬದಲಿಸಿದಂತೆ ಅರಬರ ಪ್ರೇಮ ಸಂಪಾದನೆಯ ಅವಶ್ಯಕತೆಯನ್ನು ಕಂಡು ಬ್ರಿಟಿಶರು ೧೯೩೯ರಲ್ಲಿ ಪಾಲಿಸ್ತಾನದಲ್ಲಿ ಯಹೂದ್ಯರ ಪ್ರವೇಶವನ್ನು ತಡೆಗಟ್ಟುವ ಧೋರಣೆ ವಹಿಸಿದರು. ಆದರೆ ಈಗ ಅಮೇರಿಕನ್ ಒತ್ತಾಯಕ್ಕೆ ಜಕ್ಕಿಸಿ ಸಾವಿರಾರು ವರ್ಷಗಳಿಂದ ಪಾಲಿಸ್ತಾನ ಭೂಮಿಯ ನಿವಾಸಿಗಳಾಗಿರುವ ಅರಬರ ಕೈಬಿಟ್ಟು ಬ್ರಿಟನ್ನು ಯಹೂದ್ಯರಿಗೆ ಲಕ್ಷಗಟ್ಟಲೆಯಿಂದ ಪ್ರವೇಶವೀಯಲು ಒಪ್ಪಿದಂತೆ ತೋರುತ್ತದೆ. ಒಂದು ಲಕ್ಷ ಜನರಿಗೆ ಒಡನೆ ಪ್ರವೇಶ ದೊರೆಯಬೇಕೆಂಬ ಸಲಹೆಯನ್ನು ಈ ವರದಿ ಕೊಟ್ಟಿದ್ದರೂ ಯಹೂದ್ಯರು ಇದರಿಂದ ತೃಪ್ತರಾಗಿಲ್ಲ. ಅರಬರು ಈ ವರದಿಯನ್ನು ನಿರಾಕರಿಸುವರೆಂದು ತಿಳಿದುಬಂದಿದೆ. ಅರಬರಂತೂ ಅದನ್ನು ಕಣ್ಣೆತ್ತಿ ನೋಡುವಂತಿಲ್ಲ. ಪಾಲಿಸ್ತಾನದಲ್ಲಿ ಬೇಗನೆ ಪ್ರಚಂಡ ದಂಗೆಗಳನ್ನು ನಿರೀಕ್ಷಿಸುವದು ನಿರಾಧಾರವಾಗಲಾರದು.

ಜರ್ಮನಿಯಲ್ಲಿ ಒಳಸಂಚು

ಜರ್ಮನಿಯಲ್ಲಿ ನಾಜೀ ಚಟುವಟಿಕೆ ಇನ್ನೂ ಬೆಳಕಿಗೆ ಬರುತ್ತಿದೆ. ದಕ್ಷಿಣ ಜರ್ಮನಿಯ ತರುಣನಾಜಿಗಳು ಹೂಡಿದ ಈ ಗುಪ್ತ ಚಟುವಟಿಕೆಗಳನ್ನು ಗೊತ್ತಿಗೆ ತರಲು ಒಂದು ದೊಡ್ಡ ಸೈನಿಕ ಅಭಿಯೋಗವೇ ಬೇಕಾದೀತೆಂದು ಬವೇರಿಯಾದ ಮುಖ್ಯ ಮಂತ್ರಿ ವಿಲ್ಹೆಲ್ಮ ಹೋಗ್ನರರು ಅಭಿಪ್ರಾಯಪಟ್ಟಿದ್ದಾರೆ. ಸ್ವಿಜರ್ಲಂಡ ಗಡಿಯಿಂದ ಆಸ್ಟ್ರಿಯಾದ ವರೆಗೆ ಹಬ್ಬಿದ ಒಳಸಂಚಿನ ನಾಯಕರ ಕೈಯಲ್ಲಿ ಸಾಕಷ್ಟು ಮದ್ದುಗುಂಡುಗಳೂ ಆ ಯುದ್ಧಸಾಮಗ್ರಿಗಳೂ ಇವೆ. ಈಚೆಗೆ ಹೋಗ್ನರರ ಸರಕಾರದ ಪೋಲೀಸರು ನಡೆಸಿದ ಬಂಧನಗಳ ಪರಿಣಾಮವಾಗಿ ಜರ್ಮನಿಯ ನಾಲ್ಕು ನೂರು ಪ್ರಜಾತಂತ್ರಿ ಮುಂದಾಳುಗಳನ್ನು ಕೊಲೆಗಡಿಯಲು ನಾಜಿ ಒಳಸಂಚುಗಾರರು ಹೂಡಿದ ಹಂಚಿಕೆ ಬೆಳಕಿಗೆ ಬಂದಿವೆ. ಹಾಗೆ ಕೊಲೆಗಾಗಿ ಗುರುತು ಹಾಕಲ್ಪಟ್ಟವರಲ್ಲಿ ಡಾ. ಹೋಗ್ನರರೂ ಒಬ್ಬರಂತೆ. ಭಯೋತ್ಪಾದಕ ಚಟುವಟಿಕೆಗಳೇ ಈ ಒಳಸಂಚುಗಾರರ ಸದ್ಯದ ಪ್ರಮುಖ ಕಾರ್ಯಕ್ರಮ ಬವೇರಿಯಾದಲ್ಲಿ ನಾಜೀ ಚಟುವಟಿಕೆಗಳನ್ನು ಅಡಗಿಸುವ ವಿಷಯದಲ್ಲಿ ಪರಿಸ್ಥಿತಿ ಆಶಾದಾಯಕವಿಲ್ಲವೆಂದು ಡಾ. ಹೋಗ್ನರರು ಹೇಳುತ್ತಾರೆ. ಕ್ರಿಶ್ಚನ್ ಸೋಶಿಯಲ್ ಯುನಿಯನ್ನಿನಂಥ ಸಂಸ್ಥೆಗಳು ನಾಜಿಗಳಿಗೆ ಆಶ್ರಯವೀಯುತ್ತಿವೆಯಂತೆ.

x x x

ಅಝುರಬೈಜಾನಕ್ಕೆ ಸ್ವಾಯತ್ತತೆಯನ್ನು ಕೊಡುವ ವಿಷಯದಲ್ಲಿ ಮುಖ್ಯ ಮಂತ್ರಿ ಸುಲ್ತಾನೆಗೂ ಅಝುರ ಬೈಜಾನ್ ಮುಖ್ಯ ಮಂತ್ರಿ ಪಿಶೇವಾರಿಗೂ ಮಾತುಕತೆ ನಡೆದಿವೆ. ಆದರೆ ತಾಬ್ರಿಝು (ಅಝುರಬೈಜಾನ ರಾಜಧಾನಿ)ಗೆ ತೆಹರಾನದ ವಾಯಿಸರಾಯರನ್ನು ಕಳಿಸುವ ವಿಷಯದಲ್ಲಿ ಪಿಶೇವಾರಿ ಪ್ರತಿಕೂಲಾಭಿಪ್ರಾಯವುಳ್ಳವನಾಗಿದ್ದಾನೆಯಾಗಿ ಮಾತುಕತೆ ಸಫಲವಾಗುವದು ಸಂದೇಹಕರ.

x x x

ಜರ್ಮನಿಯ ಸೋಶಲ ಡೆಮಾಕ್ರೆಟ ಮತ್ತು ಕಮ್ಯುನಿಸ್ಟ ಪಕ್ಷಗಳಲ್ಲಿ ಮಾತುಕತೆಯಾಗಿ ಅವೆರಡು ಪಕ್ಷಗಳ ಸಮಾವೇಶ ಮಾಡುವ ನಿರ್ಣಯವಾಯಿತು. ಆದರೆ ಬ್ರಿಟಿಶ ಆಕ್ರಮಿತ ಪ್ರದೇಶದಿಂದ ಈ ಸಂಯುಕ್ತ ಪಕ್ಷದ ಸಮಿತಿಗೆ ನೇಮಕವಾಗಿರುವ ೧೪ ಸದಸ್ಯರಿಗೆ ರಾಜೀನಾಮೆ ಕೊಡಲು ಬ್ರಿಟಿಶರು ಆಜ್ಞಾಪಿಸಿದ್ದಾರೆ. ಅಮೇರಿಕನ್ನರೂ ಇದೇ ರೀತಿ ಮಾಡಬಹುದು. ಕಮ್ಯುನಿಸ್ಟ ಪ್ರಭಾವ ಹೆಚ್ಚೀತೆಂಬ ಭಯವೇ ಇದಕ್ಕೆ ಕಾರಣ.

ಸಿಂಧ ಶಾಸನ ಸಭೆಯ ಅಧ್ಯಕ್ಷರಾದ ಸಯ್ಯದ ಮೀರಾನ ಮಹಮ್ಮದ ಶಹಾ ಇವರ ವಿರುದ್ಧ ಸಮ್ಯಶ್ರ ಪಕ್ಷದ ಶ್ರೀ ಆರ್ ಕೆ ಸಿಧ್ವಾ ಇವರು ಅವಿಶ್ವಾಸ ಗೊತ್ತುವಳಿ ಕಳಿಸಿರುವರು. ಈ ಗೊತ್ತುವಳಿಯ ವಿಚಾರಣೆಗಾಗಿ ಶಾಸನ ಸಭೆಯನ್ನು ಬೇಗನೆ ಕರೆಯುವಂತೆ ಗವರ್ನರರ ಮನವೊಲಿಸಬೇಕೆಂದು ಸಿಧ್ವಾರವರು ಅಧ್ಯಕ್ಷರನು ಬಿನ್ನವಿಸಿಕೊಂಡಿದ್ದಾರೆ.

ಅಬ್ದುಲ್ ಗಫರ್ ಎಂಬ ಕರಾಚಿ ಮುನಸಿಪಲ್ ಸಿಪಾಯಿಯು ಕೂಲಿಕಾರ ಮತದಾರ ಸಂಘದಿಂದ ಕರಾಚಿ ಮುನಿಸಿಪಲ್ ಕಾರಪರೇಶನಕ್ಕೆ ಆರಿಸಿ ಬಂದಿದ್ದಾನೆ. ಟ್ರೇಡ ಯೂನಿಯನ್ ಕಾಂಗ್ರೆಸ್‌ದಿಂದ ಅವನು ನಿಂತಿದ್ದನು. ಅವನ ವಿರೋಧಿಯಾಗಿ ನಿಂತ ಈಗಿನ ಸಭಾಸದರಿಗೆ ೬೦೦ ಮತ ಕಡಿಮೆ ಬಿದ್ದು ಸೋತರು.

ನ್ಯೂಜಿಲಂಡದ ಮುಖ್ಯಮಂತ್ರಿ ವಾಲ್ಟರ ನ್ಯಾಶರು ಕಾಮನವೆಲ್ಥ ಮುಖ್ಯ ಪ್ರಧಾನರ ಪರಿಷತ್ತಿಗಾಗಿ ಕರಾಚಿಯ ಮೇಲಿಂದ ಲಂಡನಕ್ಕೆ ಹೋದರು. ನ್ಯೂಜಿಲಂಡವು ಸಂಯುಕ್ತ ಆಹಾರ ಮಂಡಳಕ್ಕೆ ೭ ಲಕ್ಷ ಟನ್ ಗೋದಿ ೬೦೦೦ ಟನ್ ಬೆಣ್ಣೆ ಮತ್ತು ೬೦೦೦ ಟನ್ ಗಿಣ್ಣ ಕೊಡಲಿರುವದೆಂದು ಅವರು ಹೇಳಿದರು.

ಔಂಧ ಸಂಸ್ಥಾನದ ಆಯವ್ಯಯ ಅಧಿವೇಶನ ಶ್ರೀ ಎನ್. ಜಿ. ಚಾಫೇಕರರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರತಿಯೊಂದು ಹಳ್ಳಿಯನ್ನು ಸ್ವಾವಲಂಬಿ ಮತ್ತು ಸ್ವಯಂ ಆಡಳಿತೆ ಸಾಗಿಸಿಕೊಂಡು ಹೋಗುವಂತೆ ಮಾಡಲು ಔಂಧ ಸಂಸ್ಥಾನದ ಗ್ರಾಮಸಂರಕ್ಷಕದಲದ ಮಸೂದೆ ಸ್ವೀಕೃತವಾಯಿತು.

AC. 51. —K

"ನಾವು ಕೈಲಾದಷ್ಟು ಪ್ರಯತ್ನಿಸೋಣ"

—ಶ್ರೀ. ಜಿನ್ನಾ

"ಸರ್ವರಿಗೆ ಈಗ ಒದಗಿದ ದುರ್ಧರ ಪ್ರಸಂಗದಿಂದ ಯಾರೂ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಯಾವದೇ ಲಾಭವನ್ನು ಪಡೆಯತಕ್ಕದ್ದಲ್ಲವೆಂಬ ವ್ಹಾಯಿಸರಾಯರ ಹೇಳಿಕೆಯನ್ನು ನಾನು ಪುನಃ ಉಚ್ಚರಿಸುತ್ತೇನೆ. ಭಿನ್ನ ಪಕ್ಷಗಳ ಬಡಿದಾಟಕ್ಕಿಂತ ಆಹಾರದ ಪ್ರಶ್ನೆಯು ಮಿಗಿಲಾಗಿದೆ. ನಾವು ಸಹಾಯ ಮಾಡತಕ್ಕದ್ದು. ಸದ್ಯಕ್ಕೆ ನಮ್ಮನ್ನು ಎದುರಿಸಿದ ಈ ಕಠಿಣ ಪ್ರಸಂಗದಲ್ಲಿ ನಾವು ಸಹಕರಿಸಲು ಕೈಲಾದಷ್ಟು ಪ್ರಯತ್ನ ಮಾಡೋಣ."

—ಫೆಬ್ರುವರಿ ೧೭ಕ್ಕೆ ಕೊಟ್ಟ ಹೇಳಿಕೆ.

ನಮ್ಮ ಪ್ರತಿಜ್ಞೆ ಮತ್ತು ಬಿನ್ನಹ

ಕೊರತೆಯ ಭಾಗಗಳಲ್ಲಿರುವವರಿಗೆ ನಾವು ಸಂಪೂರ್ಣ ಬೆಂಬಲ ನೀಡುವ ಬಗ್ಗೆ ಪ್ರತಿಜ್ಞೆ ಮಾಡುತ್ತೇವೆ. ದೇಶದ ಯಾವತ್ತೂ ಸಾಧನ ಸಾಮಗ್ರಿಯನ್ನು ಒಂದುಗೂಡಿಸಿ ಅವರಿಗೆ ತ್ವರಿತವಾಗಿ ನೆರವನ್ನು ನೀಡಲಾಗುತ್ತಿದೆ. ಅವರಿಗಿರುವ ಆಹಾರದ ಕೊರತೆಯಲ್ಲಿ ದೇಶದ ಉಳಿದ ಭಾಗವು ಪಾಲು ವಹಿಸುವದಲ್ಲದೆ ಸಮಪಾಲು ವಹಿಸುವದು. ಪ್ರತಿಯೊಬ್ಬನಿಗೆ ಯೋಗ್ಯ ಪ್ರಮಾಣದಲ್ಲಿ ಆಹಾರವು ದೊರೆಯುವಂತೆ ಮಾಡುವದಕ್ಕಾಗಿ ಶಿದಾ ಪದ್ಧತಿಯನ್ನು ವಿಸ್ತರಿಸಲಾಗುತ್ತಿದೆ. ಬೆಲೆ ನಿಯಂತ್ರಣವನ್ನು ತಪ್ಪದೆ ಸಾಗಿಸಲಾಗುವುದು. ಶಾಂತತೆ ಮತ್ತು ಆತ್ಮ ವಿಶ್ವಾಸದಿಂದ ನಡೆದುಕೊಳ್ಳಿರಿ. ನಿಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಕೊಂಡುಕೊಳ್ಳಬೇಡಿರಿ. ಲಾಭಬಡಕರೊಡನೆ ಯಾವದೇ ತರದ ಸಂಬಂಧವನ್ನಿಟ್ಟುಕೊಳ್ಳಬೇಡಿರಿ.

ಹೆಚ್ಚುಳಿದ ಭಾಗಗಳಲ್ಲಿರುವವರಿಗೆ ಸಂಪೂರ್ಣ ಸಹಾಯವನ್ನು ಒದಗಿಸಬೇಕೆಂದು ನಾವು ಅವರಿಗೆ ಬಿನ್ನವಿಸಿಕೊಳ್ಳುತ್ತೇವೆ. ನಿಮ್ಮಲ್ಲಿ ಹೆಚ್ಚಾಗಿ ಇರುವ ಕಾಳನ್ನು ನೀವು ಕೊಟ್ಟುಬಿಡಬೇಕಾಗಿದ್ದರೂ ನಿಮಗೆ ಸಾಕಷ್ಟು ಕಾಳು ಉಳಿಯುವುದು. ನಿಮ್ಮ ಪಟ್ಟಣದಲ್ಲಿ ಶಿದಾ ಕ್ರಮವನ್ನು ಕಡಿಮೆಮಾಡಿದರೆ ನಿಮ್ಮ ದೇಶಬಾಂಧವರಿಗೆ ನೆರವಾಗುವುದಕ್ಕಾಗಿ ಹೀಗೆ ಮಾಡಲಾಗಿದೆಯೆಂದು ನೆನಪಿನಲ್ಲಿಡಿರಿ. ಇಷ್ಟೆಲ್ಲ ಆಗಿಯೂ ನಿಮ್ಮ ಹತ್ತರ ಸಾಕಷ್ಟು ಉಳಿಯುವುದು. ಸ್ವಲ್ಪಾದರೂ ಕೂಡಿಹಾಕಿ ಇಡಬೇಡಿರಿ. ಅಧಿಕಾರಿಗಳೊಡನೆ ಸಹಕರಿಸಿರಿ.

ಆಹಾರದ ಕೊರತೆಯನ್ನು ಹೋಗಲಾಡಿಸಿರಿ

ಮಿತವ್ಯಯದಿಂದ ಬದುಕಿರಿ ಎಲ್ಲರೂ ಪಾಲುಗಾರರಾಗಿರಿ.

ವ್ಯಾಪಾರಿಗಳಿಗೆ ಮತ್ತು ಬೆಳೆಯುವವರಿಗೆ ಸಂದೇಶ

ನಿಮಗೆ ಶಕ್ಯವಿದ್ದಷ್ಟು ಕಾಳನ್ನೆಲ್ಲ ಹೊರಗೆಡವಿರಿ; ನೀವು ಕೂಡಿಡುವ ಪ್ರತಿಯೊಂದು ಮಣ ಕಾಳು ಒಬ್ಬ ದೇಶಬಾಂಧವನ ಮರಣಕ್ಕೆ ಕಾರಣವಾಗುವುದು. ನಿಯಂತ್ರಿತ ಬೆಲೆಗಳಿಗಷ್ಟೇ ಮಾರಿರಿ—ಅವು ನಿಮಗೆ ಹಾಗೂ ಗ್ರಾಹಕರಿಗೆ ಇಬ್ಬರಿಗೂ ಯೋಗ್ಯವಾಗಿವೆ. ಎರಡನೇಯವರಿಗೆ ದುಃಖ ಕೊಟ್ಟು ಹಣ ಗಳಿಸುವುದು ಪಾಪವೆಂದು ತಿಳಿಯತಕ್ಕದ್ದು.

ಲಾಭಬಡಕರನ್ನು ಮತ್ತು ಕಳ್ಳಪೇಟೆಗಾರರನ್ನು ತಮ್ಮ ಯಾವತ್ತೂ ಶಕ್ತಿಯನ್ನು ಉಪಯೋಗಿಸಿ ಹತ್ತಿಕ್ಕಬೇಕೆಂದು ಸರಕಾರ ಹಾಗೂ ಜನತೆಯು ನಿಶ್ಚಯಿಸಿರುತ್ತದೆ. <u>ಕಳ್ಳಪೇಟೆಯನ್ನು ತಪ್ಪಿಸಿರಿ; ಅದು ಅಪರಾಧವಾಗಿದೆ.</u>

ಹಿಂದುಸ್ಥಾನ ಸರಕಾರದ ಆಹಾರ ಖಾತೆ, ಹೊಸದಿಲ್ಲಿ, ಇವರ ಪ್ರಕಟನೆ

ಕರ್ಮವೀರ
ಹರಿಜನ ಪುರವಣಿ

ಮಂತ್ರಿಗಳ ಕರ್ತವ್ಯ

ಕಾಂಗ್ರೆಸ್ ಮಂತ್ರಿಗಳಿದೀಗ ಅಧಿಕಾರದಲ್ಲಿ ಬಂದಿರುವದರಿಂದ ಖಾದಿ ಮತ್ತು ಉಳಿದ ಗ್ರಾಮೋದ್ಯೋಗಗಳ ಅಭಿವೃದ್ಧಿಯ ಸಂಬಂಧದಲ್ಲಿ ಏನೇನು ಮಾಡುವರೆಂಬದನ್ನು ಕೇಳುವದು ನ್ಯಾಯ್ಯವಾಗಿದೆ. ನಾನು ಈ ಪ್ರಶ್ನೆಯನ್ನು ಸ್ವಲ್ಪ ವ್ಯಾಪಕಗೊಳಿಸಿ ಹಿಂದುಸ್ತಾನದಲ್ಲಿಯ ಎಲ್ಲ ಪ್ರಾಂತಿಕ ಸರ್ಕಾರಗಳಿಗೂ ಅದನ್ನು ಅನ್ವಯಿಸುವೆನು. ದಾರಿದ್ರ್ಯ ಎಲ್ಲ ಪ್ರಾಂತಗಳಿಗೆ ಸರ್ವಸಾಮಾನ್ಯವಾಗಿದೆ; ಅದರಂತೆ ಜನಸಾಮಾನ್ಯರ ಉದ್ಧಾರ ಮಾರ್ಗಗಳೂ ಒಂದೇ ಬಗೆಯಾಗಿರುವವು. ಅಖಿಲಭಾರತ ಚರಕಾಸಂಘ ಮತ್ತು ಅಖಿಲಭಾರತ ಗ್ರಾಮೋದ್ಯೋಗ ಸಂಘಗಳ ಅನುಭವವೂ ಇದೇ. ಇದೆಲ್ಲವನ್ನು ಯೋಗ್ಯರೀತಿಯಿಂದ ಸಂಘಟಿಸಬೇಕಾದರೆ ಒಬ್ಬ ಮಂತ್ರಿಯ ಇಡೀ ವೇಳೆ ವ್ಯಯವಾಗುವದರಿಂದ ಈ ಕಾರ್ಯಕ್ಕಾಗಿ ಒಬ್ಬ ಪ್ರತ್ಯೇಕ ಮಂತ್ರಿಯಿರಬೇಕೆಂದು ಸೂಚಿಸಲಾಗಿದೆ. ಇಂಗ್ಲಿಶ ಪ್ರಮಾಣದ ವೆಚ್ಚವನ್ನು ನಾವಿನ್ನೂ ಬಿಟ್ಟುಕೊಟ್ಟಿರುವದಿಲ್ಲಾದ್ದರಿಂದ ಈ ಸೂಚನೆ ಮಾಡಲು ನನಗೆ ಧೈರ್ಯ ಸಾಲದು. ಪ್ರತ್ಯೇಕ ಮಂತ್ರಿಯೊಬ್ಬನನ್ನು ನೇಮಿಸಲಿ ನೇಮಿಸದಿರಲಿ ಇದಕ್ಕಾಗಿ ಪ್ರತ್ಯೇಕ ಶಾಖೆಯೊಂದಿರುವುದತ್ಯವಶ್ಯ. ಆಹಾರ ಮತ್ತು ವಸ್ತ್ರಗಳ ಕೊರತೆಯ ಈ ಸಮಯದಲ್ಲಿ ಈ ಶಾಖೆ ಅತ್ಯಂತ ಸಹಾಯ ಮಾಡಬಲ್ಲದು. ಅ. ಭಾ. ಚ. ಸಂಘ ಮತ್ತು ಅ. ಭಾ. ಗ್ರಾಮೋದ್ಯೋಗ ಸಂಘಗಳಲ್ಲಿಯ ತಜ್ಞರ ಸಹಾಯ ಮಂತ್ರಿಗಳಿಗೆ ಸಿಕ್ಕುವದು. ಬಹಳ ಕಡಮೆ ಬಂಡವಲಿನಲ್ಲಿ ಮತ್ತು ಶಕ್ಯವಿದ್ದಷ್ಟು ಅಲ್ಪಾವಧಿಯಲ್ಲಿ ಇಡೀ ದೇಶದ ಜನರಿಗೆಲ್ಲ ಖಾದೀ ಉಡುಪು ಪೂರಯಿಸಬಹುದಾಗಿದೆ. ಸ್ವಂತಕ್ಕಾಗಿ ಪ್ರತಿಯೊಬ್ಬ ಹಳ್ಳಿಗ ಖಾದಿಯನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಪ್ರಾಂತಿಕ ಸರಕಾರ ಹಳ್ಳಿಗರಿಗೆ ಹೇಳಬೇಕು. ಇದರಿಂದ ತಾನಾಗಿಯೆ ಸ್ಥಳಿಕ ಉತ್ಪಾದನೆ ಮತ್ತು ಹಂಚಿಕೆ ಕಾರ್ಯರೂಪದಲ್ಲಿ ಬರುವದು. ಹಳ್ಳಿಗಳಲ್ಲಿಯ ಈ ಬಟ್ಟೆಗಳಲ್ಲಿ ಸ್ವಲ್ಪ ಉಳಿಕೆಯಾಗಿ ನಗರಗಳಿಗೂ ಅವನ್ನು ಕಳಿಸಲು ಸಾಧ್ಯವಾಗುವದು. ಇದರಿಂದ ಸ್ಥಳಿಕ ಗಿರಣಿಗಳಲ್ಲಿಯ ಕೆಲಸವೂ ಹಗುರಾಗುವದು. ಹೀಗಾದಲ್ಲಿ ಜಗತ್ತಿನ ಇತರ ಭಾಗಗಳಲ್ಲಿಯ ಬಟ್ಟೆಯ ಕೊರತೆಯನ್ನು ಹೋಗಲಾಡಿಸಲು ಈ ಗಿರಣಿಗಳು ಸಹಾಯಕವಾಗಬಹುದು.

ಇದನ್ನು ಹೇಗೆ ಕಾರ್ಯರೂಪದಲ್ಲಿ ತರಬಲ್ಲೆವು ?

ಇಂತಿಷ್ಟು ಅವಧಿಯಲ್ಲಿ ಹಳ್ಳಿಗರು ಸ್ವಂತಕ್ಕಾಗಿ ಬೇಕಾಗುವ ಬಟ್ಟೆಗಳನ್ನು ತಮ್ಮ ಹಳ್ಳಿಗಳಲ್ಲಿಯೆ ಸಿದ್ಧಪಡಿಸಿಕೊಳ್ಳಬೇಕೆಂದು ಸರಕಾರದವರು ಹಳ್ಳಿಗರಿಗೆ ಡಂಗುರ ಸಾರಬೇಕು. ಆ ಅವಧಿಯ ನಂತರ ಅವರಿಗೆ ಬಟ್ಟೆಗಳನ್ನು ಪೂರೆಯಿಸಲಾಗುವದಿಲ್ಲೆಂದೂ ತಿಳಿಸಬೇಕು. ಸರಕಾರದವರು ಅವರಿಗೆ ಅವಶ್ಯವಿದ್ದಲ್ಲೆಲ್ಲ ಮೂಲ ಬೆಲೆಗೆ ಅರಳೆಯನ್ನು ಕೊಡುವದಲ್ಲದೆ ಬಟ್ಟೆಯ ಉತ್ಪಾದನಕ್ಕೆ ಬೇಕಾದ ಉಪಕರಣಗಳನ್ನೂ ಒದಗಿಸಬೇಕು. ಈ ಹಣವನ್ನು ಸ್ವಲ್ಪ ಸ್ವಲ್ಪ ಕಂತಿನ ಮೂಲಕ, ಅಯಿದು ವರ್ಷಗಳಲ್ಲಿ ಅನ್ನಿರಿ, ಮುಟ್ಟಿಸಿಕೊಳ್ಳಬೇಕು. ಅವಶ್ಯವಿದ್ದಲ್ಲೆಲ್ಲ ಅವರು ಶಿಕ್ಷಕರನ್ನು ಪೂರೈಸಬೇಕಲ್ಲದೆ ಹಳ್ಳಿಗರು ಸ್ವಂತಕ್ಕಾಗಿ ತಮ್ಮ ಬಟ್ಟೆಗಳನ್ನುಪಯೋಗಿಸಿದ ಬಳಿಕ ಹೆಚ್ಚಿನದನ್ನು ಸರಕಾರದವರು ಕೊಂಡುಕೊಳ್ಳಬೇಕು. ಹೆಚ್ಚಿನ ಬೊಬ್ಬಾಟವಿಲ್ಲದೆ ಉತ್ಪಾದನೆ ಮುಂತಾದ್ದ ಹೆಚ್ಚಿನ ವೆಚ್ಚವಿಲ್ಲದೆ ಬಟ್ಟೆಯ ಕೊರತೆ ಇದರಿಂದ ನೀಗುವದು. ಹಳ್ಳಿಗಳ ಪರಿಶೀಲನೆ ಮಾಡಿ ಹಳ್ಳಿಗರಿಗೆ ಬೇಕಾದ ಯಾವಾವ ಪದಾರ್ಥಗಳನ್ನು ಹೊರಗಿನ ಹೆಚ್ಚಿನ ಸಹಾಯವಿಲ್ಲದೆ ಸಿದ್ಧಪಡಿಸಬಹುದೆಂಬದರ ಯಾದಿಯನ್ನು ತಯಾರ ಮಾಡಬೇಕು. ಉದಾಹರಣಾರ್ಥವಾಗಿ ಗಾಣದಲ್ಲಿ ನುರಿಸಿದ ಎಣ್ಣೆ ಮತ್ತು ಹಿಂಡಿ ಗಾಣಗಳಲ್ಲಿ ತಯಾರಮಾಡಿದ ದೀಪಕ್ಕೆಬೇಕಾದ ಎಣ್ಣೆ, ಕುಟ್ಟಿದ ಅಕ್ಕಿ, ಈಚಲ ಬೆಲ್ಲ, ಜೇನತುಪ್ಪ, ಆಟಿಗೆಸಾಮಾನ ಚಾಪೆಗಳು, ಕೈಯಿಂದ ಮಾಡಿದ ಕಾಗದ, ಹಳ್ಳಿ ಸಾಬೂಣ ಮೊದಲಾದವುಗಳ ಯಾದಿಯನ್ನು ಸಿದ್ಧಮಾಡಬಹುದು. ಹೀಗೆ ಸಾಕಷ್ಟು ದಕ್ಷತೆ ವಹಿಸಿದ್ದಾದರೆ ಜೀವನ್ಮೃತಾವಸ್ಥೆಯಲ್ಲಿ ಇದೀಗ ಇರುವ ಹಳ್ಳಿಗಳಲ್ಲಿ ನವಚೈತನ್ಯವುಂಟಾದಂತಾಗಿ ತಮಗೆ ಬೇಕಾದ ಮತ್ತು ಹಿಂದುಸ್ತಾನದಲ್ಲಿ ನಗರ ಪಟ್ಟಣಗಳ ಬಹುಶಃ ಎಲ್ಲ ಬೇಡಿಕೆಗಳನ್ನು ಪೂರಯಿಸುವ ಪ್ರಚಂಡ ಶಕ್ತಿಸಾಮರ್ಥ್ಯಗಳನ್ನು ಅವು ತೋರಿಸಬಲ್ಲವು.

ಹಿಂದುಸ್ತಾನದಲ್ಲಿ ಗೋಸಂಪತ್ತಿ ವಿಪುಲವಾಗಿದೆ ಆದರೆ ನಮ್ಮ ಅಕ್ಷಮ್ಯ ಅಲಕ್ಷದಿಂದ ದನಕರುಗಳು ಬಳಲುತಿವೆ. ಗೋಸೇವಾಸಂಘಗಳ ಕಾರ್ಯದ ಅನುಭವವೂ ಇನ್ನೂ ಸಾಕಷ್ಟು ಇಲ್ಲ. ಅವು ಇನ್ನೂ ಅಮೂಲ್ಯ ಸಹಾಯವನ್ನು ಸಲ್ಲಿಸಬಲ್ಲವು.

ಮೂಲ ಶಿಕ್ಷಣ ಹಳ್ಳಿಗರಿಗೆ ದೊರೆಯಲಿಕ್ಕೆ ಬೇಕು. ಅದಿಲ್ಲದ್ದರಿಂದ ಹಳ್ಳಿಗರು ಶಿಕ್ಷಣವಿಲ್ಲದ ಬಳಲುತಿರುವರು ಹಿಂದುಸ್ತಾನಿ ತಾಲಿಮ ಸಂಘದವರು ಈ ಕೊರತೆಯನ್ನು ಹಿಂಗಿಸಬಲ್ಲರು. ಕಾಂಗ್ರೆಸ ಸರಕಾರಗಳು ಈ ಮೊದಲೆ ಇದರ ಪ್ರಯೋಗವನ್ನು ಪ್ರಾರಂಭಿಸಿರುವವು. ಆದರೆ ಕಾಂಗ್ರೆಸ ಮಂತ್ರಿಗಳ ರಾಜೀನಾಮೆಯಿಂದ ಅದಕ್ಕೆ ತಡೆಯುಂಟಾಯಿತು. ಅದನ್ನು ಸುಲಭವಾಗಿ ಮತ್ತೆ ಮುಂದೆ ಸಾಗಿಸಬಹುದು.

ಹೊಸದಿಲ್ಲಿ ಮೋ. ಕ. ಗಾಂಧಿ

೨೨—೪—೪೬

ಟೀಕೆ ಟಿಪ್ಪಣೆಗಳು

ಕರುಣೆ ವಿರುದ್ಧ ನಿಷ್ಕರುಣೆ

ನಿಷ್ಕರುಣೆ, ಹಿಂಸೆ, ದ್ವೇಷ ಮತ್ತು ಅಸತ್ಯಗಳ ವಿರುದ್ಧ ಉಪಯೋಗಿಸಿದಾಗಲೆ ಮಾನವನಲ್ಲಿಯ ಕರುಣೆ, ಅಹಿಂಸೆ, ಪ್ರೇಮ ಮತ್ತು ಸತ್ಯದ ಬೆಲೆ ಪರೆಗೆ ಹತ್ತುವದು.

ಇದು ಸತ್ಯವಾಗಿದ್ದರೆ ಕೊಲೆಗಡಕನೆದುರು ಅಹಿಂಸೆ ನಿರರ್ಥಕವೆಂದು ಹೇಳುವುದು ತಪ್ಪಾಗುವದು. ಕೊಲೆಗಡಕನೆದುರು ಅಹಿಂಸೆಯ ಪ್ರಯೋಗ ಮಾಡುವುದೆಂದರೆ ಆತ್ಮನಾಶ ಮಾಡಿಕೊಂಡಂತೆಯೆ ಎಂಬುದಾಗಿ ನಿಶ್ಚಯವಾಗಿ ಹೇಳಬೇಕಾಗುವದು. ಆದರೆ ಅಹಿಂಸೆಯ ನಿಜವಾದ ಪರೀಕ್ಷೆಯೇ ಅದು. ಆದರೆ ಕೇವಲ ನಿಃಸಹಾಯನಾಗಿ ಯಾವನಾದರೊಬ್ಬ ಆತ್ಮನಾಶಮಾಡಿಕೊಂಡರೆ ಅವನು ಪರೀಕ್ಷೆಯಲ್ಲಿ ತೇರ್ಗಡೆಯಾದವನೆಂದು ಎಂದಿಗೂ ಹೇಳಲಿಕ್ಕೆ ಬರುವುದಿಲ್ಲ. ಕೊಲ್ಲಲ್ಪಡುವಾಗ ಯಾವನು ತನ್ನ ಕೊಲೆಗಡಕನ ಮೇಲೆ ಸಿಟ್ಟಾಗದೆ ಅವನನ್ನು ಕ್ಷಮಿಸೆಂದು ಪರಮಾತ್ಮನನ್ನು ಮೊರೆ ಹೋಗುವನೊ ಅವನೆ ನಿಜವಾಗಿ ಅಹಿಂಸಾವಾದಿ. ಜೀಸಸ್‌ಕ್ರಿಸ್ತನ ಜೀವನದಲ್ಲಿ ನಾವು ಇದನ್ನು ನೋಡಬಹುದು ಇತಿಹಾಸ ನಮಗೆ ಇದಕ್ಕೆ ಸಾಕ್ಷಿ. ಶಿಲುಬಿನ ಮೇಲೆ ಏರಿಸಲ್ಪಟ್ಟಾಗ ಸಾಯುತ್ತಿರುವಾಗ ಕೂಡ ಅವನು "ಪರಮಾತ್ಮನೆ ಅವರನ್ನು ಕ್ಷಮಿಸು. ತಾವೇನು ಮಾಡುತಿರುವೆವೆಂಬುದು ಅವರಿಗೆ ತಿಳಿಯುವದಿಲ್ಲ." ಎಂದಂದನಂತೆ. ಉಳಿದ ಧರ್ಮಗಳಲ್ಲಿಯೂ ಇಂಥ ಉದಾಹರಣೆಗಳನ್ನು ಕಾಣಬಹುದು. ಆದರೆ ಜಗತ್ತಿನಲ್ಲೆಲ್ಲ ಪ್ರಸಿದ್ಧವಿದ್ದ ಮೇಲಿನ ಅವತರಣಿಕೆಯನ್ನು ಇಲ್ಲಿ ಉದಾಹರಿಸಲಾಗಿದೆ.

ನಮ್ಮ ಅಹಿಂಸೆ ಇಷ್ಟೊಂದು ಮೇಲ್ಮಟ್ಟಕ್ಕೆ ಮುಟ್ಟದಿದ್ದುದು ವಿಷಯಾಂತರ. ನಮ್ಮ ಅಶಕ್ತತೆಗಾಗಿ ಇಲ್ಲವೆ ಅನನುಭವಕ್ಕಾಗಿ ಅಹಿಂಸೆಯ ಮಟ್ಟನ್ನಿಳಿಸುವದು ಮಹಾಪರಾಧವಾಗುವದು ಧ್ಯೇಯದ ನಿಜವಾದ ತಿಳಿವಳಿಕೆಯಿಲ್ಲದೆ ಅದನ್ನು ಸಾಧಿಸುವ ಆಶೆ ತಳೆಯುವದು ನಿರರ್ಥಕ. ಆದುದರಿಂದ ಅಹಿಂಸೆಯ ಶಕ್ತಿಯನ್ನು ತಿಳಿದುಕೊಳ್ಳಲು ನಮ್ಮ ವಿವೇಕವನ್ನುಪಯೋಗಿಸಿಕೊಳ್ಳುವುದು ಅವಶ್ಯವಾಗಿದೆ.

ಮೋ. ಕ. ಗಾಂಧಿ

೨೧-೪-೪೬ (ಗುಜರಾಥಿಯಿಂದ)

ಏಕೆ ಕೂಡದು ?

"ಕಸ್ತೂರಬಾ ರಾಷ್ಟ್ರೀಯ ನಿಧಿಯ ಪ್ರತಿನಿಧಿಗಳು ಶಾಸನ ಸಭಾ ಸದಸ್ಯರೂ ಆಗಿ ಬಿಟ್ಟರೆ ಅದರಿಂದ ಹಳ್ಳಿಗರಿಗೆ ಕೆಟ್ಟ ಮೇಲ್ಪಂಕ್ತಿ ಹಾಕಿಕೊಟ್ಟಂತಾಗುವದೆಂದು ನಿಮ್ಮ ಹೇಳಿಕೆ. ಈಗಿರುವ ಶಾಸನ ಸಭೆಗಳ ಮಟ್ಟಿಗೆ ಇದು ಸರಿಯಾಗಿ ಅನ್ವಯಿಸಬಹುದಾದರೂ ನಮಗೆ ಸ್ವರಾಜ್ಯ ದೊರೆತಾಗ ಪರಿಸ್ಥಿತಿ ಬೇರ್ಪಡುವದು. ಆದುದರಿಂದ ನಾವು ಶಾಸನ ಸಭೆಗಳಲ್ಲಿರುವುದು ಅನುಕೂಲವಲ್ಲವೆ? ಸಾಮಾನ್ಯವಾಗಿ ವರ್ಷಗಟ್ಟಳೆ ಹಿಡಿಯಬಹುದಾದ ನಾವು ಮಾಡಬಯಸುವ ಕೆಲಸಗಳನ್ನು ಶಾಸನ ಸಭೆಯಲ್ಲಿ ಒಂದೇ ಅಧಿವೇಶನದಲ್ಲಿ ಸಾಧಿಸಬಹುದಲ್ಲವೆ?"

ತಂಗಿಯೊಬ್ಬಳು ಮೇಲಿನಂತೆ ಬರೆಯುತ್ತಾಳೆ. ಆದರೆ ಆಕೆಯ ವಾದಧಾರೆಯಲ್ಲಿ ಮೂರು ತಪ್ಪುಗಳಿರುವಂತೆ ತೋರುತ್ತದೆ. ಮೊದಲನೆಯದಾಗಿ, ಈಗಿನ ಮತ್ತು ಮುಂದೆ ಸ್ವರಾಜ್ಯ ದೊರೆತ ಮೇಲಿನ ಶಾಸನ ಸಭೆಗಳಲ್ಲಿ ನಾನು ಯಾವ ಪರಿಭೇದವನ್ನೂ ಮಾಡಿಲ್ಲ, ನನ್ನ ವಾದಕ್ಕೆ ಅದು ಬೇಕಾಗಿಯೆ ಇಲ್ಲ.

ಎರಡನೆಯದಾಗಿ, ಶಾಸನ ಸಭಾ ಸದಸ್ಯರು ಮತದಾರರಿಗೆ ಮಾರ್ಗದರ್ಶಕರೆಂದು ಭಾವಿಸುವದೇ ಒಂದು ಕಣ್ಮಸಕಲ್ಲವೆ? ಶಾಸನ ಸಭೆಗಳಿಗೆ ಪ್ರತಿನಿಧಿಗಳನ್ನು ಕಳಿಸುವ ಮತದಾರರು ಅವರಿಂದ ತಾವು ಮಾರ್ಗದರ್ಶನ ಪಡೆಯಬೇಕೆಂದು ಬಯಸಿರುವದಿಲ್ಲ. ಬದಲಿಗೆ ಜನರ ಇಚ್ಛೆಗಳನ್ನು ವಿಧೇಯತೆಯಿಂದ ಪೂರೈಸುವ ಸಲುವಾಗಿ ಅವರನ್ನು ಕಳಿಸಿದೆ. ಆದುದರಿಂದ ಜನತೆಯೇ ಮಾರ್ಗದರ್ಶಕ ಹೊರತು ಸದಸ್ಯರಲ್ಲ. ಸದಸ್ಯರು ಆಳುಗಳು, ಜನರು ಒಡೆಯರು. ಈ ಕಣ್ಮಸಕಿಗೆ ಸದ್ಯದ ಸರಕಾರಪದ್ಧತಿಯೇ ಕಾರಣ. ಈ ಕಣ್ಮಸಕು ಮಾಯವಾದೊಡನೆ ಶಾಸನ ಸಭೆಗಳಲ್ಲಿ ಪ್ರವೇಶ ಪಡೆಯಲು ನಡೆದಿರುವ ಹುಚ್ಚು ಮೇಲಾಟ ಬಹಳ ಕಡಿಮೆಯಾಗುವದು. ಅಲ್ಲಿ ಹೋಗುವದೇ ಕರ್ತವ್ಯವಾದ ಕೆಲವರು ಇರುವರು ಮತ್ತು ಅವರು ಜನತೆಯ ಇಚ್ಛೆಯನ್ನು ನೆರವೇರಿಸಲು ಅಲ್ಲಿಗೆ ಹೋಗುವರು. ಇಂದು ಶಾಸನ ಸಭೆಗಳಲ್ಲಿ ಸ್ವರಾಜ್ಯಕ್ಕಾಗಿ ಹೋರಾಡುವ ಸಲುವಾಗಿ ಅವರು ಪ್ರವೇಶಿಸುತ್ತಾರೆ. ಆದರೆ ಈ ರೀತಿಯಿಂದಲೂ ಅಲ್ಲಿ ಬಹಳೇನೂ ಸಾಧಿಸುವದು ಸಾಧ್ಯವಿಲ್ಲೆಂಬ ಮಾತು ಈಗ ಹಲವರಿಗೆ ಮನವರಿಕೆಯಾಗಿ ಹೋಗಿದೆ.

ಈ ವಾದದ ಮೂರನೆಯ ತಪ್ಪೆಂದರೆ, ಜನತೆಗೆ ದಾರಿ ತೋರಿಸಲು ಶಾಸನ ಸಭೆಗಳೇ ಸರ್ವೋತ್ತಮ ಸ್ಥಾನಗಳೆಂಬ ತಿಳಿವಳಿಕೆ. ಜಗತ್ತಿನಲ್ಲಿ ಸುತ್ತಲೂ ನೋಡಿ ಅರಿಯ್ದರೆ, ಸರ್ವೋತ್ತಮವಾದ ಮಾರ್ಗದರ್ಶನ ಯಾವಾಗಲೂ ಹೊರಗಿನಿಂದಲೇ ಬರುತಿರುವದೆಂಬ ಮಾತು ಖಚಿತವಾಗದಿರದು. ಹಾಗಿಲ್ಲದೆ ಇದ್ದ ಪಕ್ಷದಲ್ಲಿ ಎಲ್ಲ ಸರಕಾರಗಳಲ್ಲಿಯೂ ಹೊಲಸು ಸೇರಿಕೊಂಡೀತು. ಏಕೆಂದರೆ ಮಾರ್ಗದರ್ಶನ ಬೇಕಾದ ಕ್ಷೇತ್ರ ವಿಶಾಲವಾಗಿರುವಾಗ ಶಾಸನ ಸಭೆಗಳು ಇಷ್ಟು ಚಿಕ್ಕವಾಗಿರುತ್ತವೆ. ಕಡೆಗೆ ನೋಡಿದರೆ ರಾಷ್ಟ್ರೀಯ ಜೀವನದ ಸಾಗರದಲ್ಲಿ ಪಾರ್ಲಮೆಂಟುಗಳು ಬರಿ ಬಿಂದುಪ್ರಾಯಗಳಲ್ಲವೆ ?

ಹೊಸದಿಲ್ಲಿ ಮೋ. ಕ. ಗಾಂಧಿ

೨೦—೪—೪೬

ವಿಷಾದಕರ

" ಗ್ರಾಮ ಉದ್ಯೋಗ ಪತ್ರಿಕೆ " ಯಲ್ಲಿ ಬರೆಯುತ್ತ ಶ್ರೀ ಜೆ ಸಿ. ಕುಮಾರಪ್ಪನವರು ಹೊರದೇಶಗಳಿಂದ ಬರುವ ಆಯಾತಗಳ ಮೇಲೆ ನಿರ್ಭರರಾಗಿರುವದು ಮತ್ತು ಅದಕ್ಕೆ ಉತ್ತೇಜನ ಕೊಡುವದು ಸಂಪೂರ್ಣ ತಪ್ಪು ತತ್ವವೆಂದು ಹೇಳುತ್ತಾರೆ. ಹಿಂಗಾರಿ ಮಳೆ ಆಗದ್ದರಿಂದ ಯುಕ್ತಪ್ರಾಂತ, ಬಿಹಾರಗಳಲ್ಲಿ ಮತ್ತು ಮಂಜಿನ ಉಪದ್ರವದಿಂದ ಪಂಜಾಬ, ಗಡಿನಾಡುಗಳಲ್ಲಿಯೂ ನಿರೀಕ್ಷಿಸಲಾಗಿರುವ ಸಕ್ಕರೆ ಕೊರತೆಯ ಸಂಬಂಧದಲ್ಲಿ ಅಡವಿ ಬದಿಗಳಲ್ಲಿರುವ ತಾಳಿಮರಗಳಿಗೆ ಮೊಗೆ ಕಟ್ಟಿ " ನೀರಾ " ಇಳಿಸಿ ಅದರಿಂದ ಬೆಲ್ಲ ಮತ್ತು ಸಕ್ಕರೆಯನ್ನು ಹುಟ್ಟಿಸುವ ಮೂಲಕ ಸಕ್ಕರ ಕೊರತೆಯನ್ನು ನಿವಾರಿಸಬೇಕೆಂದು ಅವರು ಸೂಚಿಸುತ್ತಾರೆ.

ಚಿಮಣಿ ಎಣ್ಣೆಯಂಥ ಮೂಲ ಅವಶ್ಯಕತೆಯ ಆಯಾತದ ವಿಷಯದಲ್ಲಿ, ನಮ್ಮ ಅವಶ್ಯಕತೆಯನ್ನು ಪೂರೈಸುವಗೋಸ್ಕರ ವನಸ್ಪತಿಜನ್ಯ ಎಣ್ಣೆಗಳನ್ನು ಇನ್ನೂ ಹೆಚ್ಚಾಗಿ ತೆಗೆಯಬೇಕೆಂದು ಅವರ ಸೂಚನೆ. ಆಯಾತ ಮಾಡಿದರೆ ಅದರ ಪರಿಣಾಮವಾಗಿ ನಮ್ಮವೇ ಆವ ಕೆಲ ಉತ್ಪಾದನೆಗಳನ್ನು ಬೆಲೆಯಾಗಿ ನಿರ್ಯಾತ ಮಾಡುವದು ಅನಿವಾರ್ಯವಾಗುವದರಿಂದ ದೀರ್ಘಾವಧಿಯಲ್ಲಿ ಅದು ಮತ್ತಷ್ಟು ಸಂಕಷ್ಟಕ್ಕೇ ಮೂಲವಾಗುವದು.

ಬಿಹಾರದಲ್ಲಿ ಸರ್ ಹರ್ಬರ್ಟ ಸಿವಾರ್ಟರ್ರು (ವ್ಯವಸಾಯ ಸಂಶೋಧನ ಮಂಡಲದ ಉಪಾಧ್ಯಕ್ಷರು) ವರ್ಜೀನಿಯಾ ಸಿಗರೇಟ್ ಹೊಗೆಸೊಪ್ಪನ್ನು ಬೆಳೆಸುವದಕ್ಕಾಗಿ ಸಿದ್ಧಗೊಳಿಸಿದ ಕಿಡಿಗೇಡಿ ಯೋಜನೆಯ ಕಡೆಗೆ ಅವರು ಲಕ್ಷ್ಯ ಸೆಳೆದಿದ್ದಾರೆ. ಆ ಯೋಜನೆಯಂತೆ ಬೇರೆ ಬೇರೆ ಸ್ಥಳಗಳಲ್ಲಿ ಹೊಗೆಸೊಪ್ಪಿನ ಸಂಶೋಧನ ಸಂಸೆಗಳನ್ನು ತೆರೆಯಲಾಗುವದು. ಇಂಪೀರಿಯಲ್ ಟೊಬ್ಯಾಕೊ ಕಂಪನಿಯವರು ವಿದೇಶಗಳಲ್ಲಿ ಹೊಗೆಸೊಪ್ಪಿನ ಕೃಷಿಯನ್ನು ಕುರಿತು ತರಬೇತಿ ಪಡೆಯಲು ೫೦೦ ಪೌಂಡಿನ ಎರಡು ವಿದ್ಯಾರ್ಥಿ ವೇತನಗಳನ್ನು ಕೊಟ್ಟದ್ದಾರೆ. ಇಂಥ ಸ್ಥಿತಿಯಲ್ಲಿ ಹೊಗೆಸೊಪ್ಪು ಸಂಶೋಧನೆಗಾಗಿ ಅಮೂಲ್ಯ ಹಣವನ್ನೂ ಸಮಯವನ್ನೂ ದುಂದುಮಾಡದೆ ದೊರೆಯ್ಯಬಹುದಾದ ಎಲ್ಲ ಭೂಮಿಯನ್ನು ಆಹಾರದ ಬೆಳೆಗಾಗಿ ನಿಯೋಜಿಸುವಗೋಸುಗವೇ ಎರಡನ್ನೂ ಉಪಯೋಗಿಸುವದೇ ಸರಕಾರದ ಸ್ವಯಂಸಿದ್ಧ ಕರ್ತವ್ಯವಾಗಿತ್ತು. ಆದರೆ ಈ " ಇಂಪೀರಿಯಲ್ ಕೌನ್ಸಿಲು " ಗಳ ಬುದ್ಧಿಗೆ ಗೋಚರವಾಗುವದೆಂದರೆ ಹೊಗೆಸೊಪ್ಪು, ಉದ್ದ ಎಳೆಯ ಹತ್ತಿ ಅಥವಾ ಕಾರಖಾನೆಗಳಿಗಾಗಿ ದಪ್ಪ ತೊಗಟೆಯ ಕಬ್ಬು ಮತ್ತು ನಿರ್ಯಾತಕ್ಕಾಗಿ ಸೇಂಗಾ ಇವುಗಳ ಬೆಳೆ ಮತ್ತು ಆ ಮೂಲಕ " ಇಂಡಿಯಾ ಲಿಮಿಟೆಡ್ " ಎಂಬ ಸೋಗು ಹಾಕಿಕೊಂಡಿರುವ ವಿದೇಶಿ ವ್ಯಾಪಾರಿಗಳ ಹಿತ ಸಾಧಿಸುವದು ಹೊರತು ಬೇರೊಂದಿಲ್ಲ.

ಹೊಸದಿಲ್ಲಿ ಮೋ. ಕ. ಗಾಂಧಿ

೨೧—೪—೪೬

ಉರ್ದು ಲಿಪಿಯಲ್ಲಿ " ಹರಿಜನ "

" ಹರಿಜನ " ಪತ್ರಿಕೆಗೆ ಹಿಂದುಸ್ತಾನಿ ಸಂಸ್ಕರಣವಾದರೆ " ಹರಿಜನ ಸೇವಕ " ಮತ್ತು ಗುಜರಾತಿಯದಾದರೆ " ಹರಿಜನ ಬಂಧು " ಎಂದು

—೧೦ನೇ ಪುಟ ನೋಡಿರಿ

ಶಾಸ್ತ್ರಿಯವರೊಡನೆ ಭೆಟ್ಟಿ

ಈಗ ಶ್ರೀ ಶಾಸ್ತ್ರಿಯವರು ಕಣ್ಮರೆಯಾಗಿರುವ ದಾಗಿ, ಗಾಂಧೀಜಿಯೊಡನೆ ಅವರ ಕೊನೆಯ ಮಾತುಕತೆಗಳಿಗೆ ವಿಷಾದಮಯ, ಆದರೂ ಮಹತ್ವದ ಪ್ರಾಮುಖ್ಯವುಂಟಾಗಿದೆ.

ಮೊದಲನೆ ಭೆಟ್ಟಿ ಜನವರಿ ೨೨ ಕಂಜೆ ಜರಗಿತು. ಶಾಸ್ತ್ರಿಗಳು ತೀರ ಅಸ್ವಸ್ಥರಾಗಿರುವರೆಂದೂ ತಮ್ಮ ಗೊಬ್ಬರಿಗೆ ಕೆಲ ನಿಮಿಷ ಅವರ ಬಳಿಗೆ ಪ್ರವೇಶ ದೊರೆಯಬಹುದಾದ ಸ್ಥಿತಿಯಿದೆಯೆಂದೂ ಗಾಂಧಿಜಿಗೆ ತಿಳಿದುಬಂದಿತ್ತು. ನಾನೂ ನನ್ನ ಸಹೋದರನೂ ಅವರೊಡನೆ ಹೋಗಬೇಕೆಂದು ಶ್ರೀ ಜಗದೀಶನ್ ಅವರು ಸಲಹೆ ಕೊಟ್ಟಿದ್ದರು "ನಿಮ್ಮನ್ನು ಕಂಡರೆ ಶಾಸ್ತ್ರಿಗಳಿಗೆ ಸಂತೋಷವಾಗುವದು" ಎಂದು ಅವರು ಹೇಳಿದ್ದರು ಗಾಂಧೀಜಿ ನಮ್ಮಿಬ್ಬರನ್ನೂ ಶ್ರೀ ಮಣಿಲಾಲ ಗಾಂಧಿಯವರನ್ನೂ ಸಂಗಡ ಕರೆದುಕೊಂಡರು. ಹೋಗಿದ್ದರೂ ನಾವು ಹೊರಗೇ ಕಾಯಬೇಕಾಗುವದೋ ಏನೋ ಎಂದು ಎಚ್ಚರಿಕೆ ಕೊಟ್ಟಿದ್ದರು ಆದರೆ ಡಾಕ್ಟರರು ರೋಗಿಯ ಆರೋಗ್ಯವನ್ನು ಕುರಿತು ಹೆಚ್ಚು ಉತ್ಸಾಹದ ಸುದ್ದಿ ಹೇಳಿದ್ದರಿಂದ ನಾವೆಲ್ಲರೂ ಒಳಗೆ ಪ್ರವೇಶ ಪಡೆದೆವು. ಒಂದು ಸಮಯದಲ್ಲಿ ಗಾಂಧೀಜಿ ಮದ್ರಾಸಿಗೆ ಬರುವವರೆಗೆ ಬದುಕುವ ಆಶೆಯನ್ನೇ ಶಾಸ್ತ್ರಿಗಳು ತೊರೆದಿದ್ದರು. ಈಗ ಅವರನ್ನು ಪ್ರತ್ಯಕ್ಷವಾಗಿ ಕಾಣುವ ಯೋಗ ಒದಗಿದ್ದರಿಂದಾದ ಆನಂದದ ಆವೇಗ ಅವರನ್ನು ಪುಲಕಿತರನ್ನಾಗಿ ಮಾಡಿತು. ಗಾಂಧೀಜಿ ಒಳ ಹೊಕ್ಕು ಹಾಸಿಗೆಯ ಮಗ್ಗುಲಿಗೆ ಸಾಗಿದೊಡನೆ ದಿಂಬಿಗೆ ಆನಿಸಿ ಒರಗಿಕೊಂಡಿದ್ದ ಅವರು ಒಮ್ಮೆಲೆ ನೆಟ್ಟಗೆ ಕುಳಿತುಕೊಂಡರು "ನಿನ್ನನು ಆಲಿಂಗಿಸಿಕೊಳ್ಳಲು ಸಾಧ್ಯವಾಗುವಷ್ಟು ಹತ್ತಿರಬರಬೇಕೆಂದು ನನ್ನ ಆತುರ, ಪ್ರಿಯ ಸೋದರಾ!" ಎಂದು ಅವರು ಗದ್ಗದಿತ ಸ್ವರದಿಂದ ಒಡನುಡಿದರು.

ಗಾಂಧೀಜಿ ಅವರ ಕೈಯನ್ನು ಹಿಡಿದುಕೊಂಡು ಸಂತೈಸತೊಡಗಿದರು. "ನನ್ನನ್ನು ಆಲಿಂಗಿಸಿ ಉದ್ವೇಗವನ್ನು ಹೆಚ್ಚಿಸಿಕೊಳ್ಳಬಾರದು" ಎಂದು ಕೇಳಿಕೊಂಡರು. ಆ ಮೇಲೆ ಆ ಕೀರ್ತಿಶಾಲಿ ರೋಗಿ ಮತ್ತೆ ದಿಂಬಿನ ಮೇಲೆ ಒರಗಿಕೊಂಡರು. ಗಾಂಧೀಜಿಯ ಕೈಯನ್ನು ಮಾತ್ರ ಅವರು ಎರಡೂ ಕೈಗಳಿಂದ ಹಿಡಿದುಕೊಂಡಿದ್ದರು.

ಈ ಉದ್ವೇಗದಿಂದ ರೋಗಿಯ ಉಸಿರು ಬಹಳ ಬಿಗಿದುಬಂದಿತ್ತು. ಮಹಾ ಪ್ರಯಾಸದಿಂದ ಅವರು ಆರಂಭಿಸಿದರು "ನಿಮಗೆ ಒಂದು ಸಂಗತಿಯನ್ನು ಹೇಳಬೇಕೆಂದಿದ್ದೆ" ಶಬ್ದ ಶಬ್ದಕ್ಕೂ ಉಸಿರುಗಟ್ಟುತ್ತಿತ್ತು. ಅವರು ಮುಂದುವರಿದಾಗ ಅವರ ಕಣ್ಣುಗಳು ಒದ್ದೆಯಾಗಿದ್ದವು. "ಶಾಂತಿಯ ಇನ್ನೊಂದು ಸಂಧಿ ಕಳೆದುಹೋಗುತ್ತಿತು. ಅವರು ಅಲ್ಲಿ ಶಾಂತಿಸಂಧಾನ ಮಂಡಲದಲ್ಲಿ ಕುಳಿತಿದ್ದಾರೆ ಆದರೆ ನಿಮ್ಮನ್ನು ಬಿಟ್ಟರೆ ಮಾನವ್ಯದ ಹೆಸರಲ್ಲಿ ಮಾತಾಡಬಲ್ಲವರಾರು? ಹಿಂದುಸ್ತಾನ ತನ್ನ ಕರ್ತವ್ಯದಲ್ಲಿ ಪರಾಙ್ಮುಖವಾಯಿತೇನೋ ಎನಿಸತೊಡಗಿದೆ." ಗಾಂಧೀಜಿ ಸೆರೆಮನೆಯಿಂದ ಬಿಡುಗಡೆಯಾಗಿ ಬಂದ ದಿನದಿಂದಲೂ ಶಾಸ್ತ್ರಿಗಳು ಅವರಿಗೆ ಸಾನ್‌ಫ್ರಾನ್ಸಿಸ್ಕೋದ ಶಾಂತಿ ಪರಿಷತ್ತಿಗೆ ಹೋಗಬೇಕೆಂದು ಪ್ರಾರ್ಥಿಸುವ ಪತ್ರಗಳನ್ನು ಬರೆಯುತ್ತ ಬಂದಿದ್ದರು. "ಅವರು ಕರೆಯದಿದ್ದರೂ ನೀವು ಸತ್ಯ ಅಹಿಂಸೆಗಳ ಆಚಾರ್ಯರಾಗಿ ಉಪಸ್ಥಿತರಾಗಬೇಕು. ನಿಮ್ಮ ಸಾನ್ನಿಧ್ಯವೇ ಪ್ರಚಂಡ ಪರಿಣಾಮವನ್ನು ಮಾಡಬಲ್ಲದು. ನೀವು ಶಿಷ್ಟಾಚಾರದ ನೆವ ಹೇಳಬಾರದು."

ಅವರು ಬರೆಯುತ್ತಿದ್ದುದರ ತಿರುಳನ್ನು ನನ್ನ ಮಾತುಗಳಲ್ಲಿಯೇ ಕೊಡಲು ನಾನು ಹೆಣಗಿದ್ದೇನೆ. ತಾವೆಲ್ಲೇ ಇದ್ದರೂ ತಮ್ಮ ಅಹಿಂಸೆ ಪರಿಣಾಮಕಾರಿಯಾಗಬೇಕು ಎಂಬುದು ಗಾಂಧೀಜಿಯ ಎಣಿಕೆ. ಪ್ರಬಲ ರಾಷ್ಟ್ರಗಳು ತಾವಾಗಿ ಬಯಸಿದ ಹೊರತು ತಾವು ಶಾಂತಿ ಪರಿಷತ್ತಿಗೆ ಹೋಗುವದರಿಂದ ಯಾವ ಫಲವೂ ಇಲ್ಲ. ಆದರೆ ಈ ಮಾತು ಶಾಸ್ತ್ರಿಗಳಿಗೆ ಮನವರಿಕೆಯಾಗೇ ಇದ್ದಿಲ್ಲ. ಆದುದರಿಂದ ಗಾಂಧೀಜಿಯ ಭೆಟ್ಟಿಯಾದೊಡನೆ ಅವರು ತಮ್ಮ ಭಾವನೆಗಳನ್ನು ಉದ್ಗರಿಸಿದರು.

ಆ ಮೇಲೆ ಪಾರ್ಲಮೆಂಟರಿ ಶಿಷ್ಟಮಂಡಲವನ್ನು ಕುರಿತು ಅವರು ಹೇಳಿದರು: "ಅದರಿಂದ ಏನೂ ಪ್ರಯೋಜನವಾಗದೆಂದು ನಮಗೆ ಗೊತ್ತು ಕೂಲಿಕಾರನೋ ಸಂಪ್ರದಾಯವಾದಿಯೋ, ಹಿಂದುಸ್ತಾನದಮಟ್ಟಿಗೆ ಅವರೆಲ್ಲ ಒಂದೇ."

ಗಾಂಧೀಜಿ ಒಪ್ಪಿಕೊಂಡರು. ಆದರೂ ಹೇಳಿದರು, "ಆದರೂ ನಾವು ನಂಬಬೇಕು."

ಬಂಗಾಲದ ಗತ ಕೂಲಿಕಾರ ಗವರ್ನರ ಬರೋಸ್‌ರಲ್ಲಿ ಒಂದು ವಿನೋದಜ್ಞತೆಯ ಗುಣವುಂಟು. ಪತ್ರಿಕಾ ಪ್ರತಿನಿಧಿಗಳು ಅವರನ್ನು ಕಾಣಿ ಅವರು ಯಾವ ಧೋರಣೆಯನ್ನು ಕೈಕೊಳ್ಳುವರೆಂದು ಕೇಳಿದಾಗ ಅವರು ಕೊಟ್ಟ ಉತ್ತರವಿದು: "ಮಹಾಶಯರೇ, ನಾನು ಕೈಕೊಳ್ಳ ಹೊರಟಿಲ್ಲ ನಾನು ನೆರವೇರಿಸುವೆ." ಇದು ಅವರೆಲ್ಲರಿಗೂ ಅನ್ವಯಿಸುತ್ತದೆ. ಕೂಲಿಕಾರ ಸರಕಾರವಾದರೂ ಬೇರೆ ಬಗೆ ವರ್ತಿಸಲಾರದು. ಹೀಗೆನ್ನುತ್ತ ಶಾಸ್ತ್ರಿಗಳು ಕೇಳಿದರು, "ಮುಂದೇನು?"

"ಯಾರಿಗೆ ಗೊತ್ತು?" ಎಂದರು ಗಾಂಧೀಜಿ. "ಬ್ರಿಟಿಶ ಸರಕಾರಕ್ಕೂ ಗೊತ್ತಿಲ್ಲವೆಂದು ನನ್ನ ಅನುಮಾನ. ಆದರೆ ರಾಜಕಾರಣವನ್ನು ನಿಮ್ಮೊಡನೆ ಚರ್ಚಿಸಲು ನಾನು ಇಲ್ಲಿ ಬಂದಿಲ್ಲವಲ್ಲ."

ಶಾಸ್ತ್ರಿಗಳು ಗಂಡಸುತನದಿಂದ ನುಡಿದರು "ಹೇಗೊ? ಆದಕ್ಕೆ ನಾನು ಹೇಳಿಸಿದವನಲ್ಲನೆಂದು ನಿಮ್ಮ ಎಣಿಕೆಯೇನೊ."

"ಹಾಗಲ್ಲ ಆದರೆ ನಿಮ್ಮ ಇಂದಿನ ಅನಾರೋಗ್ಯ ಸ್ಥಿತಿಯಲ್ಲಿ ನೀವು ಅದಕ್ಕೆ ಖಂಡಿತ ಹೇಳಿಸಿದವರಲ್ಲ."

ಅವರಿಬ್ಬರು ಜಾತೀಯ ಸಮಸ್ಯೆಯನ್ನೂ ಪ್ರಸ್ತಾಪಿಸಿದರು. ಇನ್ನೂ ಕೆಲ ಹಾಸ್ಯಬಿಂದುಗಳನ್ನು ಚಿಮ್ಮಿಸಿದರು. ಬಳಿಕ ಶಾಸ್ತ್ರಿಗಳು ನಮ್ಮನ್ನು ಬಳಿಗೆ ಕರೆದು ಕೆಲವು ಹಿತವಚನಗಳನ್ನಾಡಿ ಬೀಳ್ಕೊಟ್ಟರು. ಮಣಿಲಾಲ ಗಾಂಧಿಯೊಡನೆ ದಕ್ಷಿಣ ಆಫ್ರಿಕೆ ಮತ್ತು ಜನರಲ್ ಸ್ಮಟ್ಸರನ್ನು ಕುರಿತು ಕೆಲ ಮಾತುಗಳನ್ನು ಆಡಿದರು ಈ ಸಂದರ್ಶನದಿಂದ ಅವರ ಆರೋಗ್ಯದ ಮೇಲೆ ಯಾವ ಅನಿಷ್ಟ ಪರಿಣಾಮವೂ ಆಗಿಲ್ಲವೆಂದು ಡಾಕ್ಟರರು ಹೇಳಿದರೆ ಇನ್ನೊಮ್ಮೆ ಭೆಟ್ಟಿ ಕೊಡುವದಾಗಿ ಮಾತು ಕೊಟ್ಟು ಗಾಂಧೀಜಿ ಹೊರಟುಹೋದರು.

ಡಾಕ್ಟರರ ವರದಿ ತೃಪ್ತಿಕರವಾಗಿದ್ದುದರಿಂದ ಗಾಂಧೀಜಿ ತಾ. ೩೦ ರಾತ್ರಿ ಎರಡನೆ ಬಾರಿ ಅವರಲ್ಲಿಗೆ ಹೋದರು. ಈಬಾರಿ ಅವರೊಡನೆ ಶ್ರೀ ರಾಜಗೋಪಾಲಾಚಾರ್ಯ, ಶ್ರೀ ಠಕ್ಕರಬಾಪಾ, ರಾಜಕುಮಾರಿ ಅಮೃತಕೌರ, ಕುಮಾರಿ ಅಗಾಥಾ ಹ್ಯಾರಿಸನ್, ಶ್ರೀ ಟಿ. ಎನ್. ಜಗದೀಶನ್, ನನ್ನಣ್ಣ ಶ್ರೀ ಪ್ಯಾರೇಲಾಲಜಿ, ಡಾ ಶ್ರೀನಿವಾಸನ್ ಮತ್ತು ನಾನು ಹೋಗಿದ್ದೆವು. ಶಾಸ್ತ್ರಿಗಳ ಪ್ರಕರಣವನ್ನು ಹಿಡಿದಿದ್ದ ಮದ್ರಾಸ ಜನರಲ್ ಆಸ್ಪತ್ರೆಯ ಗೌರವ ವೈದ್ಯರಾದ ಡಾ ಶ್ರೀನಿವಾಸನ್ನರು ಹಿಂದಿನಂತೆ ಗಾಂಧೀಜಿಯ ವಸತಿಗೆ ಬಂದು ಅವರನ್ನು ಆಸ್ಪತ್ರೆಗೆ ಕರೆದೊಯ್ದರು ಆಗ ನಡೆದ ಮಾತುಕತೆ ಬಹಳ ಭಾಗ ರಾಮಾಯಣಕ್ಕೆ ಸಂಬಂಧಿಸಿತ್ತು

ಶಾಸ್ತ್ರಿಗಳು ಹೀಗೆ ಪ್ರಾರಂಭಿಸಿದರು, "ಸರ್ವ ಬಗೆಯಿಂದ ನೀವು ನನ್ನನ್ನು ಧನ್ಯರಾಗಿ ಮಾಡಿದಿರಿ."

"ಏನು ಹುಚ್ಚು, ಶಾಸ್ತ್ರಿಗಳೇ!" ಎಂದುತ್ತರಿಸಿದರು ಬಾಪು.

"ಆಹಾ! ಗಾಂಧಿ, ಜಗತ್ತಿನಲ್ಲಿ ಇಂದು ಜೀವಂತರಾಗಿರುವವರಲ್ಲಿ ನೀನೇ ಎಲ್ಲರಿಗಿಂತ ದೊಡ್ಡ ಮಹಾಪುರುಷನೆಂದು ನಾನರಿಯೆನೆ?" ಎನ್ನುತ್ತ ತಮ್ಮ ಮೊಮ್ಮಕ್ಕಳನ್ನು ಶಾಸ್ತ್ರಿಗಳು ಗಾಂಧೀಜಿಗೆ ಪರಿಚಯ ಮಾಡಿಸಿದರು. "ನಿನ್ನ ಕಟಾಕ್ಷ ಅವರ ಮೇಲೆ ಬೀಳಲಿ" ವಿನೋದದಿಂದ ಅವರು ರಾಮಾಯಣದಿಂದ ಒಂದು ಶ್ಲೋಕವನ್ನು ಉದಾಹರಿಸಿದರು. "ರಾಮನನ್ನು ಯಾರು ಕಾಣುವದಿಲ್ಲವೊ ಅವನು ಮತ್ತು ರಾಮನು ಯಾರನ್ನು ಕಾಣುವದಿಲ್ಲವೊ ಅವನು ನಿಂದ್ಯನಾಗುತ್ತಾನೆ"

"ಯಶ್ಚ ರಾಮಂ ನ ಪಶ್ಯೇತ್ತು
ಯಂಚ ರಾಮೋ ನ ಪಶ್ಯತಿ।
ನಿಂದಿತಃ ಸ ಭವೇಲ್ಲೋಕೇ
ಸ್ವಾತ್ಮಾಪ್ಯೇನಂ ವಿಗರ್ಹತೇ॥"

—ಅಯೋಧ್ಯಾಕಾಂಡ

ಬಳಿಕ ತಾವು ಕೆಲ ದಿನ ಹಿಂದೆ ಮಧ್ಯಾಹ್ನದ ಊಟವಾದ ನಂತರ ಹೊಕಡಿಕೆಗೆ ಸಂದು, ಅವೇಶಗೊಂಡವನಂತೆ ಹದಿನೈದು ನಿಮಿಷಗಳಲ್ಲಿ ರಾಮಾಯಣದ ಮೇಲೆ ಒಂದು ಅತಿ ಸುಂದರ ಪ್ರಬಂಧವನ್ನು ಬರೆದ ಸಂಗತಿಯನ್ನು ಶಾಸ್ತ್ರಿಗಳು ಗಾಂಧೀಜಿಗೆ ಹೇಳಿದರು. ಅದರ ಸನ್ನಿವೇಶ ಹೀಗಿತ್ತು. ರಾವಣನ ಮರಣಾನಂತರ ಹನುಮಂತನು ಅಶೋಕವಾಟಿಕೆಯಲ್ಲಿದ್ದ ಸೀತೆಯನ್ನು ಸಮೀಪಿಸಿ "ತಾಯೇ, ಆಜ್ಞಾಪಿಸು. ನಿನ್ನನ್ನು ಹಿಂಸಿಸುತ್ತಿದ್ದ ರಾಕ್ಷಸಿಯರನ್ನೆಲ್ಲ ತೀಕ್ಷ್ಣವಾಗಿ ದಂಡಿಸುವೆನು" ಎಂದು ಕೇಳುತ್ತಾನೆ. ಆಗ ಆ ದೇವಿ ಮುಖ ತಿರುಗಿಸಿ ಹೇಳುತ್ತಾಳೆ. "ಬೇಡ. ಆ ಬಡಪಾಯಿಗಳು ಏನು ತಪ್ಪು ಮಾಡಿದ್ದಾರೆ? ಅವರು ಕೇವಲ ತಮ್ಮೊಡೆಯನ ದಾಸಿಯರು. ಅವನು ಆಜ್ಞಾಪಿಸಿದ್ದನ್ನು ಅವರು ಹೊಟ್ಟೆಪಾಡಿಗಾಗಿ ಮಾಡುತ್ತಿದ್ದಾರೆ. ಅವರನ್ನು ಬಿಟ್ಟುಬಿಡು ಕ್ಷಮೆಯೇ ಜೀವನವನ್ನು ಜೀವನಾರ್ಹವನ್ನಾಗಿ ಮಾಡುವದು. ಕ್ಷಮೆಯೆಂಬುದು ದಿವ್ಯವಾದ ಗುಣ. ಅದು ಗುಣಗಳಲ್ಲೆಲ್ಲ ಅತ್ಯುದಾತ್ತವಾದುದು. ಆದುದರಿಂದ ನಾನು ಅವರನ್ನು ಕ್ಷಮಿಸಿದ್ದೇನೆ. ಪೂರ್ಣ ನಿರ್ದೋಷರು ಯಾರೊಬ್ಬರೂ ಇಲ್ಲ. ಅಂದ ಮೇಲೆ ಕ್ಷಮೆ ಯಾರಿಗೆ ಬೇಕಾಗಿಲ್ಲ?

"ಸಮಯೋ ರಕ್ಷಿತವ್ಯಸ್ತು
ಸಂತಶ್ಚಾರಿತ್ರಭೂಷಣಾಃ।
ಪಾಪಾನಾಂ ವಾ ಶುಭಾನಾಂ ವಾ
ವಧಾರ್ಹಾಣಾಮಥಾಪಿ ವಾ।
ಕಾರ್ಯಂ ಕಾರುಣ್ಯಮಾರ್ಯೇಣ
ನ ಕಶ್ಚಿನ್ನಾಪರಾಧ್ಯತಿ॥"

—ಅಯೋಧ್ಯಾಕಾಂಡ

"ಜಗದೀಶನ್ನರು ನನ್ನಲ್ಲಿ ಬಂದರೆ ನಾನು ಮನೆಗೆ ಹೋದೊಡನೆ ಆ ಪ್ರಬಂಧವನ್ನು ಅವರಿಂದ ಬರೆಸಿ ನಿಮ್ಮಲ್ಲಿ ಕಳಿಸುವೆ" ಎಂದು ಶಾಸ್ತ್ರಿಗಳು ಹೇಳಿದರು. ಮುಂದುವರಿಸುತ್ತ "ನೀವು ಅದನ್ನು ಪ್ಯಾರೇಲಾಲರಿಂದ ಓದಿಸಿ ಕೇಳುವಿರಾ?"

ಗಾಂಧೀಜಿ ಅದನ್ನು ತಾವೇ ಓದುವುದಾಗಿ ಮಾತುಕೊಟ್ಟರು. "ನೀವು ನಾಳೆಯೇ ಅದನ್ನು ಜಗದೀಶನ್ನರಿಂದ ಬರೆಸಿ ನನಗೆ ಕಳಿಸಿರಿ. ಮದುರೆಗೆ ಹೋಗುವ ಮೊದಲೇ ನಾನು ಅದನ್ನು ಓದುವೆ"

"ಇಲ್ಲ" ಎಂದರು ಶಾಸ್ತ್ರಿಗಳು "ಅದಕ್ಕೆ ಎರಡು ಮೂರು ದಿನವಾದರೂ ಹಿಡಿದೀತು. ಅದನ್ನು ನಾನು ತುಣುಕುತುಣುಕಾಗಿ ಕೂಡಿಸಬೇಕು. ನನ್ನ ಡಾಕ್ಟರರೇನೋ ಬಹಳ ಪ್ರಚಂಡರು. ಆದರೂ ಈ ಕೆಲಸವನ್ನು ನಾಳೆಯೇ ಮಾಡಿ ಮುಗಿಸುವಷ್ಟು ಆರೋಗ್ಯವನ್ನು ಅವರಿನ್ನೂ ನನಗೆ ಕೊಟ್ಟಿಲ್ಲ"

ಶಾಸ್ತ್ರಿಗಳು ರಾಮಾಯಣವೇ ರಾಮಾಯಣವಾಗಿ ಬಿಟ್ಟಿದ್ದರು. ಆಗ "ರಾಮಾಯಣ ಅದ್ವಿತೀಯವಾದುದು." ಆ ಮಹಾಪುರಾಣವನ್ನು ಇನ್ನಷ್ಟು ಜನ ಓದುತ್ತ ಇಲ್ಲವಲ್ಲಾ, ಹಿಂದಿನಂತೆ ಇಂದು ಅವರ ಆದರ್ಶ ಜನರಿಗೆ ಪ್ರೇರಣೆ ಕೊಡುತ್ತಿಲ್ಲವಲ್ಲಾ ಎಂದು ಅವರು ವಿಷಾದಪಟ್ಟರು. "ತನ್ನ ಸತೀತ್ವದ ತೇಜಸ್ಸಿನಿಂದ ರಾವಣನನ್ನು ಸೀತೆ ಹಿಂದಟ್ಟಿದ ನಂತರ ರಾಕ್ಷಸಿಯರು ಅವಳ ಬಳಿ ಬಂದು ಹೇಳಿದರು: 'ನಿನಗೆ ವ್ಯವಹಾರಜ್ಞಾನವಿಲ್ಲ. ಇಲ್ಲವಿದ್ದರೆ ನಿನಗೆ ನೀಡಲ್ಪಟ್ಟಿರುವದನ್ನು ನೀನು ತಿರಸ್ಕರಿಸುತ್ತಿದ್ದಿಲ್ಲ' ದೇವಿ ಅದಕ್ಕೆ ಕೊಟ್ಟ ಉತ್ತರವಿದು: 'ನಿಮ್ಮ ನಗರ ಸುಂದರವಾಗಿವೆ, ನಿಮ್ಮ ಸೌಧಗಳು ಅದ್ಭುತವಾಗಿವೆ, ಸಂಸ್ಕಾರದ ಸಕಲ ಶೋಭೆಯೂ ಇಲ್ಲಿ ಕಾಣಸಿಗುತ್ತದೆ. ಆದರೆ ಈ ಅನ್ಯಾಯವನ್ನು ಮನಗಂಡು ರಾವಣನ ಮುಂದೆ ಸತ್ಯವನ್ನು ಆಡಬಲ್ಲವರಾದ ಇಬ್ಬರು ಮೂವರಾದರೂ ಇಲ್ಲಿಲ್ಲವೆ?"

ಶಾಸ್ತ್ರಿಗಳ ಹೃದಯ ತುಂಬಿ ಬಂತು. "ಅದೀಗ ನಾವು ನಮ್ಮ ಗೆಳೆಯರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯ. ಅದನ್ನು ಪೂರೈಸಲಿಕ್ಕೇ ನಾವು ತಪ್ಪುತ್ತೇವೆ. ಅದನ್ನು ನಿಮ್ಮ ವಿಷಯದಲ್ಲಿ ಒಂದೆರಡು ಸಲ ನಾನು ಮಾಡಿದ್ದುಂಟು. ನೀವು ಅದನ್ನು, ಅದೂ ಕೆಲಬಾರಿ ಬಹಿರಂಗವಾಗಿ, ನೆರವೇರಿಸಿ ಎಲ್ಲರನ್ನೂ ಚಕಿತರನ್ನಾಗಿ ಮಾಡುತ್ತೀರಿ. ಆದರೆ ಗೆಳೆತನದ ಅತ್ಯುದಾತ್ತ ಕರ್ತವ್ಯವೆಂದರೆ ಅದೇ." ರಾಜಾಜಿಯ ಕಡೆ ಹೊರಳಿ ಅವರು ಮುಂದುವರಿಸಿದರು, "ನೀವೇ ಹೇಳಿರಿ ರಾಜಜಿ, ತಪ್ಪು ದಾರಿ ಹಿಡಿದ ನೂರಾರು ಜನರಲ್ಲಿ ಸಕಾಲದಲ್ಲಿ ಎಚ್ಚರಿಕೆ ಕೊಟ್ಟರೆ ಉಳಿದುಕೊಳ್ಳಬಹುದಾದವನು ಒಬ್ಬನೂ ಇರುವುದಿಲ್ಲವೆ? ಮಹಾತ್ಮನ ಮುಂದೆ ಉಪದೇಶ ನಡೆಸಿದ್ದೇನೆಂದು ದಯವಿಟ್ಟು ತಿಳಿದುಕೊಳ್ಳಬೇಡಿರಿ. ನಾನು ತಪ್ಪು ಒಪ್ಪಿಕೊಳ್ಳುತ್ತಿದ್ದೇನೆ. ನಾನೂ ಆ ಕರ್ತವ್ಯದಿಂದ ಕೆಲ ವೇಳೆ ಚ್ಯುತನಾಗಿದ್ದೇನೆ" ಎಂದರು.

ಬಾಪೂ ಕಡೆ ಹೊರಳಿ ಅವರೆಂದರು: "ನೀವು ಸತ್ಯಶೋಧಕರು. ನೀವೂ ನಾನೂ ಕೆಲ ವಿಷಯಗಳಲ್ಲಿ ಭೂಮ್ಯಾಕಾಶಗಳಷ್ಟು ದೂರವಾಗಿದ್ದೇವೆ. ನಿಮ್ಮೊಡನೆ ನಾನು ಸಹಮತನಾಗಿರದಿದ್ದಾಗ ದಾಕ್ಷಿಣ್ಯ ಬಿಟ್ಟು ನಾನು ಹಾಗೆ ಹೇಳಿದ್ದೇನೆ. ಆದರೆ ನಾನು ಒಬ್ಬ ಸತ್ಯಾನ್ವೇಷಿ, ನಿಮ್ಮಿಂದ ಬಹಳ ದೂರದಲ್ಲಿರಲೊಲ್ಲೆನೇಕೆ? ರಾಮಾಯಣದಲ್ಲಿ ವಾಲ್ಮೀಕಿ ಪ್ರತಿಪಾದಿಸಿದ ತ್ರಿಕಾಲಾಬಾಧಿತ ಸತ್ಯಗಳು ನನಗೆ ಸ್ಫೂರ್ತಿಯ ಸೆಲೆಯಾಗಿರುವವು. ಆ ಮಹಾಪುರಾಣದಲ್ಲಿ ನಾನು ಏನೇನನ್ನು ಕಂಡುಂಡಿರುವೆನೋ ಅದನ್ನು ಜನರಿಗೆ ಕೊಡದೆ ನಾನು ನನ್ನ ಕರ್ತವ್ಯದಿಂದ ಪರಾಙ್ಮುಖನಾಗಿರುವೆನೆಂದು ನನಗೆ ನಿಸುತ್ತಿದೆ." ರಾಮಾಯಣವನ್ನು ಕುರಿತು ಅವರಿತ್ತ ಭಾಷಣಗಳನ್ನು ನೆನಪಿಗೆ ತಂದುಕೊಟ್ಟು ಅವುಗಳನ್ನು ಮುದ್ರಿಸಬೇಕೆಂದು ಗಾಂಧೀಜಿ ಸೂಚಿಸಿದರು. ಆದರೆ ಅಷ್ಟರಿಂದ ಶಾಸ್ತ್ರಿಯವರು ತೃಪ್ತರಾಗಲಿಲ್ಲ. "ನಾನು ಇನ್ನೂ ಕೆಲಕಾಲ ಬದುಕಿದರೆ, ಮತ್ತು ಜಗದೀಶನ್ನರು ತುಸು ಪುರಸತ್ತು ಮಾಡಿಕೊಂಡರೆ, ಇನ್ನಾದರೂ ನಾನು ಸ್ವಲ್ಪ ಮಟ್ಟಿಗೆ ಹಾನಿಯನ್ನು ತುಂಬಿಕೊಡಬಲ್ಲೆನೆಂದು ಆಶೆಯಿದೆ" ಎಂದು ಅವರು ನಿಟ್ಟುಸಿರುಗರೆದರು.

ಗಾಂಧೀಜಿ: "ಜಗದೀಶನ್ ನಿಮ್ಮ ಪ್ರಶಂಸಕ ಮತ್ತು ಅನುಯಾಯಿ. ನಿಮಗೆ ತ್ರಾಸ ಕೊಡಬಾರದೆಂದು ಡಾಕ್ಟರರು ಹೇಳದೆ ಇದ್ದರೆ ಅವರು ಯಾವಾಗಲೂ ನಿಮ್ಮ ಆಜ್ಞೆ ಪಾಲಿಸಲು ಸಿದ್ಧರೆ. ಆಗ ಅವರು ಮನೆಯಲ್ಲಿ ಇರುವುದೇ ಇಲ್ಲ."

ಶಾಸ್ತ್ರಿಗಳು ಮನವಾರೆ ನಕ್ಕರು "ಅಂತೂ ರಾಮನಂತೆ ನೀವೂ ಸುಳ್ಳು ಹೇಳಿಕೊಡುತ್ತೀರಿ. ಸುಮಂತ್ರನು ರಾಮ ಲಕ್ಷ್ಮಣ ಸೀತೆಯರನ್ನು ರಥದಲ್ಲಿ ಅರಣ್ಯಕ್ಕೆ ಒಯ್ಯುತ್ತಿದ್ದಾಗ ರಾಮನು ಬೇಗ ಬೇಗ ರಥ ನಡೆಸಲು ಕೇಳಿಕೊಂಡ. 'ಆದರೆ ಮಹಾರಾಜ ಮೆಲ್ಲಮೆಲ್ಲನೆ ರಥ ಬಿಡಲು ಹೇಳಿರುವನಲ್ಲ?' ಎಂದ ಸುಮಂತ್ರ. ರಾಮನು ಉತ್ತರಿಸುತ್ತಾನೆ— 'ಪುಣ್ಯಾತ್ಮಾ, ಏಕೆ ಈ ಕೋಟಲೆಯನ್ನು ಇನ್ನೂ ವಿಲಂಬಿಸಬೇಕು? ತೀವ್ರವಾಗಿ ಸಾಗು. ನನ್ನ ತಂದೆಯೇನಾದರೂ ಸಿಟ್ಟಿಗೆದ್ದರೆ ನಿನಗೆ ಕೇಳಿಸಲಿಲ್ಲವೆಂದು ಹೇಳು.'"

ರೋಗಿ ಅತಿರೇಕವಾಗಿ ಮಾತಾಡತೊಡಗಿದ್ದರು, ಡಾಕ್ಟರರು ಚಿಂತಾಕ್ರಾಂತರಾಗತೊಡಗಿದ್ದರು. ಅವರು ತಮಿಳಿನಲ್ಲಿ ಏನೊ ನುಡಿದರು. ಶಾಸ್ತ್ರಿಗಳು ಒಡನುಡಿದರು: "ನಿಜ, ನೀವೆನ್ನುವದು ಸರಿ. ಒಳ್ಳೆಯ ಸಂಭಾಷಕನು ಆಡುವುದಕ್ಕಿಂತ ಹೆಚ್ಚು ಕೇಳುತ್ತಾನೆ. ಆದರೆ, ಹೇಳುತ್ತಾರಲ್ಲ, 'ಒಮ್ಮೆ ಶಾಲೆಯ ಮಾಸ್ತರನಾದವನು ಎಂದೆಂದೂ ಮಾಸ್ತರನೆ' ಎಂದು. ನಾನೂ ಹಾಗೆಯೆ ಮಾಡುವೆ"

ಗಾಂಧೀಜಿ: "ಇದಕ್ಕೆ ನಾನೆಲ್ಲರೂ ಸಾಕ್ಷಿ."

ಶಾಸ್ತ್ರಿಗಳು: "ಇರಲಿ. ಇದೇ ನಿಮ್ಮೊಡನೆ ನನ್ನ ಕೊನೆಯ ಭೆಟ್ಟಿಯಾಗಬಹುದು. 'ಮದುರೆಯಿಂದ ನೀವು ಹಿಂದಿರುಗಿದಾಗ ಬಂದು ನೋಡೇನು' ಎಂಬ ಧೈರ್ಯ ನನ್ನದಲ್ಲ. ಆದ್ದರಿಂದಲೇ ನಾನು ಮಾತಾಡಬಯಸಿದೆ, ಮಾತಾಡಿದೆ ಈಗ ಬಂತು ನಿಮ್ಮ ಸರತಿ"

ಗಾಂಧೀಜಿ: "ಛಿಃ! ಇದು ಕೊನೆಯ ಭೆಟ್ಟಿಯಲ್ಲ. ಮದುರೆಯಿಂದ ಮರಳಿದವನು ನಿಮ್ಮನ್ನು ಬಂದು ನೋಡಲು ಪ್ರಯತ್ನಿಸುವೆ. ನೀವು ಬೇಗನೆ ನೆಟ್ಟಗಾಗಿ ಸೇವಾಗ್ರಾಮಕ್ಕೆ ಮರುಭೆಟ್ಟಿ ಕೊಡಬೇಕು ಎಂಬ ಹೊರತು ಮತ್ತೆ ಹೆಚ್ಚಿಗೆ ಹೇಳತಕ್ಕದ್ದೇನೂ ನನ್ನಲ್ಲಿ ಇಲ್ಲ."

ಇದಕ್ಕೆ "ಆಶಾವಾದಿಗಳಲ್ಲಿ ಚಕ್ರವರ್ತಿ ನೀವು" ಎಂದು ಶಾಸ್ತ್ರಿಗಳು ಉತ್ತರವಿತ್ತರು.

"ಆಹಾ, ಸಂದೇಹವೇನು? ಅದಮ್ಯ ಆಶಾವಾದಿ ನಾನು" ಗಾಂಧೀಜಿಯ ಪ್ರತ್ಯುತ್ತರ. ಅದಕ್ಕೆ ಅವರಿಬ್ಬರೂ ನಕ್ಕರು. ಮತ್ತೆ ಕಲ ನಗೆನುಡಿಗಳಾದ ಮೇಲೆ ಬೀಳ್ಕೊಂಡರು.

ಮದುರೆಯಿಂದ ಹಿಂತಿರುಗಿದ ಮೇಲೆ ಗಾಂಧೀಜಿಗೆ ಬರಿ ಮೂರು ತಾಸು ಬಿಡುವಿತ್ತು. ಆ ಅವಕಾಶದಲ್ಲಿ ಅವರು ಪ್ರಾರ್ಥನಾಸಭೆಯನ್ನು ಜರಗಿಸಿದರು, ಸ್ನಾನ ಮೊದಲಾದವುಗಳನ್ನು ನಡೆಸಿದರು,

(೯ ನೇ ಪುಟ ನೋಡಿರಿ)

ಶಾಸ್ತ್ರಿಯವರೊಡನೆ ಭೆಟ್ಟಿ

(೮ನೇ ಪುಟದಿಂದ ಮುಂದರಿದುದು)

ಅನೇಕರಿಗೆ ಹಸ್ತಾಕ್ಷರಗಳನ್ನು ಕೊಟ್ಟರು, ಅನೇಕ ಜನರಿಗೆ ಭೆಟ್ಟಿಯಿತ್ತರು, ಹಿಂದುಸ್ತಾನೀ ಪ್ರಚಾರಕ್ಕಾಗಿನಿಧಿ ಕೂಡಿಸಿದರು ಮತ್ತು ನಿಲ್ದಾಣದದಾರಿಯಲ್ಲಿ ಶಾಸ್ತ್ರಿಗಳಿಗೆ ಅವಸರದ ಭೆಟ್ಟಿಯಿತ್ತರು. ಅಂದು ಸೋಮವಾರ, ಗಾಂಧೀಜಿಯ ಮೌನದ ದಿನವಾದುದರಿಂದ ಶಾಸ್ತ್ರಿಗಳಿಗೆ ನಿರಾಶೆಯಾಯಿತು. ಆದಿತ್ಯವಾರ ದಿನ ಸಂಜೆ ಬೇಗನೆ ಮೌನವನ್ನು ಆರಂಭಿಸಿ ಮರುದಿನ ಶಾಸ್ತ್ರಿಗಳನ್ನು ಭೆಟ್ಟಿಯಾದಾಗ ಮಾತಾಡಲು ಗಾಂಧೀಜಿಗೆ ಅಪೇಕ್ಷೆಯಿಲ್ಲದಿರಲಿಲ್ಲ. ಆದರೆ ಅದು ಅವರಿಗೆ ಸಾಧ್ಯವಾಗಿರಲಿಲ್ಲ. ಆದುದರಿಂದ ಶಾಸ್ತ್ರಿಗಳು ಮಾತನಾಡಿದರು ಮತ್ತು ಗಾಂಧೀಜಿ ಕಾಗದದ ತುಣುಕುಗಳಲ್ಲಿ ಬರೆದು ಉತ್ತರ ಕೊಟ್ಟರು. ಪ್ರವಾಸದ ವಿಷಯದಲ್ಲಿ ಶಾಸ್ತ್ರಿಗಳು ಕೇಳಿದ್ದಕ್ಕೆ, ಅದು ಬಹಳ ಸೊಗಸಾಗಿದ್ದರೂ ಪ್ರಯಾಸಕರವಾಗಿತ್ತೆಂದು ಗಾಂಧೀಜಿ ಉತ್ತರ ಬರೆದರು. ಮದುರೆಯಲ್ಲಿ ಐದಾರು ಲಕ್ಷ ಜನ ಪ್ರಾರ್ಥನಾ ಸಭೆಗೆ ನೆರೆದಿದ್ದರೆಂದೂ ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಸುತ್ತಮುತ್ತಲ ಹಳ್ಳಿಗಳಿಂದ ಬಂದಿದ್ದರೆಂದೂ ಕೇಳಿ ಶಾಸ್ತ್ರಿಗಳಿಗೆ ಆಶ್ಚರ್ಯವಾಯಿತು. ಜನರು ರಸ್ತೆಗಳ ಬದಿಯಲ್ಲಿ ಆಹಾರವಿಲ್ಲದೆ ನೆರಳಿಲ್ಲದೆ ಕುಳಿತು ಕಾದಿದ್ದರು. ಇದೇ ಕೊನೆಯ ಸಂಧಿಯೆಂಬ ಅನುಮಾನದಿಂದ ಗಾಂಧೀಜಿಯ ದರ್ಶನಕ್ಕಾಗಿ ಅವರು ಆತುರರಾಗಿದ್ದರು.

ಗಾಂಧೀಜಿ ಶಾಸ್ತ್ರಿಗಳ ಆರೋಗ್ಯವನ್ನು ಕುರಿತು ವಿಚಾರಿಸಿ ಡಾಕ್ಟರರಿಗೆ ವಿಧೇಯರಾಗಿರಲು ಉಪದೇಶಿಸಿದರು. ತಮ್ಮ ಸ್ಥಿತಿ ಹೆಚ್ಚುಕಡಿಮೆ ಸಾವಿನಂಚು ಬಂದಿದೆಯೆಂದು ಶಾಸ್ತ್ರಿಗಳೆಂದರು. ಅವರ ಹೃದಯ ತುಂಬಿ ಬಂದು ಮಾತುಗಳೇ ಹೊರಡದಾದವು. “ಬಂಧು, ನೀವು ನನಗೆ ಅಸಾಧಾರಣ ಸನ್ಮಾನ ಮಾಡಿದ್ದೀರಿ” ಎಂದು ಅವರು ನುಡಿದರು. “ಅದರಲ್ಲಿಯೂ ನೀವು ಬಹಳ ಅವಸರದಲ್ಲಿದ್ದರೂ ಬಂದು ನನಗೆ ಭೆಟ್ಟಿಯಾದುದು ದೊಡ್ಡದು. ನನ್ನ ಸ್ವಂತ ಸಹೋದರರು, ಮಕ್ಕಳು ಮತ್ತು ಬಳಗದವರು ಇವರಿಗಿಂತಲೂ ನೀವು ನನಗೆ ಸಮೀಪದವರಾಗಿಯೂ ಪ್ರಿಯರಾಗಿಯೂ ಭಾಸವಾಗುತ್ತೀರಿ. ಅವರ ಧ್ವನಿ ಕಿವಿಗೆ ನಿಲುಕದಷ್ಟು ಮಂದವಾಗಿಬಿಟ್ಟಿತು. “ಯಾವುದೋ ಒಂದು ಒಳ ಬಾಂಧವ್ಯದಿಂದ ನಾವು ಒಂದೆಡೆ ಕೂಡಿದ್ದೇವೆ. ಯಾವ ಬಾಹ್ಯ ಕಾರಣವೂ ಈ ಗೆಳೆತನಕ್ಕೆ ಅರ್ಥ ಕಲ್ಪಿಸಲಾರದು. ಗೋಖಲೆಯವರು ಅದಕ್ಕೆ ನಿಮಿತ್ತಮಾತ್ರರಾಗಿದ್ದರು.” ಅವರು ಗಾಂಧೀಜಿಯನ್ನು ಮತ್ತಷ್ಟು ಸಮೀಪಿಸಿ ಪಿಸುನುಡಿದರು. “ನಾನು ಶಬ್ದಗಳನ್ನು ದುಂದು ಮಾಡುವದಿಲ್ಲ. ನಾನು ಏನು ಹೇಳಬಯಸುತ್ತಿದ್ದೇನೆಂದು ನಿಮಗೆ ಗೊತ್ತಿದೆ.” ಸುಮ್ಮನಾಗಲು ಗಾಂಧೀಜಿ ಅವರಿಗೆ ಸನ್ನೆ ಮಾಡಿದರು. ಈಗಾಗಲೆ ವ್ಯಾಕುಲದಿಂದ ಶಾಸ್ತ್ರಿಗಳ ಉಸಿರು ತಡೆಯತೊಡಗಿತ್ತು. ಆದುದರಿಂದ ಗಾಂಧೀಜಿ ಬೀಳ್ಕೊಳ್ಳಲು ಎದ್ದು ನಿಂತರು.

ಗಾಂಧೀಜಿ ಎದ್ದು ನಿಂತೊಡನೆ ಅವರ ಜೋತಾಡುವ ಗಡಿಯಾರ ಶಾಸ್ತ್ರಿಗಳ ಕಣ್ಣಿಗೆ ಬಿತ್ತು. “ನಿಮ್ಮ ಗಡಿಯಾರ ಕಳೆದು ಹೋಗಿದೆಯೆಂದೂ ಆದುದರಿಂದ ನೀವಿನ್ನು ಗಡಿಯಾರವನ್ನೇ ಉಪಯೋಗಿಸುವದಿಲ್ಲೆಂದೂ ಯಾರೋ ಹೇಳಿದರು” ಎಂದು ಅವರು ಕೇಳಿದರು. ಶ್ರೀ ಟಿ. ಆರ್. ವೆಂಕಟರಾಮ ಶಾಸ್ತ್ರಿಗಳು ಅದನ್ನು ತಿದ್ದಿ ಆ ವಾರ್ತೆ ಗಾಂಧೀಜಿಯ ಫೌಂಟನ್ ಪೆನ್ನಿಗೆ ಸಂಬಂಧದ್ದೆಂದು ತಿಳಿಸಿದರು.

ಶಾಸ್ತ್ರಿಗಳು “ಓಹೋ, ಹೀಗೋ? ಆದರೆ ನಿಮ್ಮ ಗಡಿಯಾರವನ್ನು ಯಾರಾದರೂ ಕದ್ದರೆ ಗಡಿಯಾರದ ಉಪಯೋಗವನ್ನೆ ತೊರೆಯುವಿರಾ?” ಗಾಂಧೀಜಿ ನಕ್ಕು ತಲೆ ಅಲ್ಲಾಡಿಸಿದರು— ಗಡಿಯಾರ ಬಿಟ್ಟು ಸಾಗಿಸಲಾರೆನೆಂಬ ಅರ್ಥದಲ್ಲಿ.

ನಾವು ಶಾಸ್ತ್ರಿಗಳನ್ನು ಬೀಳ್ಕೊಳ್ಳುತ್ತ ಸೇವಾಗ್ರಾಮಕ್ಕೆ ಮರುಭೆಟ್ಟಿ ಕೊಡುವ ಅವರ ವಚನವನ್ನು ನೆನಪಿಗೆ ತಂದೆವು. ಮುಂದೆ ಅರ್ಧಗಂಟೆಯೊಳಗೆ ನಾವು ಸ್ಪೆಶಲ್ ಗಾಡಿಯಲ್ಲಿ ಕುಳಿತಿದ್ದೆವು ಮತ್ತು ಗಾಂಧೀಜಿ “ಹರಿಜನ”ಕ್ಕೆ ತಾವು ಬರೆದ ಲೇಖಗಳನ್ನು ಪುನಃ ಪರಿಶೀಲಿಸುವದರಲ್ಲಿ ತಲ್ಲೀನರಾಗಿದ್ದರು.

ಹೊಸದಿಲ್ಲಿ ಸು. ನ.

೨೦—೪—೪೬

ವಾರದಪತ್ರ

ಹಿಂದುಸ್ತಾನದ ಸೇವೆಯ ಮಾರ್ಗ

ಕಾಬೂಲ ಲಾಯಿನ್ಸ್‌ನಲ್ಲಿಯ ಹಿಂದ ರಾಷ್ಟ್ರೀಯ ಸೇನೆಯ ಕೈದಿಗಳಿಗೆ ಗಾಂಧೀಜಿಯವರು ಭೆಟ್ಟಿಕೊಟ್ಟದ್ದನ್ನು ಕಳೆದವಾರ ನಾನು ಉಲ್ಲೇಖಿಸಿದ್ದೇನೆ. ಗಾಂಧೀಜಿಯವರು ಅದರಂತೆ ಕೆಂಪುಕೋಟೆಯಲ್ಲಿಯ ೩೫ ಕೈದಿಗಳನ್ನು ಭೆಟ್ಟಿಯಾದರು. ಸರ್ವಮಾನ್ಯವಾದ ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ ಎಲ್ಲರೂ ಜಾತಿಧರ್ಮವನ್ನು ಲೆಕ್ಕಿಸದೆ ಒಂದೆಡೆ ಸೇರಿದ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ನೋಡಿ ಗಾಂಧೀಜಿಯವರಿಗೆ ಸಂತೋಷ.

“ಹಿಂದರಾಷ್ಟ್ರ ಸೇನೆಯಲ್ಲಿ ಜಾತಿಧರ್ಮ ಭೇದವೆಂದೂ ನಮ್ಮನ್ನು ಬಾಧಿಸಲಿಲ್ಲ” ಎಂದು ಒಬ್ಬನು ಅಭಿಪ್ರಾಯಪಟ್ಟನು. “ಆದರಿಲ್ಲಿ ನಮಗೆ ‘ಹಿಂದು ಚಹಾ’ ಮತ್ತು ಮುಸಲ್ಮಾನ ಚಹಾ’ ದೊರೆಯುತ್ತಿದೆ. ನಾವೇನು ಮಾಡತಕ್ಕದ್ದು” ಎಂದು ಜೋಡಿಸಿದನು. ‘ನೀವು ಅದನ್ನೇಕೆ ಸಹಿಸುವಿರಿ’ ಎಂದು ಗಾಂಧೀಜಿಯು ಅರೆಗಾಂಭೀರ್ಯ ಮತ್ತು ಅರೆಹಾಸ್ಯದಿಂದ ಕೇಳಿದರು.

“ಇಲ್ಲ ನಾವದನ್ನು ಸಹಿಸುವದಿಲ್ಲ. ನಾವು ಹಿಂದು ಚಹಾ’ ಮತ್ತು ಮುಸಲ್ಮಾನ ಚಹಾ’ ಸರಿಪ್ರಮಾಣವಾಗಿ ಮಿಶ್ರಮಾಡಿ ಅನಂತರ ಎಲ್ಲರಿಗೂ ಕೊಡುವೆವು. ಅನ್ನವನ್ನು ಹೀಗೆಯೆ ಮಿಶ್ರ ಮಾಡುವೆವು’ ಎಂದು ಅವರು ಉತ್ತರಿಸಿದರು.

‘ಇದು ಬಹಳ ಒಳ್ಳೇದು’ ಎಂದು ಗಾಂಧೀಜಿಯು ನಗುತ್ತ ಅವರ ಜಾಣತನದ ಬಗ್ಗೆ ಸಂತೋಷ ಪ್ರದರ್ಶಿಸುತ್ತ ನುಡಿದರು.

ಎರಡನೆ ಸಲದ ಈ ಸಂದರ್ಶನದ ಬಗ್ಗೆ ತಮ್ಮ ಪ್ರತಿಕ್ರಿಯೆಯೇನು ಎಂಬದನ್ನು ಗಾಂಧೀಜಿಯವರು ಆಂದಿನ ಪ್ರಾರ್ಥನಾನಂತರದ ಚರ್ಚೆಯಲ್ಲಿ ವಿವರಿಸಿದರು. ಕೆಂಪುಕೋಟೆಯಲ್ಲಿ ಕ. ನಿರಂಜನ ಸಿಂಗರು ಹಿಂದ ರಾಷ್ಟ್ರಸೇನೆಯವರ ಪರವಾಗಿ ಮಾತಾಡುತ್ತ ಅಹಿಂಸಾತ್ಮಕವಾಗಿಯಲ್ಲದೆ ಹಿಂದುಸ್ತಾನ ಸ್ವಾತಂತ್ರ್ಯವನ್ನು ಸಂಪಾದಿಸಲಾರದು ಮತ್ತು ಅದನ್ನು ದಕ್ಕಿಸಿಕೊಳ್ಳಲಾರದು ಎಂದು ಕೊನೆಗೆ ತಮಗೆ ಮನವರಿಕೆಯಾಗಿದೆಂದು ಕರ್ನಲ್‌ರು ಹೇಳಿದರು. ಅಲ್ಲದೆ ಬಿಡುಗಡೆಯಾದ ನಂತರ ತಾವೆಲ್ಲ ಅಹಿಂಸಾತ್ಮಕ ನಿಜಸೈನಿಕರಾಗಿ ಹಿಂದುಸ್ತಾನದ ಸೇವೆ ಮಾಡುವದಾಗಿಯೂ ಆಶ್ವಾಸನ ಕೊಟ್ಟರು. “ನಮ್ಮ ಬೆಂಬಲಕ್ಕಾಗಿ ಎರಡನೆಯವರ ಔದಾರ್ಯವನ್ನಪೇಕ್ಷಿಸುವದು ನಮಗೆ ಸೇರುವದಿಲ್ಲ ನಾವು ಸ್ವಾಭಿಮಾನವನ್ನು ಮಾರಿಕೊಂಡು ಒಡಂಬಡಿಕೆ ಮಾಡಿಕೊಳ್ಳುವದಕ್ಕಿಂತ ನೆಲ ಅಗಿದು ಭೂಮಿ ಉಳಿದು ಉಪಜೀವನ ಸಾಗಿಸುವದು ನಮಗೆ ಹೆಚ್ಚು ಸೇರುತ್ತಿದೆ” ಎಂದೂ ಅವರು ಗಾಂಧೀಜಿಗೆ ಹೇಳಿದರು.

ಪರಕೀಯ ಸರಕಾರದವರು ಜನಸಾಮಾನ್ಯರ ಶಿಕ್ಷಣ ಆರೋಗ್ಯ ಮೊದಲಾದ ರಾಷ್ಟ್ರಸಂವರ್ಧಕ ಚಟುವಟಿಕೆಗಳನ್ನು ಅಲಕ್ಷಿಸಿ ಅವರ ಕೂಲಿಗೆ ದುಡಿಯುವ ಸೈನಿಕರಿಗೆ ಕೊಡುತ್ತಿರುವಂಥ ಸುಖಸೌಕರ್ಯ ಮಾನ ಮರ್ಯಾದೆಗಳನ್ನು ಸ್ವತಂತ್ರ ಹಿಂದುಸ್ತಾನವೂ ಕೊಡಬೇಕೆಂದು ನೀವು ಭಾವಿಸಿದ್ದರೆ ನೀವು ಸಂಪೂರ್ಣವಾಗಿ ಮೋಸ ಹೋಗಬಹುದು ಎಂದು ನಾನವರಿಗೆ ಹೇಳಿದೆನು” ಎಂದು ಗಾಂಧೀಜಿ ನುಡಿದರು. ಹಿಂದುಸ್ತಾನ ಬಡ ರಾಷ್ಟ್ರ, ಅದರ ಮಕ್ಕಳು ಬಡತನದಲ್ಲಿ ಹುಟ್ಟಿ ಬಡತನದಲ್ಲಿಯೇ ಬೆಳೆದರು. ಅದರಲ್ಲಿ ರಕ್ತವಿಲ್ಲ. ಬೆಳಗೆ ನಿಂತು ಹೋಗಿ, ಹಿಂದುಸ್ತಾನದ ಸಿಪಾಯಿಯಾಗುವ ಮನಸು ಆದಾಗಿದ್ದರೆ ದೇಶದ ಸದ್ಯದ ಕಂಗಾಲ ಸ್ಥಿತಿಯಲ್ಲಿ ಪಾಲುಗಾರರಾಗಲು ಅವರು ಸಿದ್ಧರಾಗಬೇಕು. ಮತ್ತು ಅದರ ಬಲವನ್ನು ಬೆಳೆಸಲು ಶಕ್ತಿ ಮೀರಿ ಪ್ರಯತ್ನಿಸಬೇಕು. ಬಡವರನ್ನು ಬಳಲಿಸಿ ತಮ್ಮ ಶ್ರೀಮದ್ಗಾಂಭೀರ್ಯ ಬೆಳೆಸಿಕೊಳ್ಳಲು ಅವರು ಬಯಸಕೂಡದು. ಶೂರ ಸಿಪಾಯಿಯು ಬೇಡಿ ಬೇಡುವುದಕ್ಕಿಂತ ಮರಣವೆ ಲೇಸೆಂದು ಭಾವಿಸುವನು.” ಎಂದೂ ಗಾಂಧೀಜಿ ಹೇಳಿದರು ನೇತಾಜಿಯವರು ದಾರಿದ್ರ್ಯ ಮತ್ತು ಸಮಾನತೆಯ ಎರಡು ಪಾಠಗಳನ್ನು ನಮಗೆ ಕಲಿಸಿರುವರು. ಎಂದು ಅವರು ನನಗೆ ತಮ್ಮ ಉತ್ತರದಲ್ಲಿ ಆಶ್ವಾಸಿಸಿದರು. ನಾವು ಅಧಿಕಾರಿಗಳು ಮತ್ತು ಸಾಮಾನ್ಯ ಸೈನಿಕರು ಯಾವದೇ ಬಗೆಯ ಭೇದಭಾವ ಎಣಿಸದೆ ಕೂಡಿಯೆ ಇರುವೆವು. ಭೋಜನ ಮಾಡುವೆವು. ಉಚ್ಚನೀಚ ಭಾವನೆಯೂ ಇಲ್ಲ” ಎಂದೂ ಅವರು ಆಶ್ವಾಸನ ಕೊಟ್ಟರು ಎಂದು ಗಾಂಧೀಜಿ ತೋರಿಸಿದರು.

ಹಿಂದ ರಾಷ್ಟ್ರ ಸೇನೆಗೆ ಸಂದೇಶ

ಹಿಂ. ರಾ. ಸೇನೆಯಲ್ಲಿ ಜಾತೀಯ ಐಕ್ಯ ಮತ್ತು ಅಸ್ಪೃಶ್ಯತೆಯ ಅಭಾವ ಈ ಬಗ್ಗೆ ಸರದಾರ ರಾಮಸಿಂಗ ರಾವಳರು ಬರೆದ ಟಿಪ್ಪಣಿ ಹರಿಜನದಲ್ಲಿ ಈಗಾಗಲೆ ಪ್ರಸಿದ್ಧವಾಗಿದೆ. ಅವರು ಮೊನ್ನೆ ದಿನ ಗಾಂಧೀಜಿ ಭೆಟ್ಟಿಯಾಗಿ ಹಿಂ. ರಾ. ಸೇನೆಗಾಗಿ ಸಂದೇಶ ಕೋರಿದರು. ಗಾಂಧೀಜಿಯವರ ಉತ್ತರ ಕೇವಲ ಹಿಂ. ರಾ. ಸೇನೆಯನ್ನುದ್ದೇಶಿಸದೆ ಹಿಂದೀ ಸೈನ್ಯಕ್ಕಾಗಿಯೆ ಇದ್ದಿತು. ನೇತಾಜಿಯವರ ನೇತೃತ್ವದಲ್ಲಿ ಹಿಂ. ರಾ. ಸೇನೆಯವರು ಬಂಡಾಯವನ್ನು ಪ್ರತ್ಯಕ್ಷವಾಗಿ ಹೂಡಿದ್ದರೂ ಬಂಡಾಯದ ಭಾವನೆ ಕೇವಲ ಅವರಿಗಾಗಿ ಮೀಸಲಿರಲಿ ಹಿಂದೀ ಸೈನಿಕರಲ್ಲಿಯೂ ಆ ಭಾವನೆಯು ಸಂಚಾರವಾಗಿದೆ. ಹಿಂದೀ ಸೇನೆಯಲ್ಲಿ ಕೆಲವರು ಪುಣೆಯಲ್ಲಿ ಗಾಂಧಿಜಿ ಭೆಟ್ಟಿಯಾಗಿ ಅವರ ಸಲಹೆ ಕೋರಿದರು. ಸರಕಾರದ ಸಂಬಳ ಪಡೆಯುತ್ತಿದ್ದರೂ ಹಿಂದುಸ್ತಾನದ ಗೂಡವೆ ನಾವು ಸಂಬದ್ಧರಾಗಿರುವೆವು. ಇಂಗ್ಲಂಡದ ರಾಜನೊಡನೆ ಅಲ್ಲ ಎಂದುದಾಗಿ ಅಧಿಕಾರಿಗಳಿಗೆ ನೋಟೀಸು ಕೊಡಲು ನೀವು ಬದ್ಧರಿರುವಿರೆಂದು ಗಾಂಧೀಜಿ ಅವರಿಗೆ ಹೇಳಿದರು. ಈ ವರೆಗೆ ಸೈನಿಕ ಹುಕುಮುಗಳಿಗೆ ತಲೆಬಾಗಿಸುತ್ತ ಬಂದಿರಿ, ಮತ್ತು ನಿಮ್ಮ ದೇಶಬಾಂಧವರ ಮೇಲೆ ಗುಂಡು ಹಾರಿಸಲು ಸಿದ್ಧರಾದಿರಿ. ಆದರೀಗ ನಿಮ್ಮಲ್ಲಿ ಸ್ವಾತಂತ್ರ್ಯಜ್ಯೋತಿ ಬೆಳಗಿರುವದಾದ್ದರಿಂದ ಪರಕೀಯ ಸರಕಾರದ ಹುಕುಮಿನನ್ವಯ ಇನ್ನು ಮುಂದೆ ಇಂಥವನ್ನು ಮಾಡಕೂಡದು.

ಹಿಂದ ರಾಷ್ಟ್ರ ಸೇನೆಯವರಿಗೆ ಎರಡು ವಿಕಲ್ಪಗಳಿವೆ. ಅವರು ಶಸ್ತ್ರಸ್ತ್ರ ಸೈನಿಕರಾಗಿ ಸ್ವತಂತ್ರ ಹಿಂದುಸ್ತಾನದ ಸೇನೆ ಮಾಡಬಲ್ಲರು ಅಹಿಂಸೆ ಹೆಚ್ಚು ಶ್ರೇಷ್ಠ ಮತ್ತು ಪರಿಣಾಮಕಾರಕ ಅಸ್ತ್ರವೆಂದು ಅವರ ಮನವರಿಕೆಯಾದರೆ ಅಹಿಂಸಾತ್ಮಕ ಸಂಘಟನೆಯನ್ನಿಂಟು ಮಾಡಲು ತಮ್ಮ ಶಿಕ್ಷಣ ಮತ್ತು ಓರಣದ ಉಪಯೋಗ ಮಾಡಬಹುದು. ನೂಲುವದನ್ನು ಕಲಿತು ನುರಿತ ನಿಷ್ಠಾಯುಕ್ತ ಕಾರ್ಯಕರ್ತರಾಗಬೇಕು. ಅವರು ಹಾಗೆ ಮಾಡಿದ್ದಾದರೆ ಜಗತ್ತಿಗೆ ಒಳ್ಳೆ ವೈಭವಶಾಲಿಯಾದ ಪಾಠ ಹಾಕಿಕೊಟ್ಟಂತಾಗುವದು.

‘ಹಿಂದ ರಾಷ್ಟ್ರಸೇನೆಯವರು ಪ್ರಬಲ ಶಕ್ತಿ, ಶೌರ್ಯ ಮತ್ತು ಸಾಧನ ಸಂಪತ್ತನ್ನು ತೋರಿಸಿರುವರು. ಆದರೆ ಅವರು ಸಂಪಾದಿಸಿದ ಫಲಗಳಿಂದ ನಾನೇನು ಆಶ್ಚರ್ಯಚಕಿತನಾಗಿಲ್ಲ ಎರಡನೆಯವರನ್ನು ಕೊಲ್ಲದ ಸಾಯುವದರಲ್ಲಿ ಹೆಚ್ಚಿನ ಶೌರ್ಯವಿದೆ. ಎರಡನೆಯವರನ್ನು ಕೊಲ್ಲುವವರು ತಾವು ಸಾಯುವದರಲ್ಲಿ ವಿಶೇಷ ಆಶ್ಚರ್ಯವಿಲ್ಲ. ಆದರೆ ಶತ್ರುವಿಗೆ ತನ್ನ ಕುತ್ತಿಗೆಯನ್ನು ಕೊಡಲು ಸಿದ್ಧನಾಗುವ. ಆದರೆ ಅವರ ಮನಸ್ಸಿನಂತೆ ನಡೆಯಲು ಇಲ್ಲವೆ ಅವನಿಗೆ ಶರಣು ಹೋಗಲು ನಿರಾಕರಿಸುವ ಮನುಷ್ಯ ಹೆಚ್ಚು ಶ್ರೇಷ್ಠ.

“ಇನ್ನು ಮುಂದೆ ಗಂಡಾಂತರದ ದಿನಗಳಿವೆ. ನಮ್ಮ ಅಹಿಂಸೆಯಿಂದ ನಾವು ಸ್ವಾತಂತ್ರ್ಯ ದ್ವಾರ ಸಮೀಪಿಸಿರುವೆವು. ಆ ಮಹಾದ್ವಾರವನ್ನು ಪ್ರವೇಶಿಸಿದ ನಂತರ ಅದನ್ನು ನಾವು ಬಿಟ್ಟುಗೊಡಬೇಕೇ? ಆದರೆ ನಾನು ಹೇಳಿದಂತಹ ಶೂರರ ಅಹಿಂಸೆ ಪರಕೀಯ ದಾಳಿಯನ್ನು ಎದುರಿಸಲು ಮತ್ತು ಸ್ವಾತಂತ್ರ್ಯ ಸಂಪಾದನೆಗಾಗಿ ಉಂಟಾಗಬಹುದಾದ ಆಂತರಿಕ ಅವ್ಯವಸ್ಥೆಯನ್ನೆದುರಿಸಲು ಒಳ್ಳೆ ಪರಿಣಾಮಕಾರಕ ಮತ್ತು ನಿಶ್ಚಿತ ಸಾಧನವಾಗಿದೆಂದು ನನಗೆ ಸಂಪೂರ್ಣ ಮನವರಿಕೆಯಾಗಿದೆ. ಬ್ರಿಟಿಶ್‌ರು ಹೊರಟಿದ್ದು ಹೋಗಲಿರುವರು. ರಾಷ್ಟ್ರಸಂಘದಲ್ಲಿ ಹಿಂದುಸ್ತಾನಕ್ಕೆ ಯಾವ ಸ್ಥಾನಮಾನವಿನ್ನು? ಚೀನದಂತೆ ಅದು ಪಂಚಮ ದರ್ಜೆಯ ರಾಷ್ಟ್ರವಾಗುಳಿಯುವದರಲ್ಲಿ ತೃಪ್ತಿಯನ್ನು ಪಡೆಯುವದೊ? ಚೀನವು ನಾಮಮಾತ್ರಕ್ಕೆ ಸ್ವತಂತ್ರವಾಗಿತ್ತು. ಹಿಂದುಸ್ತಾನವು ಪ್ರಥಮ ದರ್ಜೆಯ ಸೈನಿಕ ರಾಷ್ಟ್ರವಾಗಿ ಪರಿಣಮಿಸಬೇಕಾದರೆ ಇನ್ನು ಬಹಳ ದಿನ ಹತ್ತುವವು ಮತ್ತು ಅದಕ್ಕಾಗಿ ಯಾವದೊಂದು ಪಾಶ್ಚಾತ್ಯ ರಾಷ್ಟ್ರದ ರಕ್ಷಣೆಯಲ್ಲಿರಬೇಕಾಗುವದು. ನಿಜವಾಗಿ ಅಹಿಂಸಾತ್ಮಕ ಹಿಂದುಸ್ತಾನಕ್ಕೆ ಯಾವ ಅಂಜಿಕೆಯೂ ಇಲ್ಲ. ಬ್ರಿಟಿಶ್ ನೌಕಾಪಡೆ ಮತ್ತು ವಿಮಾನಪಡೆ ಅದರ ರಕ್ಷಣೆಗೆ ಅವಶ್ಯವಿಲ್ಲ. ಆದರೆ ನಮ್ಮಲ್ಲಿ ಇನ್ನೂ ಶೂರರ ಅಹಿಂಸೆ ಬಂದಿಲ್ಲೆಂಬುದು ನನಗೆ ಗೊತ್ತಿದೆ.

ಹೊಸದಿಲ್ಲಿ ಪ್ಯಾರೇಲಾಲ

೧೬-೪-೪೬

ವಿಶುದ್ಧವಾವುದು ?

ಪ್ರಶ್ನೆ— ಕಳೆದವಾರ ಪ್ರಾರ್ಥನಾ ನಂತರದ ಒಂದು ಚರ್ಚೆಯಲ್ಲಿ ನೀವು ಬೇರೆ ಯಾವ ಬಟ್ಟೆಯನ್ನೂ ಉಪಯೋಗಿಸದೆ ಖಾದಿಯನ್ನೇ ಉಪಯೋಗಿಸಬೇಕೆಂದು ಪ್ರತಿಪಾದಿಸಿದಿರಿ, ಖಾದಿಯು ನನ್ನ ಬಡಬಂಧು ಭಗಿನಿಯರಿಗೆ ನ್ಯಾಯ್ಯವಾಗಿ ದೊರಕಿಸಿದ ಆಹಾರವನ್ನು ಕೊಡುತ್ತಿದೆಯಾದ್ದರಿಂದ ಅದರ ಸ್ಪರ್ಶದಿಂದ ನನಗೊಳ್ಳೆ ಸಂತೋಷ ಆರೋಗ್ಯ, ಸೌಂದರ್ಯ, ಮಾನಸ್ಯ, ನೈತಿಕ ಮತ್ತು ಆಧ್ಯಾತ್ಮಿಕ ಮೊದಲಾದ ಎಲ್ಲ ದೃಷ್ಟಿಯಿಂದ ನಾನು ಅದನ್ನು ಪ್ರೀತಿಸುತ್ತೇನೆ ರಾಟಿಯ ಇಂಪಾದ ಸಪ್ಪಳವು ನನಗೆ ಬಹಳ ಮಟ್ಟಿಗೆ ಸೇರುವದಾದರೂ ಈ ವರೆಗೆ ನೂಲು ತೆಗೆಯಲು ನಾನು ಸಮರ್ಥನಾಗಿಲ್ಲ ಈ ಅವಸ್ಥೆಯಲ್ಲಿ ನೂಲುವದನ್ನು ಕಲಿಯಲು ನನ್ನ ಕೈಗಳು ಸಂಪೂರ್ಣ ಅಯೋಗ್ಯವಾಗಿರುವವು. ನಮ್ಮ ಶಿಕ್ಷಣ ಪದ್ಧತಿಯೇ ಇದಕ್ಕೆ ಕಾರಣ— ಆದುದರಿಂದ ಖಾದಿ ಮಾರಾಟದ ಮೇಲೆ ಇದೀಗ ವಿಧಿಸಿದ ಹೊಸ ಕರಾರುಗಳನ್ನು ಯೋಗ್ಯ ಮಾರ್ಗದಿಂದ ನಾನು ಪೂರೈಸಲಾರೆನು; ಗಿರಣಿಬಟ್ಟೆಯನ್ನು ಧರಿಸಲುದ್ಯುಕ್ತನಾಗುವದು ನನಗೆ ಕ್ಲೇಶಕರವಾಗಿದೆ.

ಉತ್ತರ— ಖಾದಿಯ ಬಗ್ಗೆ ಇದ್ದ ಪ್ರೇಮವು ನೈತಿಕ ಮತ್ತು ಆಧ್ಯಾತ್ಮಿಕ ಮೂಲ್ಯವನ್ನು ಪಡೆಯುವಷ್ಟು ವಿಶುದ್ಧವಾಗಿದ್ದರೆ ಈ ವಯಸ್ಸಿನಲ್ಲಿಯೂ ಈ ಲೇಖಕರು ನೂಲಲು ಕಲಿಯಬಲ್ಲರೆಂಬುದು ನಿಃಸಂಶಯ. ದಿವಂಗತ ಪಂಡಿತ ಮೋತಿಲಾಲ ನೆಹರುಗಳು ೫೦ ವರ್ಷ ವಯಸ್ಸಿನ ನಂತರ ನೂಲಲು ಕಲಿತರು. ಪೈಗಂಬರವಾಸಿ ಅಲಿ ಬಂಧುಗಳು ನಿಯಮಿತವಾಗಿ ನೂಲದಿದ್ದರೂ ನೂಲಲು ಕಲಿತರು ಈ ಮೂವರೂ ಅದರ ರಾಷ್ಟ್ರೀಯ ಮತ್ತು ರಾಜಕೀಯ ಮಹತ್ವವನ್ನು ನಿಜಾರ್ಥದಲ್ಲಿ ತಿಳಿದುಕೊಂಡೆ ನೂಲಲಿಕ್ಕೆ ಕಲಿತರು. ಅನೇಕ ಕಾರ್ಯಕರ್ತರೂ ಇಳಿವಯಸ್ಸಿನಲ್ಲಿಯೆ ನೂಲಲಿಕ್ಕೆ ಕಲಿತದ್ದುಂಟು.

ಈ ಲೇಖಕರು ವಿಳಂಬ ಮಾಡದೆ ನೂಲಲು ಕಲಿಯಲಿಕ್ಕೆ ಬೇಕು. ಅವರ ಬೊಟ್ಟುಗಳಲ್ಲಿ ಯಾವ ದೋಷವೂ ಇಲ್ಲ. ಬರೆಯಬಲ್ಲವರೆಲ್ಲ ನೂಲು ತೆಗೆಯಬಲ್ಲರು. ಸ್ವರಾಜ್ಯಕ್ಕಾಗಿ ನೂಲು ತೆಗೆಯುವವರಂತೂ ಲೇಖ ಬರೆಯುವವಕ್ಕಿಂತ ಎಂದಿಗೂ ಮಹತ್ವದ್ದಾಗಿದೆ.

ಇಂಥವರು ಖಾದಿ ಕೊಳ್ಳಲಿಕ್ಕೆ ಸ್ವತಃ ನೂತ ನೂಲನ್ನೇ ಕೊಡಬೇಕೆಂಬುದು ನ್ಯಾಯ್ಯವಾದ ಮಾರ್ಗವೆಂಬದನ್ನು ನಾನು ಒಪ್ಪುತ್ತೇನೆ. ಯಾವದೇ ಕಾರಣದಿಂದ ನೂಲಲು ಅವರು ಅಶಕ್ತರಾಗಿದ್ದಾರೆ ತನ್ನ ಅನೇಕ ಗೆಳೆಯರು ಇಲ್ಲವೆ ಬಂಧುಗಳಿಗೆ ತಮ್ಮ ಸಲುವಾಗಿ ನೂಲಲು ಹೇಳುವದು ಸಂಪೂರ್ಣವಾಗಿ ನ್ಯಾಯ್ಯವಾಗಿದೆ.

ಖಾದಿಯು ಬಡ ಜನರ ಉಪಜೀವನದ ಯೋಗ್ಯ ಸಾಧನ ಮಾತ್ರವಾಗಿರದೆ ಅಹಿಂಸಾ ಮಾರ್ಗದಿಂದ ಸ್ವರಾಜ್ಯ ಸಂಪಾದಿಸಲು ಮಹತ್ವದ ಮತ್ತು ಹೆಚ್ಚಿನ ಸಾಧನವಾಗಿದೆಂಬದನ್ನು ವ್ಯವಹಾರಕುಶಲರಾದ ಇತರರು ತಿಳಿಯಲಿಕ್ಕೆ ಬೇಕು. ಮರ್ಮವನ್ನು ತಿಳಿದುಕೊಳ್ಳದೆ ಕೇವಲ ನೈತಿಕ ಮಹತ್ವದ ಬಗ್ಗೆ ವಾಗ್ವೈಖರಿಯಿಂದ ಲೇಖ ಬರೆಯಬಲ್ಲರೆಂಬ ಅಭಿಮಾನಕ್ಕೆ ಇಂಥವರು ಗುರಿಯಾಗದಿರಲಿ.

ಹೊಸದಿಲ್ಲಿ ಮೋ. ಕ. ಗಾಂಧಿ

೨೧—೪—೪೬

ಭಂಗಿಗಳ ಸಂಪು

ಕೆಲ ವಿಷಯಗಳಲ್ಲಿ ಸಂಪು ಹೂಡುವುದು ಸರಿಯಾಗುವದಿಲ್ಲ. ಭಂಗಿಗಳ ಸಂಪು ಇಂಥ ವಿಷಯಗಳಲ್ಲಿ ಒಂದು. ಉಳಿದವುಗಳ ಬಗ್ಗೆ ನಾನಿಲ್ಲಿ ವಿವರಿಸ ಬಯಸುವದಿಲ್ಲ. ೧೯೪೭ ರಲ್ಲಿ ನಾನು ದರಬಾನದಲ್ಲಿದ್ದಾಗ ಭಂಗಿಗಳು ಸಂಪು ಹೂಡಬೇಕೊ ಎಂಬ ಪ್ರಶ್ನೆ ಉದ್ಭವಿಸಿತು ಇದಕ್ಕೆ ನಾನು ವಿರುದ್ಧ ಮತ ಕೊಟ್ಟೆ. ಗಾಳಿಯಿಲ್ಲದೆ ಮನುಷ್ಯ ಜೀವಿಸುವದು ಅಶಕ್ಯವಾಗಿರುವಂತೆ ಅವನ ಮನೆ ಮತ್ತು ಸುತ್ತುಮುತ್ತು ಅವನು ಸ್ವಚ್ಛವಿರದಿದ್ದರೆ ಬಹಳ ದಿನ ವರೆಗೆ ಬಾಳಲಾರನು. ಆಧುನಿಕ ಪದ್ಧತಿಯ ಗಟಾರುಗಳು ತುಂಬಿ ನಿಂತರೆ ಒಂದಿಲ್ಲೊಂದು ಬೇನೆ ಹಬ್ಬುವುದು ನಿಶ್ಚಿತ.

ಆದುದರಿಂದ ಮುಂಬಯಿಯಲ್ಲಿಯ ಭಂಗಿಗಳ ಸಂಪಿನ ಸುದ್ದಿ ಕೇಳಿದ ಕೂಡಲೆ ನನಗೆ ವಿವಂಚನೆಯುಂಟಾಯಿತು. ಸುದೈವದಿಂದ ಅದೀಗ ಮುಕ್ತಾಯಗೊಂಡಿದೆ. ಆದರೆ ಭಂಗಿಗಳು ಪಂಚರಿಗೆ ತಮ್ಮ ವ್ಯಾಜ್ಯವನ್ನೊಪ್ಪಿಸಲು ನಿರಾಕರಿಸಿದರೆಂದು ನನಗೆ ತಿಳಿದು ಬಂದಿದೆ. ಭಂಗಿಗಳ ಬಗ್ಗೆ ನನಗೆ ವಿಶೇಷ ಪ್ರೇಮವಿದ್ದರೂ ಅವರು ಕೈಕೊಂಡ ಒತ್ತಾಯದ ಉಪಾಯಗಳನ್ನು ನಾನು ನಿಷೇಧಿಸುತ್ತೇನೆ. ಹಾಗೆ ಮಾಡಲು ನನಗೆ ಮತ್ತಷ್ಟು ಅಧಿಕಾರ. ಕಾಲಕ್ರಮೇಣ ಅವರೇ ಹಾನಿಗೊಳಗಾಗುವರು. ನಗರಗಳಲ್ಲಿಯ ಜನರು ಯಾವಾಗಲೂ ಹೀಗೆ ಬಗ್ಗಿ ನಡೆಯಲಾರರು ಹಾಗಾದಲ್ಲಿ ನಗರ ಸಭೆಗಳ ಆಡಳಿತವೇ ಕುಸಿದು ಬೀಳಬಹುದು ಒತ್ತಾಯವು ಕೊನೆಯಲ್ಲಿ ಗಲಿಬಿಲಿಯಲ್ಲಿಯೆ ಪರ್ಯವಸಾನ ಹೊಂದುತ್ತದೆ. ವಿವಾದಗಳನ್ನು ಬಗೆಹರಿಸಲು ನಿಷ್ಪಕ್ಷಪಾತ ನ್ಯಾಯಮಂಡಳಕ್ಕೆ ಒಪ್ಪುವದು ಯಾವಾಗಲು ನ್ಯಾಯಸಮ್ಮತ. ಅದನ್ನು ನಿರಾಕರಿಸುವದು ಅಶಕ್ತತೆಯ ಲಕ್ಷಣ. ಭಂಗಿಯು ಒಂದು ದಿನವಾದರೂ ಕೆಲಸವನ್ನು ನಿಲ್ಲಿಸಲಾರನು. ನ್ಯಾಯವನ್ನು ಪಡೆಯಲು ಅವನಿಗೆ ಬೇರೆ ಅನೇಕ ಮಾರ್ಗಗಳಿರುವವು.

ಇತ್ತ ನಗರದ ಜನರು ಅಸ್ಪೃಶ್ಯತೆ ಎಂಬುದೊಂದು ವಿಷಯವಿರುವದೆಂಬುದನ್ನೆ ಮರೆತು ಇಂಥ ಪ್ರಸಂಗಗಳಲ್ಲಿ ತಮ್ಮ ಹಾಗು ನಗರದ ಗಟಾರ ಸ್ವಚ್ಛ ಮಾಡುವದನ್ನು ಕಲಿಯಬೇಕು. ಅಂದರೆ ಇಂಥ ಸಂಪಿನ ಪ್ರಸಂಗ ಬಂದಾಗ ದಿಕ್ಕುಗಾಣದವರಾಗದೆ ನಗರಕ್ಕೆ ಸೇವೆ ಸಲ್ಲಿಸಬಹುದು. ಆಗ ಭಂಗಿಗಳು ಅವರನ್ನು ಅಂಜಿಸಲಾರರು. ಸೈನಿಕರಿಗೆ ಈ ಕೆಲಸದ ಅನುಭವವಿದ್ದುದರಿಂದ ಇಂಥ ಪ್ರಸಂಗಗಳಲ್ಲಿ ಅವರ ಸಹಾಯ ತೆಗೆದುಕೊಳ್ಳಬೇಕೆಂದೂ ನಾನು ಸೂಚಿಸಬಯಸುತ್ತೇನೆ. ಸ್ವರಾಜ್ಯ ಸಮೀಪಿಸಿದೆಂದು ಹೇಳುವದಾದರೆ ಈ ಸೈನ್ಯವೆಲ್ಲ ನಮ್ಮದೆಂದು ತಿಳಿಯಲು ಅಡ್ಡಿಯಿಲ್ಲ. ಅವರ ಕಡೆಯಿಂದ ಎಲ್ಲ ಬಗೆಯ ವಿಧಾಯಕ ಕಾರ್ಯ ಮಾಡಿಸಿಕೊಳ್ಳಲು ಯಾವ ಪ್ರತಿಬಂಧವೂ ಇಲ್ಲ. ಈ ವರೆಗೆ ನಮ್ಮ ಮೇಲೆ ಮನಸಿಗೆ ಬಂದಂತೆ ಗುಂಡು ಹಾರಿಸಲು ಮಾತ್ರ ಅವರ ಉಪಯೋಗ ಮಾಡಿಕೊಂಡದ್ದುಂಟು. ಇಂದು ಅವರು ಭೂಮಿಯನ್ನು ಊಳಬೇಕು, ಭಾವಿ ತೋಡಬೇಕು, ಶೌಚಕೂಪಗಳನ್ನು ಸ್ವಚ್ಛ ಮಾಡಬೇಕು. ಮತ್ತು ಉಳಿದ ಎಲ್ಲ ಬಗೆಯ ವಿಧಾಯಕ ಕಾರ್ಯ ಮಾಡಬೇಕು. ಹೀಗೆ ಅವರು ಸಾಧ್ಯವಿದ್ದ ಎಲ್ಲ ವಿಧಾಯಕ ಕಾರ್ಯ ಮಾಡಿ ಜನತೆಯಲ್ಲಿ ತಮ್ಮ ಬಗ್ಗೆ ಇದ್ದ ದ್ವೇಷಭಾವನೆಯನ್ನು ಪ್ರೇಮರೂಪದಲ್ಲಿ ಪರಿವರ್ತಿಸಿಕೊಳ್ಳಬೇಕು.

ಈಗಂತೂ ಹರತಾಳ ನಿಂತು ಹೋಗಿದೆ. ಆದುದರಿಂದ ಪ್ರತಿಯೊಬ್ಬ ಭಂಗಿಯನ್ನು ಬಂಧುವಿನಂತೆ ತಿಳಿದುಕೊಳ್ಳಬೇಕು. ಅವರಿಗೆ ಶಿಕ್ಷಣ ಕೊಡಬೇಕು. ಒಳ್ಳೆ ಮನೆಗಳು ಅವರಿಗೆ ಸಿಕ್ಕುವಂತೆ ನೋಡಿಕೊಳ್ಳುವದಲ್ಲದೆ ಮನಸಿಗೆ ಬಂದಲ್ಲಿ ಮನೆ ಮಾಡಿಕೊಂಡಿರಲು ಅವಕಾಶ ಕೊಡಬೇಕು. ಅವರಿಗೆ ಸಮಾನ ಕೂಲಿ ಸಿಕ್ಕುವಂತೆ ಮತ್ತು ಕೇಳದೆ ಅವರಿಗೆ ನ್ಯಾಯ ದೊರೆಯುವಂತೆ ನೋಡಿಕೊಳ್ಳಬೇಕು. ಹಿಂದುಸ್ತಾನದಲ್ಲೆಲ್ಲ ಹೀಗೆ ಮಾಡಿದ್ದಾದರೆ ಸ್ವರಾಜ್ಯಕ್ಕೆ ನಾವು ಪಾತ್ರರಿರುವೆವೆಂಬದನ್ನು ನಿಶ್ಚಿತವಾಗಿ ಸಿದ್ಧಮಾಡಿ ಕೊಡುವೆವಲ್ಲದೆ ಅದನ್ನು ದಕ್ಕಿಸಿಕೊಳ್ಳಲೂ ನಾವು ಸಮರ್ಥರಾಗುವೆವು.

ಹೊಸದಿಲ್ಲಿ ಮೋ. ಕ. ಗಾಂಧಿ

೧೫—೪—೪೬

(ಹರಿಜನಬಂಧುವಿನಿಂದ)

ರಾಮಬಾಣ ಉಪಾಯ

"ನಿಮ್ಮ ಲೆಕ್ಕಣಿಕೆಯಿಂದ ಹೊರಹೊಮ್ಮುವ ಪ್ರತಿಯೊಂದು ಶಬ್ದವನ್ನು ನಾನೊಳ್ಳೆ ದಕ್ಷತೆಯಿಂದ ಓದುತ್ತಿರುವೆನು. 'ಹರಿಜನ' ಬಂದ ಕೂಡಲೆ ಅದನ್ನು ಓದಿ ಮುಗಿಸದೆ ನಾನು ಬಿಡುವುದಿಲ್ಲ. ಇದರಿಂದ ನನಗೆ ಹೊಳೆದ ಮಟ್ಟಿಗೆ ನಾನು ಪರಿಪೂರ್ಣನಿರುವೆನೆಂಬ ಒಂದು ಬಗೆಯ ಚಮತ್ಕಾರಿಕ ಜಂಭ ನನ್ನಲ್ಲಿ ಉಂಟಾಗಿದೆ. ಪ್ರಕಟವಾಗಿ ಸಂದೇಹಾಸ್ಪದ ಯಾವುದೊಂದು ವಿಷಯವನ್ನು ಅದರಲ್ಲಿ ಓದಿದ ಕೂಡಲೆ ನಾನು ಚಡಪಡಿಸುತ್ತೇನೆ. ರಾಮನಾಮ ಜಪಿಸುವದೆ ಎಲ್ಲ ರೋಗಗಳಿಗೆ ರಾಮಬಾಣ ಉಪಾಯವೆಂಬ ನಿಮ್ಮ ಪ್ರತಿಪಾದನೆಯಿಂದ ನನಗೆ ಸಂಪೂರ್ಣವಾಗಿ ದಂಗು ಬಡೆದಂತಾಗಿದೆ. ಆಧುನಿಕ ವಿಚಾರದ ಯುವಕರು ನಿಮ್ಮ ಉಳಿದ ವಿಚಾರಗಳಿಗೆ ಪ್ರತಿಯಾಡದೆ ಅದು ಹೇಗೋ ಸಹಿಸಿಕೊಳ್ಳುತ್ತಿರುವರು. ಅವರ ಧೋರಣವನ್ನು ಇಂತು ವಿವರಿಸಬಹುದು. 'ಒಳ್ಳೇದು, ಗಾಂಧೀಜಿ ಅನೇಕ ವಿಷಯಗಳನ್ನು ನಮಗ ಕಲಿಸಿರುವರು. ಅವರು ನಮ್ಮನ್ನು ಕಲ್ಪನಾತೀತ ಮೇಲ್ಮಟ್ಟಕ್ಕೇರಿಸಿರುವರು, ಸ್ವರಾಜ್ಯವನ್ನು ನಮ್ಮ ಸಮೀಪಕ್ಕೆ ತಂದಿರುವರು ಅಂದಬಳಿಕ ಅವರ 'ಹುಚ್ಚು' ನೀವೇಕೆ 'ಸಹಿಸ'ಬಾರದು ?

'ತನ್ಮಧ್ಯೆ ನೀವು ಹೀಗೆ ಹೇಳಿರುವಿರಿ'

ಯಾವದೇ ರೋಗವಿರಲಿ ಅದರ ನಿವಾರಣೆಗಾಗಿ ರಾಮನಾಮವನ್ನು ಭಕ್ತಿಪೂರ್ವಕವಾಗಿ ಜಪಿಸುವದೆ ರಾಮಬಾಣ ಉಪಾಯವಾಗಿದೆಂದು ನೀವು ಹೇಳಿರುವಿರಿ [ಹರಿಜನ ೩—೩—೪೬] "ಪೃಥ್ವಿ ಅಪ್, ತೇಜ, ಆಕಾಶ, ವಾಯು ಈ ಪಂಚಭೂತಾತ್ಮಕವಾದ ಈ ಶರೀರದ ರೋಗ ನಿವಾರಣೆಗಾಗಿ ಆ ಪಂಚಭೂತಾತ್ಮಕ ಸಾಧನಗಳಿಗೇ ಶರಣು ಹೋಗಬೇಕೆಂದು ನೀವು ಪ್ರತಿಪಾದಿಸಿರುವಿರಿ. [ಹರಿಜನ ೩-೩-೪೬] 'ನಮ್ಮ ಭೌತಿಕ ರೋಗ ನಿವಾರಣೆಗಾಗಿ ರಾಮನಾಮವೇ ರಾಮಬಾಣೋಪಾಯವಾಗಿದೆಂದು ನನ್ನ ಪ್ರತಿಪಾದನೆ. [ಹರಿಜನ ೭-೪-೪೬]

'ನಿಸರ್ಗೋಪಚಾರದ ಹೊಸ ಪದ್ಧತಿಯನ್ನು ನೀವು ಪ್ರತಿಪಾದಿಸಿದಾಗ ನೀವು ಒಂದು ಬಗೆಯ ಯೋಗ ಚಿಕಿತ್ಸೆ ಇಲ್ಲವೆ ಭಕ್ತಿ ಚಿಕಿತ್ಸೆದಿಯ ಮೇಲೆ ರಚಿತವಾದ 'ಕ್ರಿಶ್ಚನ್ ಸಾಯಿನ್ಸ'ವನ್ನು ಪ್ರತಿಪಾದಿಸುತಿರುವಿರೆಂದು ನಾನು ಮೊತ್ತಮೊದಲು ಭಾವಿಸಿದೆ. ಎಲ್ಲ ವೈದ್ಯ ಶಾಸ್ತ್ರಗಳಲ್ಲಿಯೂ ಇವಕ್ಕೊಂದು ಸ್ಥಾನವಿದೆ. ಆ ದೃಷ್ಟಿಯಿಂದಲೆ ನಾನು ನನ್ನ ಮೊದಲನೆ ಅವತರಣಿಕೆಯನ್ನುದ್ಧರಿಸಿರುವೆನು. ಉದಾಹರಿಸಿದ ಎರಡನೆ ವಾಕ್ಯದ ಅರ್ಥ ತಿಳಿದುಕೊಳ್ಳುವದು ಕಠಿನವಾಗಿದೆ. ನಿಜವಾಗಿ ಹೇಳಬೇಕಾದರೆ ನೀವು ಪ್ರತಿಪಾದಿಸುವ ಪಂಚಭೂತಗಳನ್ನು ಹೊರತುಪಡಿಸಿ ಯಾವ ಔಷಧವೂ ಇರಲರಿಯದು.

" ನೀವು ಹೇಳುವಂತೆ ವಿಶ್ವಾಸವಿದ್ದುದಾದರೆ ನನ್ನದೇನು ತಕರಾರು ಇಲ್ಲ. ವಿಶ್ವಾಸದಿಂದ ರೋಗನಿವಾರಣೆಮಾಡಿಕೊಳ್ಳುವಲ್ಲಿ ರೋಗಿಯು ಸಹಕರಿಸುವದವಶ್ಯವಾಗಿದೆ. ಆದರೆ ವಿಶ್ವಾಸದಿಂದಲೆ 'ನಮ್ಮ ಎಲ್ಲ ಬಗೆಯ ಶಾರೀರಕ ಕಷ್ಟಗಳೂ' ನಿವಾರಣೆಯಾಗುವವೆಂಬುದಾಗಿ ನಂಬುವುದು ಕಠಿನವಾಗಿದೆ. ಎರಡು ವರ್ಷಗಳ ಹಿಂದೆ ನನ್ನ ಹೆಣ್ಣು ಕೂಸಿಗೆ ಬಾಲ ಪಾರ್ಶ್ವವಾಯುವಿನ ವಿಕಾರವಾಯಿತು. ಅತ್ಯಾಧುನಿಕ ಔಷಧಗಳನ್ನು ಅದಕ್ಕೆ ಕೊಟ್ಟಿರದಿದ್ದರೆ ಇಡೀ ಜೀವನದಲ್ಲಿಯೆ ಅದು ಊನವಾಗಿ ಉಳಿಯುತ್ತಿತ್ತು. ೨॥ ವರುಷದ ಕೂಸಿಗೆ ರೋಗನಿವಾರಣೆಗಾಗಿ ರಾಮನಾಮ ಜಪಿಸಲು ಹೇಳುವದರಿಂದ ಯಾವ ಪ್ರಯೋಜನವೂ ಇಲ್ಲೆಂಬುದನ್ನು ನೀವು ಒಪ್ಪಬಹುದು. ತನ್ನ ಕೂಸಿನ ಸಲುವಾಗಿ ರಾಮನಾಮ ಜಪಿಸಲು [ಕೇವಲ ರಾಮನಾಮ ಜಪವೆ] ನೀವು ತಾಯಿಯ ಮನವೊಲಿಸುವದನ್ನು ನಾನು ನೋಡಬಯಸುತ್ತೇನೆ.

"೨೪ ನೇ ಮಾರ್ಚದ ಸಂಚಿಕೆಯಲ್ಲಿ ನೀವು ಉಲ್ಲೇಖಿಸಿದ ಚರಕದ ಆಧಾರ ನನ್ನ ಮೇಲೆ ಏನೂ ಪರಿಣಾಮ ಮಾಡಲಿಲ್ಲ. ಯಾವದೊಂದು ವಿಷಯವು ಎಷ್ಟೇ ಹಳೆಯದು ಮತ್ತು ಅಧಿಕೃತವಿದ್ದರೂ ನಿಮ್ಮ ಅಂತರಾತ್ಮಕ್ಕೆ ಹೊಳೆಯದಿದ್ದರೆ ನೀವದನ್ನು ಒಪ್ಪಬೇಡಿರೆಂದು ನೀವೇ ಕಲಿಸಿರುವಿರಿ"

ಹೀಗೆ ಯುವಕರ ಶಿಕ್ಷಕರೊಬ್ಬರು ಬರೆಯುತ್ತಾರೆ. ವಿದ್ಯಾರ್ಥಿ ವರ್ಗದ ಅನುಗ್ರಹ ಸಂಪಾದಿಸಲು ನಾನೆಷ್ಟೇ ಆತುರನಾಗಿದ್ದರೂ ಅದಕ್ಕೂ ಒಂದು ಮಿತಿ ಇದೆ. ಅದಕ್ಕೂ ವಿಶಾಲವಾದ ಜಗತ್ತನ್ನೂ ನಾನು ಸಂತುಷ್ಟಗೊಳಿಸಬೇಕಾಗುತ್ತದೆ. ಸಾರ್ವಜನಿಕ ಕಾರ್ಯಕರ್ತನು ಯಾವದೊಂದು ವ್ಯಕ್ತಿ ಇಲ್ಲವೆ ವರ್ಗದ ದುಷ್ಟ ಹೇತು ಈಡೇರಿಸುವದು ಶಕ್ಯವಿಲ್ಲ.

ನಾನು ಮಾಡಿದ ಯಾವನೆ ಕಾರ್ಯದಿಂದ ಹಿಂದುಸ್ತಾನವು ಕಲ್ಪನಾತೀತ ಶಿಖರಕ್ಕೆ ಮುಟ್ಟಿದೆಂದು ಯಾರಿಗಾದರೂ ನಿಜವಾಗಿ ಎನಿಸುತಿದ್ದರೆ ಅವರು ನನ್ನೀ ಹುಚ್ಚು ಸ್ವಲ್ಪ ಹೆಚ್ಚಾಗಿ ಸಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸಹನೆಯಿಂದ ನನಗೂ ಹಿತವಿಲ್ಲ. ಅವರಿಗೂ ಹಿತವಾಗದು. ಆದರಿಂದ ಅವರಲ್ಲಿ ಆಲಸ್ಯ ತೋರಬಹುದು. ನನ್ನಲ್ಲಿ ಒಣ ಆತ್ಮ ಪ್ರತಿಷ್ಠೆ ಹೆಚ್ಚಬಹುದು. ಇಂಥ 'ಹುಚ್ಚ'ವನ್ನು ಕೂಡ ನಿರಾಕರಿಸುವಾಗ ಅವರು ಚೆನ್ನಾಗಿ ವಿಚಾರಮಾಡಲಿ. ಇಂಥ 'ಮರುಳಸಿದ್ಧ'ರನ್ನು ಯಾವಾಗಲೂ ತಿರಸ್ಕರಿಸತಕ್ಕದ್ದಲ್ಲ. ಈ ಮೊದಲು ಇಂಥ 'ಮರುಳಸಿದ್ಧ'ರು ಶೂಲಕ್ಕೆ ಕೂಡ ಏರಿಸಲ್ಪಟ್ಟದ್ದುಂಟು.

ಭಕ್ತಿ ಚಿಕಿತ್ಸೆ ಮತ್ತು ಕ್ರಿಶ್ಚನ್ ಸಾಯನ್ಸದಂತೆಯೆ ರಾಮನಾಮವಿದೆ. ಆದರೂ ಅವುಗಳಿಂದ ಅದು ತೀರ ಭಿನ್ನವಿದೆ ರಾಮನಾಮ ಪಠನವೆಂದರೆ ಸತ್ಯಸ್ವರೂಪನ ಪ್ರತೀಕ ಮಾತ್ರ. ಯಾವನೊಬ್ಬನಿಗೆ ಜ್ಞಾನಪೂರ್ವಕ ಪರಮಾತ್ಮನ ಸಾಕ್ಷಾತ್ಕಾರವಾಗಿದೆಂದಿನಿಸಿದ ಕ್ಷಣವೆ ಅವನ ಶಾರೀರಕ ಮಾನಸಿಕ ಇಲ್ಲವೆ ನೈತಿಕ ರೋಗಗಳೆಲ್ಲ ಮಾಯವಾಗುವವು. ನಮ್ಮ ಜೀವನದಲ್ಲಿ ಅಂಥದು ನಮಗೆ ನೋಡಲಿಕ್ಕೆ ಸಿಕ್ಕದಿದ್ದರೆ ಅದರ ಸತ್ಯತ್ವವನ್ನೇ ಅಲ್ಲಗಳೆಯಲು ಬರುವುದಿಲ್ಲ. ಪರಮಾತ್ಮನಲ್ಲಿ ವಿಶ್ವಾಸವಿಲ್ಲದಿದ್ದವರಿಗೆ ನನ್ನ ಪ್ರತಿಪಾದನೆ ನಿರರ್ಥಕ. ಕ್ರಿಶ್ಚನ್ ಶಾಸ್ತ್ರೀಯರು, ಭಕ್ತಿಚಿಕಿತ್ಸಕರು ಮತ್ತು ಯೋಗಚಿಕಿತ್ಸಕರು ಮನಸುಮಾಡಿದರೆ ರಾಮನಾಮದಲ್ಲಿ ಅಡಕವಾಗಿರುವ ಸತ್ಯಕ್ಕೆ ಸಾಕ್ಷಿಗಳಾಗಬಹುದು. ಇದಕ್ಕಾಗಿ ನಾನು ಹೆಚ್ಚು ಕಾರಣಮೀಮಾಂಸೆಗಳನ್ನು ಹೇಳಬಯಸುವದಿಲ್ಲ. ಸಕ್ಕರೆ ರುಚಿ ನೋಡದವನಿಗೆ ಅದು ಸಿಹಿಯಾಗಿರುವದೆಂದು ಮನಗಾಣಿಸಬೇಕಾದರೆ ಅದನ್ನು ತಿಂದು ನೋಡು ಎಂದು ಹೇಳಿದ ಹೊರತು ಬೇರೆ ಯಾವ ಉಪಾಯವಿದೆ ?

ಆ ಪವಿತ್ರನಾಮೋಚ್ಚಾರಣೆಯನ್ನು ಭಕ್ತಿಪೂರ್ವಕ ಮಾಡಬೇಕಾದರೆ ಏನೇನು ಮಾಡಬೇಕೆಂಬುದನ್ನು ಪುನಃ ಪುನಃ ಹೇಳುವ ಆವಶ್ಯಕತೆಯಿಲ್ಲ.

ರಾಮನಾಮದಲ್ಲಿ ಸ್ವಲ್ಪ ವಿಶ್ವಾಸವಿದ್ದವರಿಗೆ ಮಾತ್ರ ಚರಕದ ಆಧಾರವು ಸರಿಹೋಗುವುದು. ಉಳಿದವರು ಅದರ ವಿಚಾರ ಮಾಡಬಯಸುವದೇ ಇಲ್ಲ.

ಮಕ್ಕಳಿಗೆ ಹೊಣೆಗಾರಿಕೆಯಿರುವದಿಲ್ಲ. ರಾಮನಾಮ ಅವರಿಗಾಗಿ ಇಲ್ಲೆಂಬುದು ನಿಃಸಂಶಯ ಅವು ನಿಃಸಹಾಯಕ. ಪಾಲಕರು ಮಕ್ಕಳ ಬಗ್ಗೆ ಮತ್ತು ಸಮಾಜದ ಬಗ್ಗೆ ಎಷ್ಟೊಂದು ಹೊಣೆಗಾರಿರುವರೆಂಬುದನ್ನು ಮಕ್ಕಳು ತೋರಿಸಿಕೊಡುವರು. ಮಕ್ಕಳ ರೋಗಗಳ ಬಗ್ಗೆ ಸ್ವಲ್ಪೂ ಕಾಳಜಿ ತೆಗೆದುಕೊಳ್ಳದಿದ್ದ ಅನೇಕ ಪಾಲಕರನ್ನು ನಾನು ನೋಡಿರುವೆನು. ಕೆಲವರಂತೂ ತಾವು ರಾಮನಾಮ ಪಠಿಸುತ್ತ ಕೂತರಾಯಿತೆಂದು ಭಾವಿಸಿದ್ದೂ ಉಂಟು. ಕೊನೆಯದಾಗಿ ಪ್ರತಿಯೊಂದು ಪದಾರ್ಥ ಔಷಧವು ಕೂಡ ಪಂಚಭೂತಾತ್ಮಕವಾಗಿದೆಂದು ಹೇಳುವದು ವಿಚಾರಗೊಂಡಲವೇ ಸೈ. ಅದನ್ನು ಹೋಗಲಾಡಿಸಬೇಕೆಂದು ತೋರಿಸುವದಷ್ಟೆ ನನ್ನ ಕೆಲಸ.

ಹೊಸದಿಲ್ಲಿ ಮೋ. ಕ. ಗಾಂಧಿ

೧೯—೪—೪೬

" ರೇಶಿಮೆ ಖಾದಿ "

ಜವಳಿ ಖಾದಿಯನ್ನು ಕೊಳ್ಳಬೇಕಾದರೆ ಸ್ವಲ್ಪ ನೂಲು ಕೊಡಬೇಕೆಂಬ ನಿಯಮವಿದ್ದಂತೆ 'ರೇಶಿಮೆ ಖಾದಿ' ಕೊಳ್ಳಲಿಕ್ಕೆ ಅದೇ ನಿಯಮವೇಕೆ ಅನ್ವಯಿಸಬಾರದು?

ಈ ಪ್ರಶ್ನೆಗೆ ಒಂದೇ ಉತ್ತರವುಂಟು. ರೇಶಿಮೆ ಖಾದಿಯೂ ಖಾದಿಯೇ ಆಗಿರುವುದು. ಆದುದರಿಂದ ಅದನ್ನು ಕೊಳ್ಳಬೇಕಾದರೂ ಅವಶ್ಯಕ ನೂಲು ಕೊಡಲಿಕ್ಕೆ ಬೇಕು.

ನೂಲನ್ನೇ ಏಕೆ ?

ನೂಲುವುದು ವಿಧಾಯಕ ಕಾರ್ಯಕ್ರಮದ ಅಂಗವೇ ಆಗಿರುವುದರಿಂದ ವಿಧಾಯಕ ಕಾರ್ಯಕರ್ತರೆಲ್ಲ ಖಾದಿ ಕೊಳ್ಳುವಾಗ ನೂಲು ಕೊಡುವ ಅವಶ್ಯಕತೆಯಿಲ್ಲೆಂದು ಏಕೆ ವಿಧಿಸಬಾರದು?

ಈ ಪ್ರಶ್ನೆಯಲ್ಲಿ ಸ್ವಲ್ಪ ವಿಚಾರ ಗೊಂದಲವಿದೆ. ಹಣ ಕೊಡದೆ ಕೆಲ ನೂಲು ಕೊಡಬೇಕೆಂದು ಮಾಡಿದ್ದರ ಉದ್ದೇಶವು ಖಾದಿಗೆ ಅದರ ನ್ಯಾಯ್ಯವಾದ ಸ್ಥಾನವನ್ನು ಕೊಡಬೇಕೆಂಬುದಿರುವದು. ಮತ್ತು ನೂಲಿಗೆ ಪ್ರಚಲಿತ ನಾಣ್ಯದ ಸ್ವರೂಪ ಕೊಡುವುದೂ ಇದರ ಉದ್ದೇಶ. ನೂಲು ವಿಧಾಯಕ ಕಾರ್ಯಕ್ರಮದ ಅಂಗವೆಂದು ತಿಳಿದುಕೊಳ್ಳುವುದು ಸದ್ಯದ ಪ್ರತಿಪಾದನೆಗೆ ಯಾವ ಬಗೆಯಿಂದಲೂ ಒಗ್ಗುವದಿಲ್ಲ. ನಮ್ಮ ವಿಧಾಯಕ ಕಾರ್ಯಕ್ರಮದ ಪದ್ಧತಿಯ ಸೂರ್ಯಮಾಲೆಯಲ್ಲಿ ಚರಕವೇ ಮಧ್ಯ ಸೂರ್ಯ ಎಂಬುದನ್ನು ಕೆಲ ಹೊತ್ತು ಬದಿಗೆ ಸರಿಸುವಾ. ಸ್ವರಾಜ್ಯವು ಕೈನೂಲಿನ ಧಾರದೊಡನೆ ಸಂಬಂಧ್ಧವಾಗಿದಂದು ನಾವು ಭಾವಿಸಿಕೊಂಡರೆ ಆ ನೂಲಿನ ಬೆಲೆ ಬಂಗಾರ ಇಲ್ಲವೆ ಬೆಳ್ಳಿಯ ನಾಣ್ಯಗಳಿಗಿಂತ ಬಹಳ ಹೆಚ್ಚಾಗುವದು. ವಿಧಾಯಕ ಕಾರ್ಯಕರ್ತರು ನೂಲುವವನ್ನು ತಪ್ಪಿಸಿಕೊಳ್ಳಲಾರರು. ಯಜ್ಞ ಮಾಡುವುದನ್ನು ಆದೆಂತು ತಪ್ಪಿಸುವುದು? ಪ್ರತಿಯೊಬ್ಬನಿಗೂ ನೂಲುವದು ಆವಶ್ಯಕ ಯಜ್ಞ.

ಹೊಸದಿಲ್ಲಿ ಮೋ. ಕ. ಗಾಂಧಿ

೨೦—೪—೪೬

(ಹರಿಜನಬಂಧುವಿನಿಂದ)

ಟೀಕೆ ಟಿಪ್ಪಣಿಗಳು

(೭ನೇ ಪುಟದಿಂದ ಮುಂದರಿದುದು)

ಬೇರೆ ಬೇರೆ ಹೆಸರುಗಳಿವೆ. ನಾಗರಿ ಲಿಪಿಯಲ್ಲಿ ಮಾತ್ರವೇ ಇದ್ದಾಗ ಹಿಂದುಸ್ತಾನಿಯೇ ಹಿಂದೀ ಆಗಿತ್ತು. ಆದರೆ ಈಗ, ಎಲ್ಲರಿಗೂ ಗೊತ್ತಿರುವ ಕಾರಣಗಳಿಗೋಸ್ಕರ, ಅದು ಎರಡೂ ಲಿಪಿಗಳಲ್ಲಿ, ಅಂದರೆ ಹಿಂದೀ ಮತ್ತು ಉರ್ದು ಗಳಲ್ಲಿ ಹಿಂದುಸ್ತಾನಿ ಎನಿಸಿದೆ. ವ್ಯವಸ್ಥೆಗಳ ಸಕಾಲದಲ್ಲಿ ಪೂರ್ಣವಾಗುವದು ಸಾಧ್ಯವಿದ್ದಿದ್ದರೆ ಉರ್ದು ಸಂಸ್ಕರಣ ಹಿಂದೀ ಸಂಸ್ಕರಣದ ಸಂಗಡಲೇ ಪ್ರಕಾಶಿಸಲ್ಪಡುತಿತ್ತು. ಆದರೆ ಅಧಿಕಾರಿಗಳ ಅಪ್ಪಣೆ ಮತ್ತು ಮುದ್ರಾಕ್ಷರಗಳ ತೊಡಕುಗಳನ್ನು ಕಡೆ ಹಾಯಿಸಬೇಕಾಗಿ ಬಂತು. ಕಲ್ಲಚ್ಚಿನ ಮುದ್ರಣ ಹೆಚ್ಚು ಕಡಮೆ ಅಸಾಧ್ಯವೇ ಆಗಿತ್ತು. ತಜ್ಞರು ಉರ್ದು ಮುದ್ರಾಕ್ಷರಗಳೇ ಒಳಿತೆಂದು ಸಲಹೆಯಿತ್ತರು. ಬೇಕೆಂದೊಡನೆ ಅದು ದೊರೆಯುವಂತಿದ್ದಿಲ್ಲ. ಆದರೆ ಈಗ ಉರ್ದು ಸಂಸ್ಕರಣವನ್ನು ನಿಶ್ಚಿತವಾಗಿ ನಾಳೆ ಮೇ ೫ ಕ್ಕೆ ಹೊರತರುವ ಆಶೆಯಿದೆ.

ಮೂರೂ ಸಂಸ್ಕರಣಗಳಲ್ಲಿ ಬರುವ ವಿಷಯಗಳು ಯಾವಾಗಲೂ ಒಂದು ಇನ್ನೊಂದರ ಅನುವಾದವಾಗಿರುವದೆಂಬ ನಿಯಮವಿಲ್ಲ. ಮೂರರಲ್ಲಿನ ವಿಷಯಗಳು ಕೆಲಮಟ್ಟಿಗೆ ಬೇರೆ ಬೇರೆಯಾಗಿರುತ್ತವೆ. ಆದರೂ ನಾಗರಿ ಮತ್ತು ಉರ್ದು ಸಂಸ್ಕರಣಗಳು ಶಬ್ದಶಃ ಒಂದೇ ಬಗೆಯಾಗಿರುವವು. ಸಂಸ್ಕೃತಮಯ ಹಿಂದೀಯಾಗಲಿ ಪರ್ಶಿಯನ್‌ಮಯ ಉರ್ದುವಾಗಲಿ ಆಗದಿರುವ ಹಿಂದುಸ್ತಾನಿಯನ್ನು ನಿರ್ಮಿಸುವ ಪ್ರಯತ್ನ ಮಾಡಲಾಗುವದು. ಆ ಹಿಂದುಸ್ತಾನ ಜನಪ್ರಿಯವಾಗುವದೋ ಇಲ್ಲವೊ ಎಂಬದು ಹಿಂದುಸ್ತಾನಿ 'ಹರಿಜನ'' ದ ಓದುಗರನ್ನೆಷ್ಟೋ ಅಷ್ಟೇ ಅದರ ಲೇಖಕರನ್ನೂ ಅವಲಂಬಿಸಿದೆ.

ಹೊಸದಿಲ್ಲಿ ಮೋ. ಕ. ಗಾಂಧಿ

೨೧—೪—೪೬

ಕರ್ನಾಟಕ

ಧಾರವಾಡ

ರೋಣತಾಲೂಕ ಸವದಿಯಲ್ಲಿ ಇದೇ ೨೪ ರಿಂದ ಮೇ ೩ ರ ವರೆಗೆ ಜರುಗಲಿರುವ ಸಂಗಮೇಶ್ವರ ಜಾತ್ರೆಯನ್ನು ಆಹಾರ ಮೇವು ಹಾಗು ನೀರಿನ ಕೊರತೆಯ ಮೂಲಕ ಹಾಗು ಜಾತ್ರೆಯಾದರೆ ರೋಗ ಹಬ್ಬುವ ಸಂಭವವಿದ್ದುದರಿಂದ ನಿಲ್ಲಿಸಲಾಗಿದೆ. ರಥೋತ್ಸವ ಮಾತ್ರ ನಡೆಯುವದು. ಅದಕ್ಕೆ ಸ್ಥಳಿಕ ಜನರು ಮಾತ್ರ ಕೂಡಬಹುದು.

ರಾಯಟರ ಸಂಸ್ಥೆಯಲ್ಲಿ ಟೆಲಿಪ್ರಿಂಟರದ ಮೆಕ್ಯಾನಿಕರಾಗಿದ್ದ ಶ್ರೀ ವಿ ಜಿ ಸರದೇಸಾಯಿಯವರು ಧಾರವಾಡದಲ್ಲಿ ವಿಷಮಜ್ವರದಿಂದ ೨೦ ನೇ ತಾರೀಕು ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕೆಲಕಾಲ ಹುಬ್ಬಳ್ಳಿಯಲ್ಲಿಯ ಟೆಲಿಪ್ರಿಂಟರದ ಮೆಕ್ಯಾನಿಕರಾಗಿದ್ದರು.

ಧಾರವಾಡದಲ್ಲಿ ವೈಲೀ ಬೇನೇ ತಲೆ ಎತ್ತಿದೆ.

ಮುಂಬಯಿ ಕರ್ನಾಟಕ ವತನದಾರ ಕುಲಕರ್ಣಿ ಸಂಘದ ಕಾರ್ಯ ಸಮಿತಿ ಹಾಗು ವ್ಯವಸ್ಥಾಪಕ ಮಂಡಳದ ಸಭೆ ಸೇರಿ ಕಾಂಗ್ರೆಸ ಹುರಿಯಾಳುಗಳು ಆರಿಸಿ ಬಂದ ಮಂತ್ರಿಮಂಡಳ ಸ್ಥಾಪಿಸಿದ್ದಕ್ಕೆ ಅಭಿನಂದಿಸುವ, ಹಿಂದಿನ ಸರಕಾರವು ಕುಲಕರ್ಣಿಯರ ಬೇಡಿಕೆಗಳನ್ನು ಪೂರಯಿಸದಿದ್ದುದರ ನಿಷೇಧ, ಈಗಿನ ಜನಪ್ರಿಯ ಸರಕಾರದವರು ಕುಲಕರ್ಣಿಯರ ಬೇಡಿಕೆಗಳನ್ನು ಪೂರಯಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿ ಸ್ವೀಕೃತವಾದವು

ಧಾರವಾಡ ಮುನಸಿಪಾಲಿಟಿಯ ಸಭೆ ಸೇರಿ ದೀಪದ ಮೇಲೆ ಕರ ಹಾಕಬೇಕೊ ಹೇಗೆಂಬುದನ್ನು ವಿಚಾರಿಸಿ ಒಂದು ತಿಂಗಳೊಳಗಾಗಿ ವರದಿ ಮಾಡಬೇಕೆಂದು ಒಂದು ಸಮಿತಿ ಸ್ಥಾಪಿತವಾಯಿತೆಂದು ತಿಳಿಯುತ್ತದೆ. ಇದಕ್ಕೆ ಅಧ್ಯಕ್ಷ ಶ್ರೀ ಬಿ ಎ ದೇಸಾಯರ ಚೇರಮನ್‌ರಿರುವರು. ಶಿಕ್ಷಣದ ಕರವನ್ನು ಹೇರಬೇಕೆಂದು ಕೆಲ ಸದಸ್ಯರು ವಿಚಾರ ಮಾಡುತಿರುವರಂತೆ.

ಧಾರವಾಡ ತಾಲೂಕಿನ ಮನಗುಂಡಿಯಲ್ಲಿ ೨೨ ನೇ ತಾರೀಕಿನ ದಿವಸ ೪೫ ಎತ್ತು ಹೂಡಿದ ಬಂಡಿಯಲ್ಲಿ ಶ್ರೀ ಹುಕ್ಕೇರಿಕರ ಮತ್ತು ದುಂಡೂರ ಇವರ ಮೆರವಣಿಗೆ ಆಯಿತು. ವಿವಿಧ ವಾದ್ಯ ವೈಭವದೊಡನೆ ಮೆರವಣಿಗೆ ಊರಲ್ಲೆಲ್ಲ ಹಾಯ್ದು ವಿರಕ್ತಮಠಕ್ಕೆ ಬಂದಿತು. ಅಲ್ಲಿ ಶ್ರೀ ಮೋಹರೆ ಹಣಮಂತರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮಾನಪತ್ರ ಸಮರ್ಪಣೆಯಾಯಿತು ಶ್ರೀ. ಹುಕ್ಕೇರಿಕರರು ದುಂಡೂರರು ಈಗ ಅಧಿಕಾರದಲ್ಲಿ ಬಂದ ಸರಕಾರದ ಬಗ್ಗೆ ಹೇಳಿ ಯಾರೂ ಲಂಚ ಮುಂತಾದ್ದನ್ನು ಕೊಡಬಾರದೆಂದೂ ಸರಕಾರದ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಸಹಾಯಕರಾಗಬೇಕೆಂದೂ ಕೇಳಿಕೊಂಡರು.

ತಡಸಭಾಗದ, ತಡಸ ಶೀಲವಂತ ಸೋಮಾಪುರ, ಹಿರೇಬೆಂಕೀಗೇರಿ ಗ್ರಾಮಗಳಲ್ಲಿ ಅನೇಕ ಕಳವುಗಳಾಗಿದ್ದು ಅವುಗಳಲ್ಲಿ ಹಿರೇಬೆಂಡಿಗೇರಿ ಗ್ರಾಮದ ಕುಲಕರ್ಣಿ ಶ್ರೀ ಬೋಧರಾವ ಕುಲಕರ್ಣಿ ಇವರ ಮನೆಯಲ್ಲಿ ೩-೪ ಸಾವಿರ ರೂಪಾಯಿಗಳ ಸರಕು ಹೋಗಿತ್ತು. ಹಿರೇಬೆಂಡಿಗೇರಿಯ ಪೋಲಿಸ ಪಾಟೀಲ ವಿ ಎಲ್ ಪೋಲಿಸ ಪಾಟೀಲರು ೧೦—೧೨ ಜನರೊಂದಿಗೆ ವೇಷಾಂತರ ಮಾಡಿಕೊಂಡು ತಪಾಸ ಮಾಡುತ್ತ ಹಾವೇರಿ ತಾಲೂಕಿನ ಅಗಸನಮಟ್ಟಿ ಗ್ರಾಮದಲ್ಲಿ ಕಳ್ಳರನ್ನು ಮುತ್ತಿ ಹಿಡಿದಿರುವರು. ಪೋಲೀಸ ಜವಾದಾರ ಮುಂತಾದವರನ್ನು ಕರಕೊಂಡು ಹೋಗಿ ಕಳವಿನ ಮಾಲು ಪತ್ತೆ ಹಚ್ಚಿದರು.

ಮುಂಬಯಿ ಕರ್ನಾಟಕದಲ್ಲಿರುವ ಕೆಲಸ ಮಾಡುವ ಪಾಟೀಲರ ಸಮ್ಮೇಲನ ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ಹುಬ್ಬಳ್ಳಿಯಲ್ಲಿ ನೆರವೇರಿಸಬೇಕೆಂದು ವಿಚಾರವಿನಿಮಯ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು [illegible] ಎ. ಕೆ. ಪಾಟೀಲ [illegible] ಈ ಸಂಬಂಧಕ್ಕೆ ತಿಳಿಸಬೇಕೆಂದು [illegible] ಪಾಟೀಲ ಮತ್ತು ಗುರನಗೌಡ [illegible] ಪಾಟೀಲ ಇವರು ಪ್ರಕಟಿಸುತ್ತಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ಹುಬ್ಬಳ್ಳಿ ನಗರದಿಂದ ಶ್ರೀ ಬಿ. ಎಂ. ಮುನವಳ್ಳಿಯವರು ಆರಿಸಿ ಬಂದರು. ಇವರಿಗೆ ೧೧೯೩, ದೇವಪುರರಿಗೆ ೧೦೫೧ ಮತಗಳು ಬಿದ್ದವು. ೯೪ ಮತಗಳು ರದ್ದಾಗಿವೆ.

ಹುಬ್ಬಳ್ಳಿ ಕಲಘಟಗಿ ತಾಲೂಕ ಮತದಾರ ಸಂಘದಿಂದ ಶ್ರೀ ಮಲ್ಲನಗೌಡ ಪಾಟೀಲರಿಗೆ ೧೨೦೦ ಮತ್ತು ಶ್ರೀ ಕಲಾಲರಿಗೆ ೪೩೨ ಮತಗಳು ಬಿದ್ದು ಮಲ್ಲನಗೌಡರು ಆರಿಸಿ ಬಂದರು.

ವಿಜಾಪುರ

ಕೂಲಿಯವರಿಗೆ ವಾರಕ್ಕೊಂದು ದಿವಸದ ವಿಶ್ರಾಂತಿ ಸಿಕ್ಕಬೇಕು, ಬೇನೆ ಬಿದ್ದವರಿಗೆ ೩ ದಿನ ವಿಶ್ರಾಂತಿ ಸಂಬಳ ಕೊಡಬೇಕು, ಇನಾಕ್ಯುಲೇಶನ ಮಾಡಿಸಿಕೊಂಡವರಿಗೂ ಈ ಸೌಕರ್ಯ ಒದಗಿಸಬೇಕು ಬೆಣ್ಣೂರ ರಸ್ತೆ ಹಾಗು ಭಗವತಿಯ ಕುಡಿಯುವ ನೀರಿನ ಕೆಲಸವನ್ನು ಬರಗಾಲ ಕೆಲಸಗಳೆಂದು ತೀವ್ರವೇ ಪ್ರಾರಂಭಿಸಬೇಕೆಂದು ಮುಂತಾಗಿ ಬಾಗಲಕೋಟೆ ತಾಲೂಕ ಬರಗಾಲ ಕಮೀಟಿ ಸಭೆಯಲ್ಲಿ ನಿರ್ಣಯಿಸಲಾಯಿತು.

ಶ್ರೀ ಎಲ್ ಆರ್ ನಾಯಿಕ ಇವರು ಮುದ್ದೇಬಿಹಾಳಕ್ಕೆ ಮಾಮಲೇದಾರರಾಗಿರುವರು. ಇವರು ಲಮಾಣಿ ಸಮಾಜದ ಮೊದಲನೆ ಪದವೀಧರರೂ ಮೊದಲನೆ ಮಾಮಲೆದಾರರೂ ಇರುವರು.

ವಿಜಾಪುರದಿಂದ ೬ ಮೈಲಿನ ಮೇಲೆ ಕಳೆದ ಶುಕ್ರವಾರ ಮೋಟರ ಅಪಘಾತ ಸಂಭವಿಸಿ ಒಬ್ಬನು ಸತ್ತಿದ್ದು ಮೂವರಿಗೆ ಗಾಯಗಳಾದವು.

ಗಲಗಲಿಯು ಮೂರು ಸಂಸ್ಥಾನಗಳ ಸೆರಗಿಗೆ ಹತ್ತಿದ್ದರಿಂದ ಸಂಸ್ಥಾನಗಳ ಆಹಾರ ಪರಿಸ್ಥಿತಿ ಬ್ರಿಟಿಶ್ ಭಾಗಕ್ಕಿಂತ ಬಿಕ್ಕಟ್ಟಿನದಿರುವದರಿಂದ ಗಲಗಲಿಗೆ ದೊರೆತ ಆಹಾರ ಪದಾರ್ಥಗಳ ಬಹುಭಾಗವು ಲಾಭಬಡಕ ವ್ಯಾಪಾರಸ್ಥರ ಕೈವಾಡದಿಂದ ಸಂಸ್ಥಾನ ಪ್ರದೇಶಕ್ಕೆ ಸಾಗಿಸಲಾಗುತ್ತದೆ. ಮೇಲಧಿಕಾರಿಗಳು ಇತ್ತ ಗಮನಿಸುವದವಶ್ಯವಾಗಿದೆಂದು ಒಬ್ಬರು ಬರೆಯುತ್ತಾರೆ

ಬಳ್ಳಾರಿ

ಆದವಾನಿಯಲ್ಲಿ ಹತ್ತಿಕಾಳಿನ ಮೇಲಿನ ನಿರ್ಬಂಧವನ್ನು ತೆಗೆದುಹಾಕಿದ್ದರಿಂದ ಲಾಭಬಡಕರು ಹತ್ತಿಕಾಳನ್ನು ಜಿಲ್ಹೆ ಹೊರಗೆ ಸಾಗಿಸಹತ್ತಿದ್ದರು ಈಸಂಬಂಧದಲ್ಲಿ ಪ್ರಮುಖರು ಕಲೆಕ್ಟರರನ್ನು ಭೆಟ್ಟಿಯಾಗಿ ಬಿನ್ನವಿಲು ಅವರು ಮತ್ತೆ ನಿರ್ಯಾತದ ಮೇಲೆ ನಿರ್ಬಂಧ ಹೇರಿರುವರು. ಈ ರೀತಿ ನಿರ್ಯಾತ ನಿರ್ಬಂಧಪಡಿಸಿದ್ದರಿಂದ ಧಾರಣಿ ಕೆಳಗಿಳಿದಿದೆ. ರೂಪಾಯಿಗೆ ೧೨ ಪೌಂಡು ಸಿಗುತಿರುವದು.

ಬೆಳಗಾವಿ

ಚುರಮುರಿ ಮತ್ತು ಅವಲಕ್ಕಿಯನ್ನು ಬೆಳಗಾವಿ ಜಿಲ್ಹೆಯಲ್ಲಿ ಒಂದು ತಾಲೂಕಿನಿಂದ ಮತ್ತೊಂದು ತಾಲೂಕಿಗೆ ಅಪ್ಪಣೆ ಪಡೆಯದೆ ಒಯ್ಯಬಾರದೆಂದು ಜಿಲ್ಹಾ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ

ಪ್ರಾಂತಿಕ ಕಾಂಗ್ರೆಸ ಕಮೀಟಿಯ ಆಯ್ಕೆಯಾಗಿ ಶ್ರೀ ಅನಂತರಾವ ಮಂಡಗಿ ವಕೀಲರು ಸಂಸ್ಥಾನ ಭಾಗದಿಂದ ಆರಿಸಿ ಬಂದರು. ಅವರಿಗೆ ೩೫೫ ಮತಗಳು ಪ್ರತಿಸ್ಪರ್ಧಿಗಳಾದ ಮುಲಗೌಡ ಪಾಟೀಲರಿಗೆ ೨೫೪ ಮತಗಳು ಬಿದ್ದವು.

ಕನ್ನಡ ಸಂಸ್ಥಾನ

ರಾಯಚೂರಿನ ಪ್ರಮುಖ ಕಾರ್ಯಕರ್ತರಾದ ಶ್ರೀ ಅಡವಿರಾವ ಮೊದಲಾದವರು ಲೆವಿ ವಸೂಲಿ ಹಾಗು ಜಿಲ್ಹೆಯ ಸದ್ಯದ ಪರಸ್ಥಿತಿಯ ಸಂಬಂಧದಲ್ಲಿ ಸುಭೇದಾರರನ್ನು ಕಂಡು ವಿಚಾರವಿನಿಮಯ ಮಾಡಿದರು. ಪ್ರಶ್ನೆಗಳನ್ನು ಕೇಳಬಾರದೆಂದೂ ತಕರಾರುಗಳನ್ನು ಹೇಳಬೇಕೆಂದೂ ಸುಭೇದಾರರು ಹೇಳಿ ಕೆಲವು ತಕರಾರುಗಳನ್ನು ಕೇಳಿಕೊಂಡರು. ಹೆಚ್ಚಿನ ತಕರಾರುಗಳ ಬಗ್ಗೆ ಸರಕಾರೇತರ ಸಭಾಸದರನ್ನು ಕೇಳಿರೆಂದು ಸುಭೇದಾರರು ಹೇಳಿದರು.

ರಾಯಚೂರಿನ ೨೦ ಹೋಟಲುಗಳು ಕಡಿಮೆ ಸೀದಾ ನಿಷೇಧಿಸಲು ಕಳೆದ ಶನಿವಾರ ಪೂರ್ಣ ಮುಚ್ಚಿರುವವು. ಪ್ರತಿವಾರ ಕೊಡಲಾಗುವ ಸಕ್ಕರೆ ಹಾಗು ಅಕ್ಕಿ ಒಂದು ದಿನಕ್ಕಾದರೂ ಸಾಲುವದಿಲ್ಲೆಂದು ಅವರ ತಕರಾರು. ಸಂಪು ಪ್ರಾರಂಭವಾಗಿದೆ.

ಈಗ ಶಿಕ್ಷೆ ಅನುಭವಿಸುತ್ತಿರುವ ಇಲ್ಲವೆ ಖಟ್ಲೆಗೊಳಗಾಗಿರುವ ಯಾವತ್ತೂ ರಾಜಕೀಯ ಕೈದಿಗಳ ಬಿಡುಗಡೆ ಹಾಗು ಕೆಲವರ ಮೇಲೆ ವಾರಂಟುಗಳು ರದ್ದಾದ ಸಂಬಂಧದಲ್ಲಿ ವಿಚಾರ ಮಾಡಲು ಶಾಸನ ಸಭೆ ಕರೆಯಬೇಕೆಂದು ಕೊಲ್ಹಾಪುರ ಶಾಸನ ಸಭೆಯ ಪ್ರಜಾಪರಿಷತ್ತಿನ ಪಕ್ಷದವರು ಬಿನ್ನವಿಸಿಕೊಂಡರು.

ದಕ್ಷಿಣ ಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಲನದ ೫ ನೆಯ ಅಧಿವೇಶನವನ್ನು ಗದ್ವಾಲದಲ್ಲಿ ಜರುಗಿಸುವದಾಗಿ ನಿರ್ಣಯಿಸಲಾಗಿದೆ. ಕಾರ್ತಿಕ ಮಾಸದಲ್ಲಿ ಈ ಅಧಿವೇಶನ ಜರುಗುವದು.

ಬನಹಟ್ಟಿಯಲ್ಲಿ ನೀರಿನ ತಾಪತ್ರಯ ವಿಪರೀತವಾಗಿದೆ. ಪ್ರತಿಯೊಂದು ಬಾವಿಯ ಮೇಲೆ ಹಗಲು ರಾತ್ರಿಯೆನ್ನದೆ ೨೦ ರಿಂದ ೩೦ ಜನ ಇದ್ದೇ ಇರುವರು. ಹೀಗಾಗಿ ಜನರಿಗೆ ಬಹಳ ತೊಂದರೆಯಾಗಹತ್ತಿದೆ.

ಹಿಂದುಸ್ಥಾನ

ಮುಂಬಯಿ

ದಕ್ಷಿಣ ಆಫ್ರಿಕಾ ಯುನಿಯನ್ನಿನವರು ಸ್ವೀಕರಿಸಿದ ವರ್ಣದ್ವೇಷದ ಕಾಯದೆ ಪ್ರತೀಕಾರಾರ್ಥವಾಗಿ ಇಂಡಿಯಾ ಕ್ರಿಕೆಟ ಕ್ಲಬ್ಬಿನವರು ದಕ್ಷಿಣ ಆಫ್ರಿಕಾ ಬಿಳಿಯರನ್ನು ಕ್ಲಬ್ಬಿನಲ್ಲಿ ಸದಸ್ಯ ಇಲ್ಲವೆ ಅತಿಥಿಯನ್ನಾಗಿ ಸೇರಿಸಿಕೊಳ್ಳತಕ್ಕದ್ದಲ್ಲೆಂದು ನಿರ್ಧರಿಸಿದ್ದಾರೆ.

ಕಾಂಗ್ರೆಸ ಲೀಗಗಳಲ್ಲಿ ಒಡಂಬಡಿಕೆಯಾಗದಿದ್ದರೆ ಬ್ರಿಟಿಶ್ ಮಂತ್ರಿಗಳು ವಾಯವ್ಯ ಪಂಜಾಬ ಸಿಂಧ ಬಲೂಚಿಸ್ತಾನ, ಪೂರ್ವಬಂಗಾಲ ಮತ್ತು ಆಸಾಮದ ಸಿಲ್ಹೆಟ ಪ್ರಾಂತಗಳನ್ನು ಸೇರಿಸಿ ಪಾಕಿಸ್ತಾನ ಸ್ಥಾಪಿಸುವದಲ್ಲದೆ ಅದಕ್ಕೆ ಸಾರ್ವಭೌಮ ಅಧಿಕಾರಗಳನ್ನು ಕೊಟ್ಟು ಪಾಕಿಸ್ತಾನ ಹಿಂದುಸ್ತಾನಗಳ ನಡುಕೂಟ ಸ್ಥಾಪಿಸುವದು. ಬ್ರಿಟಿಶ್ ಮಂತ್ರಿಗಳನ್ನು ಭೆಟ್ಟಿಯಾಗಿ ಬಂದ ನಂತರ ಲ. ಬ ಭೋಪಟಕರರು ಹೇಳಿದರು. ಅಲ್ಲದೆ ಅವರು ನಡುಗಾಲ ಸರಕಾರ ಸ್ಥಾಪಿಸಿಯೆ ತೀರುವರೆಂದೂ ಅವರು ಹೇಳಿದರು.

ಮುಂಬಯಿ ನಗರದ ಜವಳಿ ಕೂಲಿಕಾರರು ತಮ್ಮ ಕೂಲಿಯು ಕಡಿತದಲ್ಲಿ ಬದಲಾವಣೆ ಆಗಬೇಕು. ಸಂಬಳ ಹೆಚ್ಚಾಗಬೇಕು. ಮುಂತಾಗಿ ಕೋಲಿಕಾರ ಅಧಿಕಾರಿಗಳಿಗೆ ನೋಟಿಸ ಕೊಟ್ಟಿದ್ದಾರೆ.

ಮೊಗಲ ಚಕ್ರವರ್ತಿ ಶಹಾಜಹಾನನ ಆಸ್ಥಾನ ಕವಿ ಶೇಕಸಾದಿಯ 'ಗುಲಿಸ್ತಾನ' ವೆಂಬ ಕಾವ್ಯ ಮೂಲ ಹಸ್ತಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರಪಡಿಸಬೇಕೆಂದು ಮುಂಬಯಿ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಸರ್ ಕಾವಸಜಿ ಜಹಾಂಗಿರರಿಗೆ ನೋಟಿಸ ಕೊಟ್ಟಿದ್ದಾರೆ. ಎಸ್ ಎಚ್ ರಿಝ್ವಿ ಎಂಬವನು ಹೈದ್ರಾಬಾದ ವಾಚನಾಲಯದೊಳಗಿಂದ ಕಳವು ಮಾಡಿ ಸರ್ ಕಾವಸಿಯವರಿಗೆ ೩೫೦೦ ರೂಪಾಯಿಗಳಿಗೆ ಮಾರಿದರು.

ಭಾರತದ ಪ್ರಾಂತಗಳ ಅರ್ಥಿಕ ಮತ್ತು ಪುನರ್ರಚನೆಯ ಮಂತ್ರಿಗಳ ಸಭೆ ಮಹಾತ್ಮರು ದಿಲ್ಲಿಯಿಂದ ಹಿಂತಿರುಗಿದ ನಂತರ ಪುಣೆಯಲ್ಲಾಗಲಿ ಮಹಾಬಳೇಶ್ವರದಲ್ಲಾಗಲಿ ಸೇರುವದು. ಗ್ರಾಮ ಪುನರ್ರಚನೆಯ ಬಗ್ಗೆ ಪ್ರೊ. ಜೆ ಸಿ ಕುಮಾರಪ್ಪನವರು ಮಾಡಿರುವ ಸೂಚನೆಗಳನ್ನು ಈ ಸಭೆಯಲ್ಲಿ ಚರ್ಚಿಸಲಾಗುವದೆಂದು ತಿಳಿಯುತ್ತವೆ.

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಖೇರರು ಸರಕಾರೀತರರಿಗೆ ಮೊದಲು ಗೊತ್ತುಪಡಿಸಿಕೊಂಡು ಪ್ರತಿ ದಿನ ಸಂಜೆ ೩ ರಿಂದ ೪ ರ ನಡುವೆ ಭೆಟ್ಟಿ ಕೊಡುವರು.

ಮುಂಬಯಿಯಲ್ಲಿ ಪೂರೈಕೆ ಖಾತೆಯಲ್ಲಿ ಅ. ಇನಸ್ಪೆಕ್ಟರರಾದ ಶ್ರೀ. ದತ್ತಾತ್ರಯ ಭಾಸ್ಕರ ಚಾಫೇಕರರು ಒಬ್ಬ ವ್ಯಾಪಾರಿಯ ಕಡೆಯಿಂದ ೩೦೦ ರೂಪಾಯಿಗಳ ಲಂಚ ಪಡೆದುಕೊಂಡಿದ್ದರು. ಅವರು ಆ ಹಣ ಹೊರಗೆಸೆಯುವ ಪ್ರಯತ್ನದಲ್ಲಿದ್ದಾಗ ಅವರನ್ನು ಬಂಧಿಸಲಾಯಿತು. ಪುಣೆಯ ವಿಶೇಷ ನ್ಯಾಯಾಲಯದಲ್ಲಿ ಅವರಿಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ೧೦೦೦ ರೂಪಾಯಿ ದಂಡ ವಿಧಿಸಲಾಯಿತು. ವ್ಯಾಪಾರಿಯ ಲಾಭಬಡಕತನ ಕಂಡು ಹಿಡಿದು ಅವನಿಂದ ೩೦೦ ರೂಪಾಯಿ ಲಂಚ ತೆಗೆದುಕೊಂಡಿದ್ದರು.

ಪಂಢರಪುರ ನಗರ ಸಭೆಯನ್ನು ಜೂನ ೨೦ ಕ್ಕೆ ಲೋಕಪ್ರತಿನಿಧಿಗಳಿಗೆ ತಿರುಗಿ ಕೊಡಲು ನಿರ್ಧರಿಸಿದ್ದಾರೆ. ಜೂನ ೧೯೩೪ ರಿಂದ ಈ ನಗರ ಸಭೆ ರದ್ದಾಗಿತ್ತು.

ಮುಂಬಯಿ ಹಾಯಕೋರ್ಟಿನ ಹಿಂದಿನ ನ್ಯಾಯಾಧೀಶ ಸರ್ ಸೀತಾರಾಮ ಪಾಟಕರರು ನಿಧನ ಹೊಂದಿದರು.

ಸಂಯುಕ್ತ ರಾಷ್ಟ್ರಗಳ ಸ್ತ್ರೀಯರ ಸ್ಥಾನಮಾನ ಉಪಸಮಿತಿಯ ಸಭೆ ನ್ಯೂಯಾರ್ಕದಲ್ಲಿ ಸೇರಲಿದ್ದು ಆ ಸಭೆಗಾಗಿ ಶ್ರೀ ಹಂಸಾ ಮೇಥಾ ಇವರು ವಿಮಾನ ಮೂಲಕ ನ್ಯೂಯಾರ್ಕಕ್ಕೆ ತೆರಳಿದರು.

ಮುಂಬಯಿ ಪ್ರಾಂತದಲ್ಲಿ ಪೌಷ್ಟಿಕ ಅಹಾರ ಕೊರತೆ ಇರುವ ಪ್ರದೇಶಗಳಲ್ಲಿ ಎ ಜೀವನ ಸತ್ವವನ್ನು ಹಂಚುವದಕ್ಕಾಗಿ ಶಾರ್ಕಮೀನದ ಎಣ್ಣೆಯಿಂದ ಎ ಜೀವ ಸತ್ವವನ್ನು ತೆಗೆಯಲು ಅಪ್ಪಣೆ ಕೊಟ್ಟಿದ್ದಾಗಿದೆ ಎಂದು ಶ್ರೀ ಬಿ ಜಿ ಖೇರರು ಭಾರತದ ವೈದ್ಯರ ಸಂಸ್ಥೆಯ ಪ್ರಥಮ ವಾರ್ಷಿಕೋತ್ಸವದ ಕಾಲಕ್ಕೆ ಹೇಳಿದರು.

ಮಂತ್ರಿಗಳು ಮೂರುಪಟ್ಟು ಸಂಬಳ ಪಡೆಯುವವರಾದರೆ ಪ್ರಾಥಮಿಕ ಶಿಕ್ಷಕರು ಈಗಿನ ಇಮ್ಮಡಿ ಸಂಬಳವನ್ನಾದರೂ ಪಡೆಯಬೇಕೆಂದು ಮುಂಬಯಿ ಮುಖ್ಯ ಮಂತ್ರಿ ಶ್ರೀ ಬಾಳಾಸಾಹೇಬ ಖೇರರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಮಧ್ಯಪ್ರಾಂತ

ಮಧ್ಯಪ್ರಾಂತ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆ ಸೇರಿ ಪಂಡಿತ ರವಿಶಂಕರ ಶುಕ್ಲರನ್ನು ಪಕ್ಷದ ಧುರೀಣರನ್ನಾಗಿ ಆರಿಸಲಾಯಿತು. ಶುಕ್ಲರು ಮಂತ್ರಿಮಂಡಳ ರಚನೆಯಲ್ಲಿ ಕಾಂಗ್ರೆಸ ವರಿಷ್ಠರ ಸಲಹೆ ಕೇಳಲು ದಿಲ್ಲಿಗೆ ಹೋಗಿರುವರು.

ಈ ವರ್ಷ ಸಪ್ಟೆಂಬರದಲ್ಲಿ ಮಾಂಟ್ರೇಲದಲ್ಲಿ ಸೇರಲಿರುವ ಅಂತರರಾಷ್ಟ್ರೀಯ ಕೂಲಿಕಾರ ಪರಿಷತ್ತಿನ ೨೯ ನೇ ಅಧಿವೇಶನಕ್ಕೆ ಮೃಣಾಲ ಕಾಂತಿ ಬೋಸರು (ಧುರೀಣರು) ಶಿಬನಾಥ ಬ್ಯಾನರ್ಜಿ ಮಣೀಕ ಗಾಂಧಿ, ಅಬಿದಲಿ ಜಾಫರಭಾಯಿ, ಎಸ್ ವಿ ಫಡಕೆ, ಎ ಎಸ್ ಮಲಿಕ ಮತ್ತು ಟಿ ಎ ಗಾಯಕವಾಡ (ಸಲಹೆಗಾರರು) ಇವರು ಟ್ರೇಡ ಯೂನಿಯನ್ ಕಾಂಗ್ರೆಸ ಸಭೆಯಲ್ಲಿ ಆರಿಸಲಾಯಿತು.

ಘಮಾಪುರದ ಮದ್ದಿನ ಕಾರಖಾನೆಯಲ್ಲಿ ಮದ್ದನ್ನು ಬೀಸುತ್ತಿದ್ದಾಗ ಒಂದು ಕಿಡಿ ಹಾರಿ ಮದ್ದಿನ ರಾಶಿಗೆ ತಗಲಿದ್ದು ಭಯಂಕರ ಸ್ಫೋಟ ಸಂಭವಿಸಿತು. ಮದ್ದನ್ನು ಬೀಸುತ್ತಿದ್ದ ಮೂವರು ಹೆಣ್ಣು ಮಕ್ಕಳಲ್ಲಿ ಒಬ್ಬಳು ಕೂಡಲೆ ಮರಣ ಹೊಂದಿದಳು. ಬೇರೆ ಇಬ್ಬರು ಆಸ್ಪತ್ರೆಯ ದಾರಿಯಲ್ಲಿ ಮರಣ ಹೊಂದಿದರು.

ಮಧ್ಯಪ್ರಾಂತದಲ್ಲಿ ಲೀಗ ಹುರಿಯಾಳುವಿನ ವಿರುದ್ಧ ನಿಂತ ಅಶಗರ ಅಲ್ಲಿಯವರು ೫೪೫೫ ಮತ ಪಡೆದು ಯಶಸ್ವಿಯಾದರು. ಲೀಗ ಹುರಿಯಾಳಿಗೆ ೨೮೮೪ ಮತ ಬಿದ್ದು ಸೋತರು. ಅಲ್ಲಿಯೆ ಕಾಂಗ್ರೆಸ ಅಧಿಕೃತ ಹುರಿಯಾಳನ್ನು ವಿರೋಧಿಸಿದ ರಾಮಜಿಯವರಿಗೆ ಕೇವಲ ೧೩೭ ಮತ ದೊರಕಿಸಿ ಇಡುಗಂಟು ಕಳೆದುಕೊಂಡರು. ಕಾಂಗ್ರೆಸ್ಸಿನವರಾದ ಡಾ. ಬಾರ್ಲಿಂಗೆ ಇವರಿಗೆ ೫೪೫೫ ಮತ ಬಿದ್ದು ಯಶಸ್ವಿಯಾದರು.

ಮಧ್ಯಪ್ರಾಂತದ ಗವ್ಹರ್ನರರಾದ ಆರ್ಥಿಕ ಸಲಹೆಗಾರರಾದ ಶ್ರೀ ಸಿ ಎಸ್ ಜಯರತ್ನಂರನ್ನ ರೇವಾ ಸಂಸ್ಥಾನದ ಮುಖ್ಯ ಮಂತ್ರಿಯಾಗಿ ನೇಮಿಸಲಾಗಿದೆ.

ಡ್ರುಗ ಜಿಲ್ಹಾ ಮಂಡಳದ ೪೦೦ ಶಿಕ್ಷಕರು ಹೆಚ್ಚಿನ ಸಂಬಳ ಹಾಗು ತುಟ್ಟಿ ಭತ್ತೆ ಬೇಡಿ ಅವು ಮಾನ್ಯವಾಗದಿದ್ದರೆ ಸಂಪು ಹೂಡಲು ನಿಶ್ಚಯಿಸಿದ್ದಾರೆ.

ಮದ್ರಾಸ

ಮದ್ರಾಸ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಸಭೆ ಸೇರಿ ದೀರ್ಘವಿಚಾರ ವಿನಿಮಯದ ನಂತರ ಶ್ರೀ ಟಿ. ಪ್ರಕಾಶಂರನ್ನು ಕಾಂಗ್ರೆಸ ಪಕ್ಷದ ಧುರೀಣರನ್ನಾಗಿ ಆರಿಸಿದರು. ಅವರಿಗೆ ೮೨ ಮತಗಳು ವಿರುದ್ಧ ನಿಂತಿದ್ದ ಶ್ರೀ ಮುಥುರಂಗ ಮುದಿಯಾರರಿಗೆ ೬೯ ಮತಗಳು ಬಿದ್ದವು. ಟಿ ಪ್ರಕಾಶಂರು ಗವರ್ನರರನ್ನು ಭೆಟ್ಟಿಯಾಗಿದ್ದು ೩೦ ನೇ ತಾರೀಕು ಮಂತ್ರಿ ಮಂಡಳ ರಚಿಸುವರು.

ಕ್ಯಾ. ಲಕ್ಷ್ಮಿಯವರು ಓರಿಯಂಟ ವಾರಪತ್ರಿಕೆಯ ಸಂಪಾದಕರಾದ ಪಿ. ಕೆ. ಟಾಮಸರೊಡನೆ ತಿರುವಾಂಕೂರಿಗೆ ಭೆಟ್ಟಿ ಕೊಟ್ಟರು. ಟಾಮಸರು ಸರದಾರ ಪಟೇಲರ ಅಪ್ಪಣೆ ಮೇರೆಗೆ ಕೇರಳದಲ್ಲಿ ನಡೆದಿರುವ ಆ ಹಿಂ. ಸೇನಾ ಪರಿಹಾರ ಕಾರ್ಯದ ಬಗ್ಗೆ ವರದಿ ಮಾಡಲು ಆ ಭಾಗದಲ್ಲಿ ಸಂಚರಿಸುತಲಿದ್ದಾರೆ. ಕ್ವಿಲನ್, ತ್ರಿವೆಂದಮ್ಮ ಮೊದಲಾದ ಸ್ಥಳಗಳನ್ನು ಅವರು ಸಂದರ್ಶಿಸಿದರು.

ಸಂಯುಕ್ತಪ್ರಾಂತ

ಝಾಂಸಿಯಲ್ಲಿ ೨೦ ನೇ ತಾರೀಕು ದಂಗೆಯಾಗಿ ೧೦ ಜನರಿಗೆ ಗಾಯವಾಗಿವೆ. ನಾಲ್ವರಿಗೆ ಭಯಂಕರ ಪೆಟ್ಟು ಬಿದ್ದಿದೆ. ಈ ಸಂಬಂಧದಲ್ಲಿ ಮುಸ್ಲಿಂ ಲೀಗ ಧುರೀಣರೊಬ್ಬರನ್ನೊಳಗೊಂಡು ೭ ಜನ ಮುಸಲ್ಮಾನರನ್ನು ಬಂಧಿಸಲಾಗಿದೆ.

ಕಾನಪುರಕ್ಕೆ ೫ ಮೈಲು ದೂರದಲ್ಲಿರುವ ಆರ್ ಎ ಎಫ್ ಬರಾಕುಗಳಿಗೆ ೧೯ ನೇ ತಾರೀಕು ಬೆಂಕಿ ಹತ್ತಿ ಅನೇಕ ಬರಾಕುಗಳು ಸುಟ್ಟು ಹೋದುವಲ್ಲದೆ ಲಕ್ಷಗಟ್ಟಲೆ ರೂಪಾಯಿಗಳ ಹಾನಿಯಾಗಿದೆ.

ಹೊಸದಿಲ್ಲಿ

ಈ ವರ್ಷ ಮಾರ್ಚ ಕೊನೆಯ ವರೆಗೆ ರೇಲ್ವೆ ನೌಕರರಲ್ಲಿ ೩೪೬೫೮ ಜನ ಹೆಚ್ಚಾಗಿದ್ದಾರೆಂದು ರೇಲ್ವೆ ಮಂಡಳ ಪ್ರಕಟನೆ ಹೊರಡಿಸಿದೆ. ಇವರಲ್ಲಿ ೧೪೯೧೦ ಜನರನ್ನು ಪುನಃ ರೇಲ್ವೆಗಳಲ್ಲಿಯೆ ಸೇರಿಸಿಕೊಳ್ಳಲಾಗಿದೆ. ೧೫೭೪೮ ಜನರನ್ನು ಮನೆಗೆ ಕಳಿಸಬೇಕಾಗುವದು.

ಅಝಾದ ಹಿಂದ ಸೇನೆಯಲ್ಲಿ ಸೇನಾಧಿಕಾರಿಗಳಾಗಿದ್ದ ಹೊಸಪೇಟೆಯ ಶ್ರೀ ಐ ಡಿ ಲೋಕನಾಥನ್‌ರು ದಿಲ್ಲಿ ದಂಡಿನ ಕಾಬೂಲ ಲಾಯನ್ಸದಿಂದ ಬಿಡುಗಡೆ ಹೊಂದಿದ್ದಾರೆ. ಅವರೊಂದಿಗೆ ಬೇರೆ ೯ ಜನರೂ ಬಿಡುಗಡೆ ಹೊಂದಿದ್ದಾರೆ.

ಮಂತ್ರಿತ್ರಯರ ಮಾತುಕತೆ ಯಶಸ್ವಿಯಾಗಲಿ ಬಿಡಲಿ ದಿಲ್ಲಿಯಲ್ಲಿ ಜಾತೀಯ ದೊಂಬಿ ಯಾವಾಗ ಸಂಭವಿಸುವದೋ ಎಂಬ ನಿಯಮವಿಲ್ಲ. ಆದುದರಿಂದ ಎಲ್ಲೆಡೆ ವಿಶೇಷ ದಕ್ಷತೆ ತೆಗೆನುಕೊಳ್ಳಲಾಗುತ್ತದೆ. ೧೪೪ ನೇ ಕಲಮು ಜಾರಿ ಮಾಡಲಾಗಿದೆ. ಶಾಂತತಾ ಸಮಿತಿಗಳನ್ನು ಸ್ಥಾಪಿಸುತಿರುವರು. ಚೂರಿ ಲಾಠಿ ಮೊದಲಾದವುಗಳ ಮಾರಾಟ ವಿಶೇಷ ನಡೆದಿದೆಂದು ಡಾನ ಪತ್ರಿಕೆ ಬರೆಯುತ್ತದೆ.

ಹೊಸದಾಗಿ ೪೦೦೦ ವಾಗಿನುಗಳನ್ನು ಕಟ್ಟುವ ಸಂಬಂಧದಲ್ಲಿ ಹಿಂದುಸ್ತಾನದಲ್ಲಿಯ ಕಂಪನಿಗಳೊಡನೆ ಕರಾರು ಮಾಡಿಕೊಳ್ಳುವದಕ್ಕೂ ಕಲ್ಲಿದ್ದಲಿ ಕಣಿಗಳ ಅಭಿವೃದ್ಧಿ ಸಂಬಂಧದಲ್ಲಿ ಕಾರಖಾನದ್ದ ಶಾಖಾ ಮಾರ್ಗ ರಚಿಸುವದಕ್ಕೂ ರೇಲ್ವೆ ಸ್ಥಾಯಿ ಸಮಿತಿಯವರು ಒಪ್ಪಿಗೆ ಕೊಟ್ಟರು.

೧೯೪೫ ಎಪ್ರಿಲ ೧ ರಿಂದ ೧೯೪೬ ಮಾರ್ಚ ೩೧ರ ಕೊನೆಗೆ ೨೧೯.೯೧ ಕೋಟಿ ಉತ್ಪನ್ನವಾಗಿ ಜಾನೆವಾರಿ ಕೊನೆ ವರೆಗೆ ೯೭.೫೪ ಕೋಟಿ ರೂಪಾಯಿ ವೆಚ್ಚವಾಗಿದೆಂದು ರೇಲ್ವೆ ಖಾತೆಯ ಸ್ಥಾಯೀ ಸಮಿತಿಯಲ್ಲಿ ನಿವೇದಿಸಲಾಯಿತು. ಇದರಲ್ಲಿ ಸವಕಳಿ ನಿಧಿ ಕೂಡಿಲ್ಲ. ಉತ್ಪನ್ನ ಹಿಂದಿನ ವರ್ಷಕ್ಕಿಂತ ೨.೫೬ ಕೋಟಿ ಹೆಚ್ಚಾಗಿದ್ದು ವೆಚ್ಚವೂ ೧೫.೫೪ ಕೋಟಿ ರೂಪಾಯಿ ಬೆಳೆದಿರುವದು.

ಶ್ರೀ ದೇವದಾಸ ಗಾಂಧಿ ಮತ್ತು ರಾಮನಾಥ ಗೊಯಂಕಾ ಇವರು ಇಂಡಿಯನ್ ಮತ್ತು ಈಸ್ಟರ್ನ ನ್ಯೂಜ ಪೇಪರ ಸೊಸಾಯಿಟಿ ಪರವಾಗಿ ಕಾಗದದ ಕೊರತೆ ಸಂಬಂಧದಲ್ಲಿ ವಿಚಾರವಿನಿಮಯ ಮಾಡಲು ೨೭ ಕ್ಕೆ ಅಮೇರಿಕೆಗೆ ಹೊರಡುವರು.

ಬಂಗಾಲ

ಬಂಗಾಲದಲ್ಲಿ ಲೀಗ—ಕಾಂಗ್ರೆಸ ಸಮ್ಮಿಶ್ರ ಮಂತ್ರಿಮಂಡಳ ರಚಿಸಬೇಕೆಂದು ಮಾತುಕತೆ ನಡೆದಿದ್ದವಷ್ಟೆ. ಆದರೆ ಬ್ಯಾ. ಜಿನ್ನಾರು ಹಸ್ತಕ್ಷೇಪ ಮಾಡಿದ್ದರಿಂದ ಲೀಗದ ಸುರವರ್ದಿ ಮತ್ತು ಕಾಂಗ್ರೆಸ್ಸಿನ ಕಿರಣ ಶಂಕರರಾಯರಲ್ಲಿ ನಡೆದ ಮಾತುಕತೆ ಅಯಶಸ್ವಿಯಾದವು.

ಬಂಗಾಲ ಲೀಗ ಪಕ್ಷದ ಧುರೀಣರಾದ ಎಸ್. ಎಚ್, ಸುರವರ್ದಿಯವರು ೭ ಜನ ಮುಸ್ಲಿಮರನ್ನು ಒಬ್ಬ ಹರಿಜನರನ್ನು ಸೇರಿಸಿ ಮಂತ್ರಿಮಂಡಳ ರಚಿಸಿಕೊಂಡಿರುವರು. ಶ್ರೀ ಸುರವರ್ದಿ. (ಗೃಹ,) ಖಾ. ಬ. ಮಹಮ್ಮದ ಅಲ್ಲಿ (ಅರ್ಥಿಕ ಸ್ಥಾನಿಕ) ಖಾ. ಬ. ಮಜಿಮುದ್ದೀನ ಹುಸೇನ (ಶಿಕ್ಷಣ) ಖಾ. ಬ. ಅಬ್ದುಲ್ ರಹಿಮಾನ (ಸೀರಾವರಿ) ಶಮಸುದ್ದೀನ ಅಹಮ್ಮದ (ವಾಣಿಜ್ಯ) ಜಿ ಎನ್. ಮೊಂಡಾಲ (ನ್ಯಾಯ) - ಖಾತೆಗಳನ್ನು ಹಂಚಲಾಗಿದೆ.

ಕಳೆದ ಗುರುವಾರ ದಿವಸ ಕಲಕತ್ತೆಯ ಯುರೋಪಿಯನ್ ಸ್ಟೋರಿನಲ್ಲಿ ನಗದಿ ಕಾರಕೂನನಿಗೆ ಪಿಸ್ತೂಲ ತೋರಿಸಿ ೪೦೦ ರೂಪಾಯಿ ಅಪಹರಿಸಿಕೊಂಡು ಓಡಿಹೋದ ಸಂಬಂಧದಲ್ಲಿ ರಾಯಲ್ ಆರ್ಟಿಲರಿಯ ಬ್ರಿಟಿಶ್ ಸೈನಿಕನೊಬ್ಬ ಮಿಲಿಟರಿಯವರಿಂದ ಬಂಧಿಸಲ್ಪಟ್ಟಿದ್ದಾನೆ.

ಡಾಕಾದ ಪೋಲೀಸರು ತಮಗೆ ೮೦ ರೂ. ಯಿ ಸಂಬಳ, ಮನೆಬಾಡಿಗೆ ೧೦ ರೂಪಾಯಿ ಪುಕ್ಕಟೆ ಸೀದಾ ಸಿಗಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದಾರಂತೆ. ಈ ಸಂಬಂಧದಲ್ಲಿ ೨೦ ನೇ ತಾರೀಕಿನಿಂದ ವಳರು ಸಂಪು ಪ್ರಾರಂಭಿಸಿದ್ದಾರೆ.

ಸಿಂಧ--ಪಂಜಾಬ

ಕಾಂಗ್ರೆಸ ಅಧ್ಯಕ್ಷರಾದ ಮೌಲಾನಾ ಆಝಾದರಿಗೆ ರವಿವಾರ ದಿನ ಪಂಜಾಬದ ಅರ್ಥಿಕ ಮಂತ್ರಿಗಳಾದ ಲಾಲಾ ಭೀಮಸೇನ ಸಾಚಾರರೊಡನೆ ಆಹಾರ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿದರು. ಪ್ರಾಂತದಲ್ಲಿ ಹಿಂಗಾರಿ ಬೆಳೆ ನೆಟ್ಟಗಿರುವದೆಂದೂ ಅದು ಹಿಂದುಸ್ತಾನ ಸರಕಾರಕ್ಕೆ ಸಹಾಯ ಮಾಡಲು ಶಕ್ತವಾಗಬಹುದೆಂದೂ ಸಾಚಾರರು ಅಧ್ಯಕ್ಷರಿಗೆ ತಿಳಿಸಿದರು.

ಪಂಜಾಬ ಮತ್ತು ಬಂಗಾಲ ಪ್ರಾಂತಗಳ ವಿಚ್ಛೇದನೆಯನ್ನು ಯೋಜಿಸಿದ್ದರೆ ನಾವದನ್ನು ಪ್ರತಿಭಟಿಸುವೆವು ಎಂದು ಶರಚ್ಚಂದ್ರ ಬೋಸರು ಅಭಿಪ್ರಾಯ ಪಟ್ಟಿರುವರು.

ಸಕ್ಕರದಲ್ಲಿ ಸಕ್ಕರೆ ಸಿಮೆಂಟ ಕಾರಖಾನೆಯಲ್ಲಿ ೭೦೦ ಕೆಲಸಗಾರರು ಯೂನಿಯನ್‌ದ ಸೆಕ್ರೆಟರಿಯನ್ನು ಕೆಲಸದಿಂದ ತೆಗೆದೊಗೆದ ನಿಷೇಧಾರ್ಥವಾಗಿ ಸಂಪು ಹೂಡಿದ್ದಾರೆ. ೨೧ ನೇ ತಾರೀಕು ಮೆರವಣಿಗೆ ತೆಗೆದು ಮುಖ್ಯ ಬೀದಿಗಳಲ್ಲೆಲ್ಲ ಅಡ್ಡಾಡಿದರು.

ಪಂಜಾಬದಲ್ಲಿ ಸೆಕ್ಯುರಿಟಿ ಕೈದಿಗಳ ಕೊನೆಯ ಕಂಡವನ್ನು ಸರಕಾರದವರು ಬಿಡುಗಡೆ ಮಾಡಿದರು. ಈಗ ಪ್ರಾಂತದಲ್ಲಿ ಸೆಕ್ಯುರಿಟಿ ಕೈದಿಗಳೇ ಇರುವದಿಲ್ಲ.

ಓಡಿಸಾ

ಓಡಿಸಾದಲ್ಲಿ ಕಾಂಗ್ರೆಸ ಪಕ್ಷದ ಧುರೀಣರಾದ ಹರಿಕೃಷ್ಣ ಮೆಹತಾಬರು ಮಂತ್ರಿಮಂಡಳವನ್ನು ರಚಿಸಿರುವರು. ಮೆಹತಾಬ (ಗೃಹ ಅರ್ಥಿಕ) ನಾ ಭಾ ಕೃಷ್ಣ ಚೌಧರಿ (ಕಂದಾಯ ಪೂರೈಕೆ) ಲಿಂಗರಾಜ ಮಿಶ್ರ (ಶಿಕ್ಷಣ ಸ್ಥಾನಿಕ) ನಿತ್ಯಾನಂದ ಕಾನುಗೊ (ನ್ಯಾಯ ಬೆಳವಣಿಗೆ) ರಾಧಾಕೃಷ್ಣ ವಿಶ್ವಾಸರಾಯ (ವಾಣಿಜ್ಯ ಕೂಲಿಕಾರ) ಕಾಲಂಡ್ಸ ಸಮಿತಿಯ ವರದಿಯನ್ನನುಲಕ್ಷಿಸಿ ಶಾಖೆಗಳ ಹಂಚಿಕೆಯಲ್ಲಿ ಮತ್ತೆ ಬದಲಾವಣೆ ಮಾಡಬಹುದು.

ಓಡಿಸಾದ ಪಾರ್ಲಕಿಮಿಡಿಯಲ್ಲಿ ತಹಸೀಲದಾರರು ಪೋಲೀಸರೊಂದಿಗೆ ಹಪ್ತೆ ವಸೂಲಿಗೆ ಹೋದಾಗ ಬಡೆದಾಟ ಸಂಭವಿಸಿ ಮೂವರು ಪೋಲೀಸರು ಮಡಿದರು. ಒಬ್ಬನಿಗೆ ತೀವ್ರ ಗಾಯಗಳಾಗಿವೆ.

ಬ್ರಹ್ಮದೇಶ

ಆಧುನಿಕ ಮಿಲಿಟರಿ ಆಯುಧಗಳಿಂದ ಸಜ್ಜಾದ ೨೦೦ ದರೋಡೆಗಾರರು ೧೯ ನೇ ತಾರೀಕು ಟಾಂಗೂ ಜಿಲ್ಹೆಯಲ್ಲಿ ಕ್ಯಾಯಿಕಿ ಪೋಲೀಸ ಠಾಣೆಯ ಮೇಲೆ ದಾಳಿ ಮಾಡಿ ಪೋಲಿಸ ಠಾಣೆ ಹಾಗು ಕಚೇರಿ ಸುಟ್ಟು ತಿಜೋರಿಯಲ್ಲಿಯ ೨೬ ಸಾವಿರ ರೂಪಾಯಿ ಲೂಟ ಮಾಡಿ ಪೋಲಿಸ ಠಾಣೆ ಇನಸ್ಪೆಕ್ಟರರು, ಮೂವರು ಕಾನ್‌ಸ್ಟೇಬಲರನ್ನು ಒಯ್ದುಕೊಂಡು ಹೋಗಿ ಅವರನ್ನು ಕೊಂದು ಹಾಕಿದರು. ಅವರನ್ನು ಅಡ್ಡಗಟ್ಟಿದ ಪೋಲಿಸ ಮತ್ತು ಸೈನಿಕರೊಡನೆಯೂ ಅವರು ಹೋರಾಡಿದರು. ಇದರಲ್ಲಿ ೫ ದರೋಡೆಗಾರರು ಸತ್ತದ್ದಲ್ಲದೆ ಇಬ್ಬರಿಗೆ ಗಾಯಗಳಾದವು.

ಮಂತ್ರಿತ್ರಯರ ಮಾತುಕತೆ ಯಶಸ್ವಿಯಾದರೆ ?

[೧ ನೇ ಪುಟದಿಂದ ಮುಂದೆ ಸಾಗಿದ್ದು]

ಹೋರಾಟವು ಯಶಸ್ವಿಯಾಗಲೆಂದು ಹಾರಯಿಸಿದ್ದಾರೆ. ಯಾವದೆ ಕಾರಣದಿಂದ ಬ್ರಿಟಿಶ ಸರಕಾರದವರು ಈ ಸಮಯದಲ್ಲಿ ಹಿಂದುಸ್ತಾನವನ್ನು ಸಮಾಧಾನ ಪಡಿಸದಿದ್ದರೆ ಅದೊಂದು ಜಾಗತಿಕ ಪ್ರಶ್ನೆಯಾಗಿಯೆ ಪರಿಣಮಿಸುವದು ಫೆನ್‌ರ್ ಬ್ರಾಕ್ವೆಯವರು ಹೇಳಿದಂತೆ ದೇಶದಲ್ಲೆಲ್ಲ ಭಾರಿ ಚಳವಳಿ ಏಳಬಹುದು. ಹಾಗಾಗದಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯವಾಗಿದೆ. ಸಂತುಷ್ಟ ಹಿಂದುಸ್ತಾನದಲ್ಲಿ ಹಿಂದುಸ್ತಾನದ ಹಿತವಿಷ್ಟೇ ಇರದೆ ಬ್ರಿಟನ್‌ದ ಅದೇಕೆ ಇಡೀ ಜಗತ್ತಿನ ಸುಖ ಶಾಂತಿ ಸಮಾಧಾನಗಳು ಅಡಕವಾಗಿವೆ. ಇದನ್ನು ನೆನೆದು ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಫೆನ್‌ರ್ ಬ್ರಾಕ್ವೆಯಂಥವರು ವ್ಯಕ್ತಪಡಿಸಿದ ಸಂಶಯದ ನಿವಾರಣೆ ಮಾಡುವದು ಭಾರತ ಮಂತ್ರಿಗಳ ಹೊಣೆಯಾಗಿದೆ. ಜಗತ್ತಿನ ಶಾಂತಿಸುಖ ಸಮೃದ್ಧಿಗಳಿಗೆ ಕಾರಣವಾದ ಹಿಂದುಸ್ತಾನದ ಸ್ವಾತಂತ್ರ್ಯ ಬೇಗ ಫಲಿಸಲಿ.

ಸುಭಾಸರನ್ನು ಕೊಲ್ಲಲು ಬ್ರಿಟಿಶ್‌ರ ಪ್ರಯತ್ನ ?

ಮೂರುಸಲ ಗಂಡಾಂತರ

ಸುಭಾಷಚಂದ್ರ ಬೋಸರು ಬ್ರಹ್ಮದೇಶದಲ್ಲಿದ್ದಾಗ ಅವರ ಪ್ರಾಣಹರಣ ಮಾಡಲು ಬ್ರಿಟಿಶ್‌ರ ಹಿಂದೀ ಗುಪ್ತಚಾರರು ಮೂರುಸಲ ನಿರರ್ಥಕ ಪ್ರಯತ್ನ ಮಾಡಿದರೆಂಬ ಸುದ್ದಿ ಇದೀಗ ಬೆಳಕಿಗೆ ಬಂದಿದೆ.

ಬ್ರಿಟಿಶ್ ಗುಪ್ತದಲದವರು ಜಹೀರನೆಂಬ ಹಿಂದೀಯನನ್ನು ಕೊಡೆ ವಿಮಾನದಿಂದ ಬ್ರಹ್ಮದೇಶದಲ್ಲಿಳಿಸಿದರು. ಅವನು ಯುಕ್ತಿ ಪ್ರಯುಕ್ತಿಗಳಿಂದ ಸುಭಾಷಸೇನೆಯನ್ನು ಸೇರಿ ಬ್ರಿಟಿಶ್‌ರಿಗೆ ಆ ಸೇನೆಯ ಚಟುವಟಿಕೆಗಳನ್ನು ತಿಳಿಸುತ್ತಿದ್ದರ ಇದು ಗೊತ್ತಾದ್ದರಿಂದ ಅವನನ್ನು ಸುಭಾಷರ ಮುಂದೆ ನಿಲ್ಲಿಸಲಾಯಿತು. ಆಗ ಸುಭಾಷರು "ಇದು ಸ್ವಯಂಸೇವಕ ದಳವಾಗಿದೆ. ಇದರಲ್ಲಿ ಸೇರಲು ನಿನಗೇನೂ ಒತ್ತಾಯ ಪಡಿಸಿದ್ದಿಲ್ಲ. ನಮ್ಮ ವಿಶ್ವಾಸಘಾತಮಾಡಿ ನೀನೂ ನಗೆಗೇಡಾಗಿರುವಿ. ಎಂದು ಗದರಿಸಿದರು. ಇವನಿಗೆ ಮರಣ ದಂಡನೆ ವಿಧಿಸಬೇಕೆಂದು ಎಲ್ಲರೂ ಒತ್ತಾಯ ಪಡಿಸಿದರು. ಆದರೆ ಸುಭಾಷರು "ಅಖಿಲ ಹಿಂದ ಸೇನೆಯಲ್ಲಿ ದ್ರೋಹಿಗಳಿಗೆ ಇಂಬಿಲ್ಲ ನೀನು ಬ್ರಹ್ಮದೇಶದಿಂದ ಹೊರಟು ಹೋಗಿ ಹಳೆಯ ಪ್ರಭುಗಳನ್ನು ಸೇರಿಕೊಳ್ಳು ಎಂದು ಹೇಳಿ ಕಳಿಸಿದರು. ಈಗ ಈ ಜಹೀರನನ್ನು ಬ್ರಿಟಿಶ್ ಸರಕಾರದವರು ಅವನ ಉತ್ತಮ ಕಾರ್ಯಕ್ಕಾಗಿ ಕರ್ನಲ್ ಹುದ್ದೆಗೇರಿಸಿರುವರು.

ನೇತಾಜಿಯವರು ಜಹೀರನನ್ನು ಕ್ಷಮಿಸಿದ ನಂತರ ಅವನನ್ನು ಕೆಲಕಾಲ ಸ್ಥಾನಬದ್ಧತೆಯಲ್ಲಿ ಇಡಲಾಗಿತ್ತು. ಆಗ ಜಹೀರನು ತನ್ನ ಕೆಲ ಗೆಳೆಯರ ಸಹಾಯದಿಂದ ಶಸ್ತ್ರಾಸ್ತ್ರಗಳನ್ನು ಮೋಟರಗಳನ್ನು ಸಂಗ್ರಹಿಸಿ ಸುಭಾಷರನ್ನು ಜೀವಂತ ಹಿಡಿದು ಬ್ರಿಟಿಶ್‌ರಿಗೊಪ್ಪಿಸಬೇಕೆಂದು ಒಳಸಂಚು ನಡಿಸಿದ್ದನು. ಇದು ಸುಭಾಷ ಸೇನೆಯವರಿಗೆ ಗೊತ್ತಾದ ಕೂಡಲೆ ಅವನನ್ನು ಮತ್ತೆ ನೇತಾಜಿಯ ಮುಂದೆ ನಿಲ್ಲಿಸಿದರು. ಆಗ ಸುಭಾಷರು ಅವನ ಮುಂದೆ ಪಿಸ್ತೂಲು ಒಗೆದು "ಇಂಥ ಹೇಡಿತನವೇಕೆ? ಈ ಪಿಸ್ತೂಲಿನಿಂದ ಗುಂಡುಹಾಕಿ ಕೊಂದುಬಿಡು" ಎಂದರು. ಆದರೆ ಅವನಿಗೆ ಧೈರ್ಯವಾಗಲಿಲ್ಲ. ಈ ಕೃತಿಗಾಗಿಯು ಜಹೀರನಿಗೆ ಅವನ ಸಂಗಡಿಗರಿಗೆ ಸರಕಾರ ಬಹುಮಾನ ಕೊಟ್ಟಿದೆ.

ಮತ್ತೊಂದು ಕತೆ ಇಂತಿದೆ. ಕ್ಯಾ. ಲಕ್ಷ್ಮಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯೊಂದರಲ್ಲಿ ನೇತಾಜಿಯವರು ಮಾತಾಡುತಿದ್ದಾಗ ಮುಂದಿನ ಸಾಲಿನಲ್ಲಿದ್ದ ಒಬ್ಬ ಬ್ರಹ್ಮೀ ಮಹಿಳೆ ಸಂಶಯಾಸ್ಪದ ರೀತಿಯಲ್ಲಿ ಚಲನವಲನ ನಡೆಸಿದ್ದು ಕಂಡು ಬಂದಿತು. ಕೂಡಲೆ ಸುಭಾಸರ ಆದೇಶದಂತೆ ಕ್ಯಾ. ಲಕ್ಷ್ಮಿಯವರು ಆ ಮಹಿಳೆಯ ಝಡತಿ ಮಾಡಲಾಗಿ ಅವಳ ಶಿರಸ್ತ್ರಾಣದಲ್ಲಿ ಒಂದು ಪಿಸ್ತೂಲ ಕಂಡು ಬಂತು. ಗದರಿಸಿ ಅವಳನ್ನು ಕೇಳಲಾಗಿ ಸುಭಾಷರ ಪ್ರಾಣಹರಣಕ್ಕಾಗಿ ತನ್ನನ್ನು ಬ್ರಿಟಿಶ್‌ರು ಕಳಿಸಿದ್ದನ್ನು ಒಪ್ಪಿಕೊಂಡಳು. ಹೀಗೆ ಮೂರುಸಲ ಸುಭಾಷರ ಜೀವಹರಣ ಮಾಡುವ ಪ್ರಯತ್ನ ನಡೆದರೂ ಅವರು ಆತ್ಮರಕ್ಷಣೆಗಾಗಿ ರಕ್ಷಕ ದಳ ಮುಂತಾದ್ದನ್ನು ಇಡಲು ಆಸ್ಥೆ ತೋರಿಸಲಿಲ್ಲ.

ನಾವಿಕರು ಸಂಪು ಹೂಡಿದ್ದೇಕೆ ?

ಗಾಡ್‌ಫ್ರೆಯವರ ಸಾಕ್ಷ್ಯ

ನಾವಿಕರ ಬಂಡಿನ ಕಾಲಕ್ಕೆ ಹಿಂದೀ ನೌಕಾಪಡೆಯ ಅಧಿಕಾರಿಗಳಾಗಿದ್ದ ವಾಯಿಸ್ ಅಡ್ಮಿರಲ್ ಜೆ. ಎಚ್. ಗಾಡ್‌ಫ್ರೆಯವರು ಸಾಕ್ಷಿ ನುಡಿಯುತ್ತ ಹೀಗೆ ಅಭಿಪ್ರಾಯಪಟ್ಟರು. ಒಂದೇ ತರದ ಕೆಲಸಕ್ಕೆ ಬ್ರಿಟಿಶ್ ಬ್ರಹ್ಮೀ ಸಿಂಹಳ ನೌಕಾಪಡೆಗಳಲ್ಲಿ ಹೆಚ್ಚು ಸಂಬಳ ಕೊಡುತ್ತಿದ್ದು ಹಿಂದೀ ನೌಕಾಪಡೆಯಲ್ಲಿ ಕಡಮೆ ಸಂಬಳವಿರುತ್ತದೆ. ಇನ್ನಿತರ ಸೌಕರ್ಯಗಳೂ ಕೆಲ ಬಂದರಗಳಲ್ಲಿ ಮಾತ್ರ ಸಮ ಇರುತ್ತವೆ. ಬ್ರಿಟಿಶ್ ನಾವಿಕರಿಗಾಗಿ ಅಲ್ಲಲ್ಲಿ ಕ್ಯಾಂಟಿನ್‌ಗಳನ್ನು ತೆರೆದಿದ್ದರಿಂದ. ಅವರ ಪರಿಸ್ಥಿತಿ ಚೆನ್ನಾಗಿತ್ತೆಂದು ಹೇಳಬಹುದು. ಬ್ರಹ್ಮೀ ಮತ್ತು ಸಿಂಹಳ ನೌಕಾಪಡೆಗಳು ಹಿಂದೀ ಪಡೆಗಳಷ್ಟು ಕಾರ್ಯಕ್ಷಮವಿ... ವಿಶೇಷತ: ಸಿಂಹಳೀ ಪಡೆ— ಹಿಂದೀ ನಾವಿಕರ ... ನ ಬಾಹ್ಯ ಜನರೊ... ರಿಂದ ಸಂಬಳ ಮತ್ತು ಭತ್ತೆ

ಮೊದಲಾದ್ದು ತಮಗೆ ಕಡಮೆ ಸಿಕ್ಕುವದೆಂದು ಅವರಿಗೆ ಗೊತ್ತಾಯಿತು. ಆಫ್ರಿಕೆಯಲ್ಲಿಯ ವರ್ಣದ್ವೇಷದ ಪ್ರಖರತೆಯೂ ಗೊತ್ತಾಯಿತು.

ನಾವಿಕರ ವಿಸರ್ಜನೆಯನ್ನು ಸಾರಿದ್ದು ಹಿಂದೀ ನಾವಿಕರಲ್ಲಿ ಅತೃಪ್ತಿ ಹೆಚ್ಚಿತು. "ನೌಕಾಪಡೆಯಲ್ಲಿ ಸೇರಿ, ಯುದ್ಧೋತ್ತರ ಕಾಲದಲ್ಲಿ ನಿಮಗಾಗಿ ನೌಕರಿ ದೊರಕಿಸಿಕೊಳ್ಳಿರಿ" ಎಂದು ಸರಕಾರದವರು ಪ್ರಚಾರ ಮಾಡಿದ್ದರು. ಹೀಗಿದ್ದರೂ ನಾವಿಕ ದಳ ವಿಸರ್ಜಿಸಿದ್ದು ಅಸಮಾಧಾನಕ್ಕೆ ಕಾರಣ. ನಾವಿಕರ ಅಡಚಣಿಗಳು ನಿಜವಿದ್ದರೂ ಬಂಡು ಹೂಡುವಷ್ಟು ಭೀಕರವಿದ್ದಿಲ್ಲ. ಶಿವಾಜಿ ಶಿಬಿರದ ತಕರಾರುಗಳು ರಾಜಕೀಯವಿದ್ದವು ಸೈನ್ಯದಲ್ಲಿಯ ಶಿಸ್ತು ಕಡಮೆಯಾಗುವದಕ್ಕೆ ಮಹಾತ್ಮಾ ಗಾಂಧಿಯವರ ಅಹಿಂಸೆ ಕಾರಣವೆಂದ ನಿಮ್ಮ ಅಭಿಪ್ರಾಯವೇ, ಎಂದು ಕೇಳಿದ್ದಕ್ಕೆ ಅನೇಕ ರಾಷ್ಟ್ರಗಳು ವಿಶೇಷತಃ ಫ್ರಾನ್ಸ ದೇಶವು ಈ ಶಸ್ತ್ರವನ್ನು ಫಲಪ್ರದವಾಗಿ ಉಪಯೋಗಿಸಿರುತ್ತದೆ. ನಾನೇ ಜನತೆಯ ಧುರೀಣನಾಗಿದ್ದರೆ ಇದೇ ಶಸ್ತ್ರವನ್ನು ಪ್ರಯೋಗಿಸಲು ಹೇಳುತ್ತಿದ್ದೆನೆಂದೂ ಅವರು ಹೇಳಿದರು.

ಹಿಂದುಸ್ತಾನದಲ್ಲಿಯೆ ನೇಮಿಸಿಕೊಳ್ಳಲ್ಪಟ್ಟ ಯುರೋಪಿಯನ್ ನಾವಿಕರು ಹಿಂದೀಯರನ್ನು ಹೀನವಾಗಿ ಕಾಣುತ್ತಿದ್ದರೇ ಎಂದು ಪ್ರಶ್ನಿಸಿದ್ದಕ್ಕೆ ಗಾಡ್‌ಫ್ರೆಯವರು 'ಇಲ್ಲ' ಎಂದು ಉತ್ತರಕೊಟ್ಟರು

ಬೆಂಗಳೂರು---ಮೈಸೂರಲ್ಲಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಅಮೇರಿಕೆಯ ಬರಗಾಲ ಸಮಿತಿಯ ಅಧ್ಯಕ್ಷರಾದ ಹರ್ಬರ್ಟ ಹೂವರರಿಗೆ ಒಂದು ತಂತಿ ಕಳಿಸಿ ಮೈಸೂರಿನ ಆಹಾರ ಪರಿಸ್ಥಿತಿ ಕಠಿನವಾಗಿರುವದೆಂದೂ ಆದುದರಿಂದ ಮೈಸೂರಿಗೆ ಒಡನೆ ಭೆಟ್ಟಿ ಕೊಡಬೇಕೆಂದೂ ಕೇಳಿಕೊಂಡಿದ್ದಾರೆ. ಹೂವರರು ಸದ್ಯ ಮುಂಬೈಯಲ್ಲಿರುವರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರಿಗೆ ಸಾಗರದಲ್ಲಿ ಮಾಡಿದ ಆಕ್ಷೇಪಾರ್ಹ ಭಾಷಣಗೋಸ್ಕರ ಶಿವಮೊಗ್ಗೆಯ ಸೆಶೆನ್ಸ ಜಜ್ಜರು ವಿಧಿಸಿದ ಆರು ತಿಂಗಳ ಶಿಕ್ಷೆಯ ವಿರುದ್ಧ ಹಾಯಕೋರ್ಟಿಗೆ ಮಾಡಿಕೊಂಡ ಅಪೀಲಿನ ವಿಚಾರಣೆ ನಡೆದು ಅವರ ಶಿಕ್ಷೆಯನ್ನು ೩ ತಿಂಗಳಿಗಿಳಿಸಲಾಯಿತು. ಆದರೆ ಅವರು ಈಗಾಗಲೆ ಸೆರಮನೆಯಲ್ಲಿ ೫॥ ತಿಂಗಳು ಕಳೆದಿರುವದರಿಂದ ಅವರ ಬಿಡುಗಡೆಗೆ ಅಜ್ಞೆಯಾಗಿದೆ.

ಸರಿಯಾಗಿ ಕೆಲಸಕ್ಕೆ ಬರುವದಿಲ್ಲೆಂದು ಕಾಲಿಗೆ ಸಂಕೋಲೆ ಹಾಕಿ ಬಿಗಿಯಲ್ಪಟ್ಟಿದ್ದ ೧೮ ವರ್ಷ ವಯಸ್ಸಿನ ಹುಡುಗನೊಬ್ಬನ ಬಟ್ಟೆಗಳಿಗೆ ಬೆಂಕಿ ಹತ್ತಿ ಅದರಿಂದೊದಗಿದ ನೋವಿನಿಂದ ಅವನು ಆಸ್ಪತ್ರೆಯಲ್ಲಿ ಮೃತನಾದನೆಂದು ಸುದ್ದಿ ಬಂದಿದೆ ಹುಡುಗನು ಬೆಂಗಳೂರಿನ ಕಿಲಾರಿರೋಡಿನ ನಿವಾಸಿಯಿದ್ದನು. ಪೋಲೀಸಿನವರು ವಿಚಾರಣೆ ನಡೆಸುತಿದ್ದಾರೆ.

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಸರ್ ಪುಟ್ಟಣ್ಣ ಚೆಟ್ಟಿ ನಗರಭವನದಲ್ಲಿ ಕನ್ನಡನಾಡಿನ ಜನತಾ ಕಲಾ ಮಹೋತ್ಸವ ಸಾಂಗವಾಯಿತು. ಕಂದಾಯ ಮಂತ್ರಿ ಪುಲ್ಲಾರೆಡ್ಡಿಯವರು ಅಧ್ಯಕ್ಷರಾಗಿದ್ದರು ಕಳೆದ ವರ್ಷ ಸಮಿತಿ ವಯಸ್ಕರಲ್ಲಿ ಸಾಕ್ಷರತೆಯನ್ನು ಹಬ್ಬಿಸಲು ೪೦೦೦ ತರಗತಿಗಳನ್ನು ತೆರೆದು ಕೆಲಸ ಸಾಗಿಸಿತೆಂದು ಸಮಿತಿಯ ಅಧ್ಯಕ್ಷ ಶ್ರೀ ಎನ್ ಬಾಲಕೃಷ್ಣಯ್ಯನವರು ತಿಳಿಸಿದರು. ಕಳೆದ ವರ್ಷ ಅದರ ವೆಚ್ಚಕ್ಕೆ ಸರಕಾರ ೩॥ ಲಕ್ಷ ರೂಪಾಯಿ ಮಂಜೂರು ಮಾಡಿದ್ದು ಈ ವರ್ಷ ೭ ಲಕ್ಷ ಕೊಡಿಸಬೇಕೆಂದು ಕೋರಿದರು. ಶ್ರೀ ಪುಲ್ಲಾರೆಡ್ಡಿಯವರು ಸಮಿತಿಯ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು.

ಹಿಂದೀ ಕಮ್ಯುನಿಸ್ಟ ಪಕ್ಷದ ಪತ್ರಿಕೆಯಾದ "ಪೀಪಲ್ಸ್ ವಿಜ್" ಪ್ರತಿಗಳನ್ನು ಮಾರುತ್ತಿದ್ದನೆಂದೂ ಅದರಿಂದ ಅವನು ರಾಜಕೀಯ ಪಕ್ಷದ ಚಟುವಟಿಕೆಯಲ್ಲಿ ಭಾಗವಹಿಸಿದಂತಾಯಿತೆಂದೂ ಆಪಾದಿಸಿ ಮುಂಬಯಿಯ ವೊರ್ಲಿ ಶಿಬಿರದಲ್ಲಿದ್ದ ಒಬ್ಬ ಬ್ರಿಟಿಶ ಸೈನಿಕನನ್ನು ವಿಚಾರಣೆಗೆಗುರಿಪಡಿಸಲಾಗಿತ್ತು. ಈ ಸಂಬಂಧವಾಗಿ ಬೆಂಗಳೂರಿನ ಜಿಲ್ಲಾ ಮಾರ್ಶಲ್‌ನವರು ವಿಚಾರಣೆ ನಡೆಸಿದ್ದರು. ಆರೋಪಿಯನ್ನು ನಿರ್ದೋಷಿಯೆಂದು ಬಿಡುಗಡೆ ಮಾಡಲಾಯಿತು.

ತಾ. ೨೦ ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರಿನ ನಗರ ಪ್ರದೇಶದ ಸಮಿತಿಯುವರ ಆಶ್ರಯದಲ್ಲಿ ವಸಂತ ಸಾಹಿತ್ಯೋತ್ಸವ ಪ್ರಾರಂಭವಾಯಿತು. ಉತ್ಸವವನ್ನು ಪ್ರಾರಂಭಿಸುತ್ತ ಮೈಸೂರಿನ ಹಿಂದಿನ ನ್ಯಾಯಮಂತ್ರಿಗಳೂ ಭರತಪುರ ಸಂಸ್ಥಾನದ ನಿವೃತ್ತ ದಿವಾಣರೂ ಆದ ರಾಜಮಂತ್ರ ಪ್ರವೀಣ ಶ್ರೀ ಎ. ವಿ. ರಾಮನಾಥನ್‌ರು ಸಾಹಿತ್ಯ ಪರಿಷತ್ತಿನ ಸದಸ್ಯ ಸಂಖ್ಯೆ ಮುಂದಿನ ವರ್ಷವಾದರೂ ಒಂದು ಲಕ್ಷಕ್ಕೇರಬೇಕೆಂದೂ ಹರಿಹಂಚಾಗಿರುವ ಕನ್ನಡನಾಡು ಒಂದೇ ಆಗಬೇಕೆಂದೂ ಹಾರೈಸಿದರು.

ಭದ್ರಾವತಿಯ ಕೂಲಿಕಾರರ ಪರವಾಗಿ ಶ್ರೀ ಅಬ್ದುಲ್ ಖುದ್ದೂಸ್ ಅನ್ಸರ ಮೊದಲಾದವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕೂಲಿಕಾರ ಪ್ರತಿನಿಧಿಗಳೊಡನೆ ಕೂಲಿಕಾರ ಮತ್ತು ಆಹಾರ ಮಂತ್ರಿಗಳನ್ನು ಕಂಡು ಭದ್ರಾವತಿ ಆಹಾರ ಪರಿಸ್ಥಿತಿ ಮತ್ತು ಕೂಲಿಕಾರ ಸಂಕಷ್ಟಗಳನ್ನು ಅರುಹಿದರು. ಮಂತ್ರಿಗಳು ಎಲ್ಲವನ್ನೂ ಕೇಳಿಕೊಂಡು ಸಹಾನುಭೂತಿ ಪರವಾಗಿ ವಿಚಾರಿಸುವ ಭರವಸೆಯಿತ್ತರು.

ಇದೇ ವರ್ಷ ಅಗಸ್ಟ ತಿಂಗಳ ಸುಮಾರಿಗೆ ಮೈಸೂರು ಸಂಸ್ಥಾನದ ಆಹಾರ ಪರಸ್ಥಿತಿ ಸುಧಾರಿಸುವದು ಮತ್ತು ಇನ್ನು ಮುಂದೆ ಆಹಾರ ಸೀದಾವನ್ನು ಕಡಮೆಮಾಡಲಾಗುವದಿಲ್ಲೆಂಬ ಭರವಸೆಯನ್ನು ಆಹಾರ ನಿರ್ದೇಶಕರಾದ ಶ್ರೀ ಜಿ. ಸುಂದರರಾಯರು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಕೊಟ್ಟರು. ಸಂಸ್ಥಾನದಲ್ಲಿರುವ ಆಹಾರ ಧಾನ್ಯ ಸಂಗ್ರಹದ ವಿವರಗಳನ್ನೂ ಅವರು ಕೊಟ್ಟರು.

ಯುದ್ಧೋತ್ತರ ಮಲೆನಾಡು ಅಭಿವೃದ್ಧಿಯ ಬಗ್ಗೆ ಕೈಕೊಳ್ಳಬೇಕಾದ ಕ್ರಮಗಳನ್ನು ಚಿಂತಿಸಿ ವರದಿಮಾಡಲು ಮೈಸೂರು ಸರಕಾರದವರು ನಿವೃತ್ತ ನ್ಯಾಯಮಂತ್ರಿ ಶ್ರೀ ಎ. ವಿ. ರಾಮನಾಥನ್ನರ ಅಧ್ಯಕ್ಷತೆಯಲ್ಲಿ ಅಧಿಕಾರಿ ಮತ್ತು ಅಧಿಕಾರೀತರರ ಸಮಿತಿಯೊಂದನ್ನು ನೇಮಿಸಿದ್ದಾರೆಂದು ತಿಳಿಯುತ್ತದೆ.

ತಾ. ೧೬ ಕ್ಕೆ ಜರಗಿದ ಮೈಸೂರು ವಿಶ್ವವಿದ್ಯಾಲಯ ಸಿನೇಟ ಸಭೆಯಲ್ಲಿ ವಿಶ್ವವಿದ್ಯಾಲಯದ ೧೯೪೬—೪೭ ರ ಆಯುವ್ಯಯ ಪತ್ರಿಕೆ ಮಂಡಿಸಲ್ಪಟ್ಟಿತು. ೩೪,೫೬,೯೭೯ ರೂಪಾಯಿ ಆಯುವ್ಯಯದ ಅಂದಾಜು ಮಾಡಲ್ಪಟ್ಟಿದೆ.

ಆಹಾರದ ಕೊರತೆ, ಹಾಟೇಲುಗಳಲ್ಲಿ ತಿಂಡಿತೀರ್ಥದ ಅಭಾವ ಮತ್ತು ಸರಕಾರದ ನಿರುತ್ಸಾಹಕವಾದ ಮುನ್ನೆಚ್ಚರಿಕೆಗಳನ್ನೂ ಲೆಕ್ಕಿಸದೆ ಎಂದಿನಂತೆ ಬೆಂಗಳೂರಿನಲ್ಲಿ ಧರ್ಮರಾಜನ ಕರಗ ಮಹೋತ್ಸವ ನಡೆದು ಹೋಯಿತು. ಹಾಟೆಲ ತಿಂಡಿಗಳ ಬದಲು ಕಡಲೆ, ಪುರಿ, ಕಾರಾ ಸೇವು ಮೊದಲಾದವುಗಳಿಂದಲೂ ನಗರಸಭೆಯ ನೀರಿನ ಪೂರೈಕೆಯಿಂದಲೂ ಕಾರ್ಯಸಾಧಿಸಿಕೊಂಡು ಭಕ್ತರು ಅಸಂಖ್ಯರಾಗಿ ನೆರೆದು ಶಾಂತತೆಯಿಂದ ಉತ್ಸವವನ್ನು ನೆರವೇರಿಸಿದರು. ಪೋಲೀಸ ವ್ಯವಸ್ಥೆಯೂ ಸಮರ್ಪಕವಾಗಿತ್ತು.

ಬೆಂಗಳೂರು ನಗರ ಸಭೆಯ ಅಧ್ಯಕ್ಷರಾದ ಶ್ರೀ ಎಚ್.ಸಿ. ಸೂರ್ಯನಾರಾಯಣರಾಯರು ತಮ್ಮ ಪದವಿಗೆ ರಾಜೀನಾಮೆಯಿತ್ತಿದ್ದಾರೆ. ಹಿಂದಿನ ವಾರ ಸ್ವತಂತ್ರ ಸದಸ್ಯರು ಸೇರಿ ಅವರ ಮೇಲೆ ಅವಿಶ್ವಾಸ ಸೂಚಿಸುವ ಗೊತ್ತುವಳಿಯನ್ನು ತಂದು ವಾಸು ಮಾಡಿಕೊಂಡಿದ್ದರು. ಶ್ರೀ ರಾಯರು ಇನ್ನೊಮ್ಮೆ ಅಂಥ ಗೊತ್ತುವಳಿ ನಗರ ಸಭೆಯಲ್ಲಿ ಅಂಗೀಕೃತವಾಗುವ ವರೆಗೆ ರಾಜೀನಾಮೆ ಕೊಡಲು ಬದ್ಧರಾಗಿರದಿದ್ದರೂ ಬಹುಸಂಖ್ಯಾಕ ಸದಸ್ಯರ ಬೆಂಬಲವಿಲ್ಲದ ಮೇಲೆ ಅಧ್ಯಕ್ಷನಾಗಿರಲು ಆಶಿಸದೆ ರಾಜೀನಾಮೆಯಿತ್ತಿದ್ದಾರೆ.

ದಕ್ಷಿಣ ಕನ್ನಡ

ತಾ. ೧೯ಕ್ಕೆ ಜರಗಬೇಕಾಗಿದ್ದ ಮೂಲ್ಕಿ ಸರ್ಕಲ್ಲಿನ ಕಾಂಗ್ರೆಸ ಪ್ರತಿನಿಧಿ ಚುನಾವಣೆಯನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯುವರು ಅನಿಯಮಿತ ಅವಧಿಯ ವರೆಗೆ ಮುಂದೆ ಹಾಕಿರುವರು.

ಮಂಗಳೂರು ಜೆಪ್ಪುವಿನಲ್ಲಿರುವ ಪಿಯರ್ಸಲೆಸ್ಲಿ ಕಂಪನಿಯ ಸೇರು ಬೀಜ ಗೋಡಂಬಿ ಕಾರಖಾನೆಯ ೧೦೦೦ ಕೂಲಿಕಾರರು ತಾ. ೧೫ ರಿಂದ ಮುಷ್ಕರ ಹೂಡಿರುವರು. ಕಂಪನಿಯುವರು ೧೫ ದಿನ ಹಿಂದೆ ಸಂಬಳ ಕಡಿತವನ್ನು ಮಾಡಿದುದೇ ಮುಷ್ಕರದ ಕಾರಣ.

ತಾ. ೧೯ ಕ್ಕೆ ಆದ ಜಡಿಮಳೆ ಬಿರುಗಾಳಿಗಳ ಪರಿಣಾಮವಾಗಿ ಮಂಗಳೂರು ಹಂಪನಕಟ್ಟೆಯ ಬಸ್ ನಿಲ್ದಾಣ ಕುಸಿದುಬಿದ್ದು ಅನೇಕರಿಗೆ ನೋವಾಗಿದ್ದು ಮೂರು ನಾಲ್ಕು ಜನರನ್ನು ಆಸ್ಪತ್ರೆಗೆ ಒಯ್ಯಲಾಗಿದೆ. ಒಂದು ಮೋಟಾರ ಕಾರು ಪೂರ್ಣ ಜಜ್ಜಿ ಮುದ್ದೆಯಾಗಿ ಹೋಗಿದೆ. ದೈವಯೋಗದಿಂದ ಆ ಕಾರಿನೊಳಗಿದ್ದವರು ಸುರಕ್ಷಿತವಾಗಿ ಪಾರಾದರು.

ಕಾಸರಗೋಡಿನಲ್ಲಿ ತಾ. ೧೧ಕ್ಕೆ ಶ್ರೀ ಬಿ. ಎಸ್. ಕಕ್ಕಿಲ್ಲಾಯವರ ಅಧ್ಯಕ್ಷತೆಯಲ್ಲಿ ಧರ್ಮಾರ್ಥ ವಾಚನಾಲಯವನ್ನು ತೆರೆಯಲಾಯಿತು. ದಿ. ದೇಶಭಕ್ತ ಕಾರ್ನಾಡ ಸದಾಶಿವರಾಯರ ಹೆಸರನ್ನು ಹೊತ್ತ ಈ ವಾಚನಾಲಯ ಕಾಸರಗೋಡಿನ ಬಹುಕಾಲದ ಕೊರತೆಯೊಂದು ನೀಗಿದಂತಾಯಿತು.

ಮಂಗಳೂರಿನ ಅಧಿಕಾರಿಗಳು ಪರವಾನಗಿ ನಿರಾಕರಿಸಿದ 'ಟಿಪ್‌ಟಾಪ್ ಶೋ' ಎಂಬ ಜೂಜಾಟದ ಪ್ರದರ್ಶನಕ್ಕೆ ಆಟದ ಒಡೆಯರು ಮದ್ರಾಸಸರಕಾರದಿಂದ ಪರವಾನಗಿ ಸಂಪಾದಿಸಿದ್ದರಿಂದ ಜನತೆಯಲ್ಲಿ ತ್ವೇಷವುಂಟಾಗಿದೆ. ಕಾರ್ಕಳದಲ್ಲಿಯೂ ಇಂಥ ಆಟಗಳು ನಡೆಯಲು ಅಪ್ಪಣೆ ಕೊಡಲಾಗುವದೆಂದು ಹೇಳಲಾಗಿದೆ.



ಮುಂಬಯಿ ಶೇರಪೇಟೆ

೨೪—೪—೪೬

ಮುಂಬಯಿ ಶೇರ ಪೇಟೆಯಲ್ಲಿ ಕೆಲ ದಿನಗಳಿಂದ ಜವಳಿ ಗಿರಣಿಗಳೇ ಎಲ್ಲರ ಪ್ರೀತಿಗೂ ಪಾತ್ರವಾಗಿದ್ದುದರಿಂದ ಟಾಟಾ ಉಕ್ಕಿನ ಪಾಲುಗಳ ದುರ್ಲಕ್ಷಕ್ಕೆ ಗುರಿಯಾಗಿ ಇಳಿದುಹೋಗಿದ್ದವು ಆದರೆ ಈಗ ಪುನಃ ಅವುಗಳ ಕಡೆಗೆ ವ್ಯಾಪಾರಿಗಳ ಲಕ್ಷ್ಯ ವೇಧಿಸಿರುವದರಿಂದ ಕಳೆದ ಗುರುವಾರ ೨೮೪೧-೪-೦ ರಲ್ಲಿದ್ದ ಟಾಟಾ ಡೆಫರ್ಡ ಪಾಲುಗಳ ಇಂದು ೨೯೧೫-೦-೦ ಕ್ಕೆ ಮುಟ್ಟಿವೆ. ಡಾಯಿಂಗ ಪಾಲುಗಳಿಗೂ ಒಳ್ಳೆ ಬೆಂಬಲವಿದ್ದು ೨೩೫೫-೦-೦ ರಿಂದ ೨೪೧೦-೦-೦ ಕ್ಕೆ ಹೋದವು. ಜವಳಿ ಗಿರಣಿಗಳಲ್ಲಿ ಕೋಹಿನೂರು ೮೫೮-೦-೦ ರಿಂದ ೯೦೭-೦-೦ ಕ್ಕೇರಿದ್ದು ಅಸಾಧಾರಣ ಸಂಗತಿ ಸ್ವದೇಶಿ ೭೬೯-೦-೦ ರಿಂದ ೭೭೯-೦-೦ ಕ್ಕೇರಿದರೂ ಇಂದು ೭೭೧—೦—೦ ಕ್ಕಿಳಿದು ಬಿಟ್ಟಿತು. ಸಂಚೂರಿ ೧೦೨೦-೦-೦ ರಲ್ಲಿ ಯಥಾಸ್ಥಿತಿ. ಸೆಂಟ್ರಲ್ ಇಂಡಿಯಾ ೪೬೫-೦-೦ ರಿಂದ ೪೮೨-೦-೦ ರ ವರೆಗೇರಿ ೪೮೧-೦-೦ ರಲ್ಲಿ ನಿಂತಿದೆ. ಬೇಲಾಪುರ ೨೮೯-೦-೦ ರಿಂದ ೨೮೬-೦-೦ ಕ್ಕಿಳಿದು ೨೯೪-೦-೦ ಕ್ಕೆ ಸುಧಾರಿಸಿದರೆ ಅಸೋಸಿಯೇಟೆಡ್ ಸಿಮೆಂಟ್ಸ ೨೫೦-೮-೦ ರಿಂದ ೨೫೪-೦-೦ ಕ್ಕೆ ಏರಿದೆ. ೧೨೨-೧೨-೦ ರಲ್ಲಿದ್ದ ರಿಜರ್ವ ಬ್ಯಾಂಕು ೧೨೫-೮-೦ಗೂ ಇಂಪೀರಿಯಲ್ ಎಫ್ ಸಿ ೨೫೧೫-೦-೦ ರಿಂದ ೨೬೧೫-೦-೦ ಕ್ಕೂ ರಿಝರ್ವ ಬ್ಯಾಂಕು ೧೫೯-೮-೦ ರಿಂದ ೧೬೩-೦-೦ ಕ್ಕೂ ಏರಿವೆ.

ಸರಕಾರಿ ಸಾಲಪತ್ರಗಳಲ್ಲಿ ಜಿ. ಪಿ. ನೋಟುಗಳು ೧೦೨-೧೩-೦ ರಲ್ಲಿಯೂ ೩॥ (೧೯೪೭-೫೦) ಸಾಲಪತ್ರ ೧೦೩-೭-೮ ರಲ್ಲಿಯೂ ಇದ್ದಂತೆಯೆ ಇವೆ.

ಚಿನ್ನ ಬೆಳ್ಳಿ

ದಕ್ಷಿಣ ಆಫ್ರಿಕೆಯಲ್ಲಿ ಹೊಸ ಚಿನ್ನದ ಅದುರುಗಳು ಸಿಕ್ಕಿವೆಯೆಂಬ ಸುದ್ದಿ ವ್ಯಾಪಾರಿಗಳನ್ನು ತುಸು ಹೆದರಿಸಿದರೂ ಪೇಟೆಯ ಮೇಲೆ ಅದರ ಪರಿಣಾಮ ಆಗಲಿಲ್ಲ. ಬದಲಿಗೆ ಇಂದು ತಯಾರಿ ಚಿನ್ನ ರೂ. ೯೯-೦-೦ ಕ್ಕೆ ಹೋಗಿಬಿಟ್ಟಿದೆ. ವಾಯದಾ ೯೪-೦-೦ ಸಾವರಿನ್ ರೂ. ೬೫-೮-೦ ಬೆಳ್ಳಿಯು ಇದಕ್ಕನುಗುಣವಾಗಿ ಏರಿ, ತಯಾರಿ ೧೬೫-೦-೦ ಕ್ಕೂ ವಾಯದಾ ೧೬೨-೮-೦ ಕ್ಕೂ ಮುಟ್ಟಿವೆ.

ಅರಳೆ ಪೇಟೆ

೨॥ ಲಕ್ಷ ಬೇಲ ಅರಳೆಯನ್ನು ಕೈಲಿಟ್ಟುಕೊಂಡ ಸಿಂಡಿಕೇಟೊಂದು ತೇಜಿ ವ್ಯಾಪಾರಸ್ಥರ ಬಲದಿಂದ ಮೇ ವಾಯಿದೆಯ ಅರಳೆಯ ಬೆಲೆಯನ್ನು ಮೇಲಕ್ಕೆ ಏರಿಸುವ ಪ್ರಯತ್ನ ನಡೆಸಿರುವದರಿಂದ ೪೬೨-೪-೦ ರಲ್ಲಿದ್ದ ಮೇ ವಾಯಿದೆ ೪೬೮—೧೨—೦ ಕ್ಕೇರಿದೆ. ಜುಲೈ ೪೭೩-೪-೦ ಸೆಪ್ಟೆಂಬರ ೪೭೮-೦-೦ ಆರಳೆ ಧಾರಣೆ ಮೇಲೊತ್ತುವ ಪ್ರಯತ್ನವನ್ನು ಇದೇ ಪ್ರಕಾರ ಕಳೆದ ವರ್ಷವೂ ಮಾಡಲಾಗಿದ್ದು ಅದು ನಿರರ್ಥಕವಾಗಿ ಬೆಲೆಗಳು ಬಿದ್ದದ್ದನ್ನು ನೆನವರಿಕೆ ಮಾಡಿಕೊಳ್ಳಬಹುದು. ಅದುದರಿಂದ ತುಸು ಜೋಕೆಯ ಅವಶ್ಯಕತೆಯಿದೆ.

ಎಣ್ಣೆಕಾಳು

ಶೇಂಗಾ	ರೂ. ೧೧೦—೮—೦
ಅಗಸಿ	,, ೨೪-೧೨—೦
ಅಗಸಿಎಣ್ಣೆ	೧೩-೧೦-೦

ಶಿವಮೊಗ್ಗೆ

ದೇಶಾವರ ಅಡಿಕೆ ನಂ. ೧ (ಮಣ) ರೂ.	೨೩—
,, ,, ೨	೨೦-೨೩
ಕೊಪ್ಪ ಶೃಂಗೇರಿ	೧೮-೨೩
ರಾಜಾ ಆಲವ್ರ	೨೩-೨೫
ಬೆಟ್ಟೆ ವಂತಿ	೧೩-೧೪
ಬೆಟ್ಟೆ	೧೨-೧೩॥

ಪೇಟೆ ಒಂದೇ ಸಮ ಇದೆ. ಗಿರಾಕಿಗಳಿದ್ದಾರೆ.

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿ ಮಣ ರೂ.		೧೪—೧೬
ಅರಿಸಿಣ ಹೇರು	,,	೭೬—೮೩
ಮೆಣಸಿನಕಾಯಿ ಹೇರು	,,	೧೬೦—೧೮೫
ಶೇಂಗಾ (ಖಂಡಿ)	,,	೯೦-೯೧
ದೇಶಿ ತಂಬಾಕು (ಹೇರು)		೧೩೦—೨೨೫
ಪಂಢರಪುರ ತಂಬಾಕು		೨೦೦—೩೦೦

ಹುಬ್ಬಳ್ಳಿ ಪೇಟೆ

ಹತ್ತಿ	೩೧೬—೩೨೩

ಹತ್ತಿ ಅಂಡಿಗೆಗಳ ಮಾರಾಟ ಯಥಾಸ್ಥಿತಸಾಗಿದೆ.

ವಿದ್ಯಾರ್ಥಿನಿ ಮತ್ತು ರಾಜಕಾರಣ

ಕು. ಶಶಿ ಧಡಪಳೆ

ಪಾರತಂತ್ರ್ಯದ ಗಾಢವಾದ ಅಂಧಃಕಾರದಲ್ಲಿ ಮುಳುಗಿದ ಹಿಂದುಸ್ತಾನದಲ್ಲಿ ವಿದ್ಯಾರ್ಥಿನಿಯರು ರಾಜಕಾರಣದಲ್ಲಿ ಭಾಗ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಬಾರದೋ ಎಂಬ ಪ್ರಶ್ನೆಗಳು ಹೊರಡುವದೇ ಇಲ್ಲ. ಇಂಥ ಅನಾವಶ್ಯಕ ಪ್ರಶ್ನೆಗಳಲ್ಲಿ ಕಾಲ ಕಳೆಯುವದಕ್ಕಿಂತ ಉಳಿದ ಬೇರೆ ಮಹತ್ವದ ಕಾರ್ಯಗಳಲ್ಲಿ ಆ ವೇಳೆಯು ಸದುಪಯೋಗ ಮಾಡಬಹುದು. ಹಿಂದುಸ್ತಾನದ ಉಜ್ವಲವಾದ ಇತಿಹಾಸವನ್ನು ಓದಿದರೆ ಪುರುಷರ ಜೊತೆಗೆ ಸ್ತ್ರೀಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ್ದು ಕಂಡು ಬರುತ್ತದೆ. ಅಂದ ಮೇಲೆ ಇಂಥ ಉಜ್ವಲವಾದ ಇತಿಹಾಸವುಳ್ಳ ರಾಷ್ಟ್ರದ ಇಂದಿನ ಸ್ತ್ರೀ ಪುರುಷರು ರಾಷ್ಟ್ರದ ಭವಿಷ್ಯವನ್ನು ಉಜ್ವಲಗೊಳಿಸುವದರಲ್ಲಿ ಹೇಗೆ ಹಿಂದೆ ಉಳಿಯಬಲ್ಲರು ?

ಈ ಭಾರತ ರಾಷ್ಟ್ರದ ಮುಂದಿನ ಆಧಾರಸ್ತಂಭವಾದ ಈಗಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಇರುತ್ತದೆ. ಇಂದಿನ ವಿದ್ಯಾರ್ಥಿಗಳೇ ರಾಷ್ಟ್ರದ ಮುಂದಿನ ಮಾರ್ಗದರ್ಶಕರು. ಅವರ ತೀಕ್ಷ್ಣವಾದ ಬುದ್ಧಿಸಾಮರ್ಥ್ಯದಿಂದಲೇ ಹಿಂದುಸ್ತಾನದ ಮುಂದಿನ ರಾಜಕಾರಣವು ರಚಿಸಲ್ಪಡುವದು. ಅವರ ಬಲ, ಧೈರ್ಯ, ತ್ಯಾಗ ಇವುಗಳ ಮೇಲೆ ಸ್ವಾತಂತ್ರ್ಯ ಮಂದಿರವನ್ನು ಕಟ್ಟುವದದೆ. ಹಿಂದುಸ್ತಾನದ ವಿದ್ಯಾರ್ಥಿಗಳಾದ ನಾವು ನಮ್ಮ ಮೇಲೆ ಹೊರಿಸಿದ ಭಾರವನ್ನು ಆನಂದದಿಂದ ಸ್ವೀಕರಿಸಲಿಕ್ಕೆ ಸಿದ್ಧರಿದ್ದೇವೆ. ಮತ್ತು ಈ ಮಹತ್ತರ ಕಾರ್ಯವನ್ನು ಕೊನೆಗಾಣಿಸಲಿಕ್ಕೆ ಜೀವದ ಬಲಿದಾನವನ್ನು ಮಾಡಲಿಕ್ಕೆ ಸಹ ಹಿಂದು ಮುಂದು ನೋಡುವದಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ಭಾರವನ್ನು ವಹಿಸುವದರಲ್ಲಿ ಪ್ರತಿಯೊಬ್ಬ ಸ್ತ್ರೀ ಪುರುಷರು ವೈಯ್ಯಕ್ತಿಕ ಪ್ರಯತ್ನ ಮಾಡದೆ ಸುಸಂಘಟಿತ ಮತ್ತು ಶಿಸ್ತಿನಿಂದ ವಹಿಸಿದರೆ ಅದರ ಪರಿಣಾಮವು ಹೆಚ್ಚು ಬಲವತ್ತರವಾಗುತ್ತದೆ. ಈ ಉದ್ದೇಶದಿಂದಲೇ ಅ. ಭಾ. ವಿ. ಕಾ. ಎನ್ನುವ ಸಂಸ್ಥೆಯು ನಿರ್ಮಾಣವಾಗಿರುತ್ತದೆ. ಹಿಂದುಸ್ತಾನದ ಎಲ್ಲ ಪ್ರಾಂತಗಳಲ್ಲಿ ಪ್ರತಿಯೊಂದು ಜಿಲ್ಲೆ ಜಿಲ್ಲೆಗೆ, ಜಾತಿಯ ಮಹತ್ವವಿಲ್ಲದ ವಿದ್ಯಾರ್ಥಿಗಳ ಸಂಘಟನೆಗಳು ಇರುತ್ತವೆ. ವಿದ್ಯಾರ್ಥಿಗಳ ಹಕ್ಕನ್ನು ಸಂರಕ್ಷಿಸುವದು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಹಿಂದುಸ್ತಾನದ ಸಂಪೂರ್ಣ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರಿಗೆ ಶಕ್ಯವಿದ್ದ ಮಟ್ಟಿಗೆ ಭಾಗವಹಿಸಲಿಕ್ಕೆ ಅಣಿಗೊಳಿಸುವದು ಈ ಉದಾತ್ತ ಧ್ಯೇಯಗಳ ಸಲುವಾಗಿ ರಚಿಸಲ್ಪಟ್ಟಿದ್ದದೆ. ಈ ಸಂಸ್ಥೆಯ ಘಟನೆ ಮತ್ತು ಇದರ ಅಧ್ಯಕ್ಷ ಮತ್ತು ಸೆಕ್ರೆಟರಿ ಇವರು ಚುನಾವಣೆ ಪದ್ಧತಿಯಿಂದ ಆರಿಸಲ್ಪಟ್ಟವರು.

೧೯೪೨ ನೇ ಇಸ್ವಿಯ ಕ್ರಾಂತಿಯಲ್ಲಿ ಅ. ಭಾ. ಕಾ. ಮುಂದಾಳುಗಳನ್ನು ಮತ್ತು ಕೆಲಸ ಮಾಡುವವರನ್ನು ಸೆರೆಮನೆಯಲ್ಲಿಟ್ಟರು. ಅದರಿಂದ ಈ ಸಂಸ್ಥೆಯ ಕೆಲಸವೂ ತಟಸ್ಥವಾಗಿತ್ತು. ಆದರೆ ೧೯೪೩—೪೪ ರ ನಂತರ ಈ ಸಂಸ್ಥೆಯ ಕೆಲಸವು ಸುರಕ್ಷಿತ ನಡೆದಿದೆ. ಇಂದು ಹಿಂದುಸ್ತಾನದ ಪ್ರತಿಯೊಂದು ಪ್ರಾಂತದಲ್ಲಿ ಈ ಸಂಸ್ಥೆಯ ಶಾಖೆಗಳು ಕೆಲಸ ನಡೆಸಿವೆ. ಇದು ಬರಿ ವಿದ್ಯಾರ್ಥಿಗಳ ಸಂಸ್ಥೆಯಲ್ಲದೆ ವಿದ್ಯಾರ್ಥಿನಿಯರ ಸಂಸ್ಥೆಯೂ ಇರುತ್ತದೆ. ಆದರೆ ಎಲ್ಲ ಸ್ಥಳಗಳಲ್ಲಿ ವಿದ್ಯಾರ್ಥಿಗಳ ಜೊತೆಗೆ ವಿದ್ಯಾರ್ಥಿನಿಯರು ಕೆಲಸ ಮಾಡುವದು ಕಂಡು ಬರುವದಿಲ್ಲ. ಅದಕ್ಕೆ ಅನೇಕ ಕಾರಣಗಳು ಇರುತ್ತವೆ.

ಬರೀ ವಿದ್ಯಾರ್ಥಿನಿಯರ ಮಂಡಲಗಳಲ್ಲಿ ವಿದ್ಯಾರ್ಥಿನಿಯರು ಎಷ್ಟೋ ಉತ್ಸುಕತೆಯಿಂದ ಬರುತ್ತಾರೆ. ವಿದ್ಯಾರ್ಥಿನಿಯರ ಕಾರ್ಯಕ್ರಮದಲ್ಲಿ ಭಾಗ ತೆಗೆದುಕೊಳ್ಳೋಣ ಎಂದು ಮಾತನ್ನಾಡುತ್ತಾರೆ. ಈ ಎಲ್ಲದರ ಲಾಭ ತೆಗೆದುಕೊಂಡು ವಿದ್ಯಾರ್ಥಿ ಜಗತ್ತಿನಲ್ಲಿ ಸಾಮಾಜಿಕ ನಿಂದೆಯನ್ನು ಎದುರಿಸಿ ವಿದ್ಯಾರ್ಥಿಗಳ ಜೊತೆಗೆ ನಿಜವಾಗಿ ಕೆಲಸ ಮಾಡುವ ವಿದ್ಯಾರ್ಥಿನಿಯರನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಅ. ಬಾ. ವಿ. ಕಾ. ಒಂದು ಸ್ತ್ರೀ ಸಮಿತಿಯನ್ನು ನೇಮಿಸಿರುತ್ತದೆ. ಅದರ ಹೆಸರು "ಅ ಬಾ ವಿ ಕಾಂಗ್ರೆಸ್ಸಿನ ವಿದ್ಯಾರ್ಥಿನಿ ಸಮಿತಿ" ಈ ಸಮಿತಿಯಲ್ಲಿ ಎಲ್ಲ ಪ್ರಾಂತದ ವಿದ್ಯಾರ್ಥಿನಿಯರನ್ನು ಪ್ರತಿನಿಧಿಗಳೆಂದು ತೆಗೆದುಕೊಂಡಿದ್ದಾರೆ. ಈ ಸಮಿತಿಯ ಮೊದಲನೆಯ ಸಭೆಯು ೧೯೪೫ ರ ಅಕ್ಟೋಬರ ೨೮-೨೯ ಬಜಾಜವಾಡಿ, ವರ್ಧಾದಲ್ಲಿ ಕೂಡಿತ್ತು ಬರುವ ಅ. ಭಾ. ವಿ. ಕಾ. ನ ಪರಿಷತ್ತಿನ ಜೊತೆಗೆ ಅ. ಭಾ ವಿದ್ಯಾರ್ಥಿನಿಯರ ಸಮ್ಮೇಲನವನ್ನು ಕೂಡಿಸುವದನ್ನು ನಿಶ್ಚಯಿಸಿದೆ. ಈ ಸಮ್ಮೇಲನಕ್ಕೆ ಕಾರ್ಯದರ್ಶಿಗಳೆಂದು ಮಹಾರಾಷ್ಟ್ರದ ಪ್ರತಿನಿಧಿ ಕು. ಶಶಿ ಧಡಪಳೆ ಮತ್ತು ಸಹಕಾರ್ಯದರ್ಶಿ ಪಂಜಾಬದ ಕು. ಹರಬನ್ಸ ದೌಲತಸಿಂಗ ಇವರನ್ನು ಸರ್ವಾನುಮತದಿಂದ ಆರಿಸಿದೆ. ಈ ಸಭೆಯಲ್ಲಿ ಕೆಲವು ಗೊತ್ತುವಳಿಗಳೂ ಸ್ವೀಕೃತವಾದವು ನಿಯಮ ನಿಬಂಧನೆಗಳೂ ಗೊತ್ತುಪಡಿಸಲಾದವು.

ಕರ್ನಾಟಕದಲ್ಲಿ ಶ್ರೀ ಶಕುಂತಲಾ ಕುರ್ತಕೋಟಿ ಇವರನ್ನು ನೇಮಿಸಲಾಗಿದೆ. ಕಸ್ತೂರಬಾ ಯೋಜನೆಯ ಕಸ್ತೂರಬಾ ಕೇಂದ್ರವನ್ನು ಹೊರಡಿಸುವವರು ಇದ್ದಾರೆ. ಪ್ರತಿಯೊಂದರಲ್ಲಿ ಮೂವರು ವಿದ್ಯಾರ್ಥಿನಿಯರು ಕೆಲಸ ಮಾಡುವವರಿದ್ದು ಹಳ್ಳಿಯ ಜನರಿಗೆ ವೈದ್ಯಕೀಯ ಸಾಕ್ಷರತೆಯ ಮತ್ತು ಇತರ ಸಹಾಯಗಳನ್ನು ಮಾಡಿ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶವಿರುತ್ತದೆ. ಇದೆಲ್ಲ ಕಾರ್ಯಕ್ರಮ ಜೋರಿನಿಂದ ಸಾಗಬೇಕಾದರೆ ವಿದ್ಯಾರ್ಥಿನಿಯರೆಲ್ಲ ಹೆಚ್ಚು ಉತ್ಸಾಹದಿಂದ ಕಾರ್ಯ ಮಾಡಬೇಕು.

ಚಿಕ್ಕ ಕತೆ

ಕಲ್ಲಿನ ಕರುಣೆ

ಮೂಲ:
ಜಯಶಂಕರ ಪ್ರಸಾದ

*

ಅನುವಾದ:
ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ.

"ಸಾಹಿತ್ಯಸೇವೆ ಕೂಡ ಒಂದು ವ್ಯಸನವೇ ಅಲ್ಲವೆ ?"

"ಅಲ್ಲ ನವೀನ್! ಅದು ವಿಶ್ವಸಾಹಿತ್ಯ ಸೇವಾ ಸಮಿತಿಯ ಸದಸ್ಯತ್ವವನ್ನು ಪಡೆಯಲು ಹಾದಿ."

"ಆದರೆ, ನಿಮಗಾವ ಬಗೆಯ ಸಾಹಿತ್ಯವು ರುಚಿಸುವುದು?"

"ಕರುಣೆ, ಮತ್ತು ಅದನ್ನು ವಿಶದೀಕರಿಸುವ ಚಿತ್ರ. ಇಂತಹ ಸಾಹಿತ್ಯವು ನನ್ನನ್ನು ಹೆಚ್ಚಾಗಿ ಆಕರ್ಷಿಸುತ್ತದೆ."

ನವೀನ್ ಗಂಭೀರವಾಗಿ ನಗುತ್ತ "ಭಾರತೀಯರಲ್ಲಿ ಇವಕ್ಕಿಂತಲೂ ಹೆಚ್ಚಿನ ವಸ್ತುವೇನಿರುವುದು? ಸನ್ನಿವೇಶ ಮತ್ತು ಅದರೊಂದಿಗೆ ಸಂತಾಪ. ಆದರ ಪ್ರತಿಫಲ ಕರುಣಾರಸವಾದ ಗೀತ—ಕವನ. ಇದು ಒಂದು ಸಾಂಕ್ರಾಮಿಕ ರೋಗ. ಎಲ್ಲರನ್ನು ಗುಂಗುಮಾಡುತ್ತಲಿದೆ, ಹೊರತು, ಇದರಿಂದ ಯಾವ ಉಪಯೋಗವೂ ಇಲ್ಲ." ವಿಮಲ್‌ನ ಹೃದಯವು ಬೆರಗುಗೊಂಡಿತು. ಯಾವಾಗಲೂ ತನ್ನ ಅಭಿಪ್ರಾಯಗಳಲ್ಲಿ ಆಶೆಗಳಲ್ಲಿ ಏಕೀಭಾವವನ್ನು ಸೂಚಿಸಿ ತನ್ನೊಡನೆ ಆನಂದಿಸುತ್ತಿದ್ದ ಮಿತ್ರನು ಇಂದು ಭಿನ್ನಾಭಿಪ್ರಾಯವನ್ನು ಸೂಚಿಸಿ ಈ ರೀತಿ ಹೀಯಾಳಿಸಿ ಮಾತನಾಡಿದುದನ್ನು ಕಂಡು, ವಿಮಲಪ್ರಸಾದನಿಗೆ ಆಶ್ಚರ್ಯವೆನಿಸಿತು. ಸ್ವಲ್ಪ ಬೇಸರವೂ ಆಯಿತು.


"ಎಲ್ಲಿಗೆ ಹೊರಟಿರಿ" ಎಂದು ನವೀನ್ ಕೇಳಿದ

"ನೀವು ಹೊರಡಿ. ನಾನೊಬ್ಬನೇ ಬೇರೊಂದು ಕಡೆಗೆ ಹೋಗಬೇಕಾಗಿದೆ. ಪುನಃ ನಿಮ್ಮನ್ನು ನದೀ ತೀರದಲ್ಲಿ ಬಂದು ಕಲೆಯುತ್ತೇನೆ" ಎಂದ ಹೇಳಿ, ವಿಮಲ್ ನಿರ್ಜನ ಪ್ರದೇಶದ ಕಡೆಗೆ ಹೊರಟ.

ಪ್ರಶಾಂತವಾದ ನದೀ ತೀರ. ಜನರ ಸಂದಣಿ ಇಲ್ಲವೇ ಇಲ್ಲ. ಅದೇ ತಾನೆ ಮುಳುಗಬೇಕೆಂದು ಸವಣಿಸುವ ಸೂರ್ಯನು ಅಲ್ಲಿಯ ಒಂದು ಹುಲ್ಲು ಗುಡಿಸಲ ಮೇಲೆ ತನ್ನ ಕಿರಣಗಳ ಬೆಳಕನ್ನು ಚೆಲ್ಲಿರುವನು. ಅದು ಒಂದು ಸುಂದರ ದೃಶ್ಯ. ಆ ಕುಟೀರದಲ್ಲೊಬ್ಬ ಮುದುಕಿ ಒಂದು ಮೂಲೆಯಲ್ಲಿ ಕುಳಿತಿದ್ದಳು. ಒಂದೆರಡು ಉಳಿ, ಸುತ್ತಿಗೆಗಳು, ಸಣ್ಣ ಸಣ್ಣ ನೀರಿನ ಬಟ್ಟಲುಗಳು ಕೆಲವು, ಕುಂಡಗಳು ಹಲವಾರು, ಎರಡು ಕಪ್ಪು ಕಲ್ಲುಗಳು, ಪರಿಚಾರಿಕೆಗಳಂತೆ, ಆ ಕುಟೀರದ ಸುತ್ತಲೂ ಬಿದ್ದಿರುವವು. ಯಾರಿಗೂ ಕಾಣದಂತೆ, ಒಂದು ಕಲ್ಲಿನ ಮೇಲೆ ಮೌನದಿಂದ ಕುಳಿತ. ಅದರ ಬಳಿಯಲ್ಲಿಗೆ ಇನ್ನೊಂದು ಕಪ್ಪು ಬಣ್ಣದ ಹಾಸುಗಲ್ಲು ಬಿದ್ದಿದೆ. ಅದು ಮೌನದಲ್ಲಿ ಏನೋ ಒಂದು ಹಿಂದಾದ ಸಂದೇಶವನ್ನು ಹೇಳುವಂತೆ ಅವನಿಗೆ ಅನಿಸಿತು. ಅದನ್ನು ಕುತೂಹಲದಿಂದ ಕೇಳುತ್ತಿದ್ದಾನೆ.

"ಶಿಲ್ಪಿಯೇ! ನೀನು ನನ್ನನ್ನಿಲ್ಲಿಗೇತಕ್ಕೆ ಎಳೆದು ತಂದುಹಾಕಿದೆ? ಇಲ್ಲಿಯ ಮಾನವ ಹಿಂಸಾ ಗರ್ಜನೆಯು ನನ್ನ ಕಠೋರ ವಕ್ಷಸ್ಥಲವನ್ನು ಭೇದಿಸುತ್ತಲಿದೆ. ಇಲ್ಲಿಗೆ ತರುವಾಗ ನಿನ್ನ ಕೈಚಳಕದಿಂದ, ಕೆತ್ತಬೇಕೆಂದಿರುವ ಸುಂದರ ವಿಗ್ರಹದಲ್ಲಿ ರೂಪುಗೊಳ್ಳುವೆನಲ್ಲವೆಂಬ ಆಶೆಯಿತ್ತು. ಈ ಹಿರಿದಾಶೆಯನ್ನು ಪೂರ್ತಿಮಾಡಿಕೊಳ್ಳುವುದಕ್ಕಾಗಿ ನನ್ನ ವಕ್ಷಸ್ಥಲವನ್ನು ಸೀಳಿಸಿಕೊಳ್ಳುವುದಕ್ಕೆ ಸಿದ್ಧನಾದೆ. ಸುಂದರವಾದ ವಿಗ್ರಹದ ರಚನೆ ಪೂರ್ತಿಯಾದ ನಂತರ ಇದಕ್ಕಾಗಿ ನಾನು ತೋರಿದ ಸಹನೆಶೀಲತೆ, ಪುರಸ್ಕಾರದ ಪ್ರತಿಫಲವು, ಜನರು ತೋರುವ ಆದರವನ್ನನುಭವಿಸುತ್ತದೆ. ನನ್ನ ಮೌನ ವಿಗ್ರಹವು ಜನರ ಹೊಗಳಿಕೆಯನ್ನು ಅನಂತಕಾಲದವರೆವಿಗೂ ಸ್ವೀಕರಿಸುತ್ತದೆ. ಆದರೂ ನಿಷ್ಠುರನೇ! ನೀನೀಗ ಮಾಡಿರುವುದೇನು ? ನಿನ್ನ ಕುಟೀರದ ಬಾಗಿಲಲ್ಲಿ ಒಡೆದು ಎರಡಾದ ಹಂಚಿನ ತುಂಡುಗಳಂತೆ, ನನ್ನನ್ನು ಅನಾದರದಿಂದ ಬಿಸುಟಿರುವೆ. ಇಲ್ಲಿ ಕಾದು, ಕಾದೂ ಎಲ್ಲಿಯ ವರೆಗೆ ನನ್ನ ಮುಂದಿನ ಜೀವಿತವನ್ನು ಲೆಕ್ಕಮಾಡುತ್ತಿರಬೇಕು. ಈ ದಾರುಣ ನಡತೆಗೆ ಕೊನೆ ಇಲ್ಲವೆ ?"

—೧೬ನೇ ಪುಟ ನೋಡಿರಿ.



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಎಪ್ರಿಲ ೨೯ ರಿಂದ ಮೇ ೫ ರ ವರೆಗೆ

ಮೇಷ

ನಿಮ್ಮ ಮತ್ತು ನಿಮ್ಮ ಹೆಂಡತಿಯು ಪ್ರಕೃತಿ ಅನುಕೂಲ. ಆದರೆ ಒಬ್ಬರೊಬ್ಬರ ಬಗ್ಗೆ ಸಹಾನುಭೂತಿ ಕಡಮೆ. ಪ್ರತಿಯೊಂದು ಕೆಲಸದಲ್ಲಿ ಹೆಂಡತಿಯದೇ ಮೇಲ್ಗೈ. ಮಕ್ಕಳಲ್ಲಿ ಉತ್ಸಾಹದ ಹೆಚ್ಚಳ ಆಗುವಂಥ ಮಾತುಗಳು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಉತ್ತಮ. ಸ್ಥಾವರದಲ್ಲಿ ಕೆಲ ತಂಟೆಯ ಪ್ರಶ್ನೆ ಉಪಸ್ಥಿತವಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚಿಸಿದರೂ ಯಶಸ್ಸಿನ ಒಲವು ನಿಮ್ಮ ಕಡೆಗೆಯೇ. ಮಿತ್ರಸುಖ ಉತ್ತಮ. ದೇವಧರ್ಮದ ಬಗ್ಗೆ ಅನಾಸ್ಥೆ ತೋರಿಸುವಂಥ ಮಾತು ಇಲ್ಲವೆ ಕೃತಿಗಳು. ಪ್ರವಾಸ ತೊಂದರೆಯದು. ಪತ್ರವ್ಯವಹಾರ ಸಂತಾಪಜನಕ. ಆದರೆ ಭೆಟ್ಟಿಯ ಕೆಲಸ ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಕೊನೆಯ ೨ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೧, ೨. ೩, ೪ ಅನುಕೂಲ.

ಅದರಂತೆ ಮೇ ೧ಕ್ಕೆ ರಾಹು ಮಿಥುನದಿಂದ ವೃಷಭದಲ್ಲಿ ಅರ್ಥಾತ್ ಕೇತು ಧನುದಿಂದ ವೃಶ್ಚಿಕದಲ್ಲಿ ಬರುವನು. ಅಂದರೆ ಕಳೆದ ೧॥ ವರುಷಗಳಿಂದ ಈ ರಾಶಿಗೆ ರಾಹು ೩ನೇಯವ ಕೇತು ೯ನೆಯವ ಆಗುತಿದ್ದ, ಅವರೀಗ ಮೇಲಿನ ತಾರೀಕಿನಿಂದ ಮುಂದೆ ೨॥ ವರ್ಷಗಳವರೆಗೆ ರಾಹು ೨ ಮತ್ತು ಕೇತು ೮ನೇಯವನು ಆಗುವನು. ಅದರ ಫಲ ಶಾರೀರಿಕ ಕ್ಲೇಶ. ದ್ರವ್ಯಹಾನಿ ದುಡ್ಡಿನ ಕೊರತೆ ಕಣ್ಣು ತಲೆ ಮತ್ತು ಮನಸ್ಸಿನ ರೋಗ ಕ್ಷೀಣತೆ ಮತ್ತು ತೊಂದರೆ, ಭೂತದ ಉಪದ್ರವ ಏಕತ್ರಪಿದ್ದರೆ ವಿಭಕ್ತರಾಗುವ ಸಂಭವ.

ವೃಷಭ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಮಕ್ಕಳಲ್ಲಿ ಉತ್ಕರ್ಷ ಮತ್ತು ವಿಕಟ ಆಜ್ಞೆಗಳ ಪೂರ್ಣ ರೀತಿಯಿಂದ ಪಾಲನೆ ಆದರೆ ಇತರ ವಿಷಯಗಳಲ್ಲಿ ಪ್ರಾಪಂಚಿಕ ಭಗಭಗಿ ಅಲ್ಪಸ್ವಲ್ಪ ಇದ್ದದ್ದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮವಾದರೂ ಅತಿಶಯ ವೆಚ್ಚದಿಂದ ದುಡ್ಡಿನ ಅಡಚಣಿ ಇದ್ದದ್ದೆ. ಸ್ಥಾವರ ಸಂಬಂಧದಲ್ಲಿ ಸರಿಹೋಗದಂಥ ವ್ಯವಹಾರ ಮಾಡುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ. ೨೯, ೩, ೪, ೫ ಅನುಕೂಲ.

ಮೇ ೧ಕ್ಕೆ ಬರುವ ೧ನೇ ರಾಹುವಿನಿಂದ ಪ್ರಕೃತಿಗೆ ಕ್ಲೇಶ. ಹೆಂಡತಿಗೆ ಕ್ಲೇಶ. ಉಭಯತರಲ್ಲಿ ತಿಕ್ಕಾಟ. ಕೆಟ್ಟಸಂಗತಿಗಳ ಕಡೆಗೆ ಒಲವು. ಆದರೆ ಲಾಭಕ್ಕೆ ಒಂದು ವರ್ಗದವರ ಉತ್ಕರ್ಷಕ್ಕೆ ಶತ್ರುನಾಶಕ್ಕೆ ಮತ್ತು ಅಪ್ರತಿಮ ಸಾಹಸಕ್ಕೆ ಉತ್ತಮವಾದಂಥ ಫಲ ಕೊಡುವನು.

ಮಿಥುನ

ನಿಮ್ಮ ಮತ್ತು ಹೆಂಡತಿಯದು ಪ್ರಕೃತಿ ಉತ್ತಮ ಉಳಿದು ಪ್ರಾಪಂಚಿಕ ಸುಖ ಚೆನ್ನಾಗಿ ಸಿಕ್ಕುವದು. ಆದರೆ ಮಕ್ಕಳಲ್ಲಿ ಒಬ್ಬರಿಂದ ಲೋಕಾಪವಾದಕ ಕೆಲ ಗೌಣಕೃತ್ಯಗಳು ಸಂಭವಿಸುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮಾತ್ರ ಮನಸಿನಂತೆ ಆಗುವವು. ಆದರೆ ಇಂದೇ ಆಗುವ ಅವಶ್ಯಕತೆ ಇಲ್ಲದಂತೆ ಸಂಗತಿಗಳನ್ನು ಮಾಡುವಲ್ಲಿ ಬಹಶಃ ವೆಚ್ಚ ಮಾಡಲ್ಪಡುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿಮ್ಮದೇ ಫಾಜೀಲ ದಕ್ಷತೆ ಅಡ್ಡಬರುವದು. ಮಿತ್ರರು ಕೇವಲ ನಿಮ್ಮ ಸಮಾಧಾನಕ್ಕಾಗಿ ಥಾಪು ಹೊಡೆಯುತ್ತ ನಡೆಯುವರು. ಪ್ರವಾಸಾದಿ ಕೆಲಸ ತೊಂದರೆಯಿಂದಲೆ ಆದರೆ ಕೊನೆಗೆ ಮನಸಿನಂತೆ. ಆರಿದ್ರಾದ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೧, ೨ ಅನುಕೂಲ.

ಮೇ ೧ಕ್ಕೆ ಬರುವ ೧೨ನೇ ರಾಹುವಿನಿಂದ ಕಾಯಿಲೆ, ವಿಪತ್ತಿ, ದ್ರವ್ಯನಾಶ. ಅಪಕೀರ್ತಿ, ಸ್ತ್ರೀ ವಿರೋಧ ಇಲ್ಲವೆ ವಿಯೋಗವುಂಟಾಗುವದು ಆದರೆ ಶತ್ರುಗಳ ಫಜೀತಿಯಾಗುವದು.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಕೆಲ ವಿಷಯಗಳಲ್ಲಿ ಹೆಂಡತಿಯದು ಬಹಳ ಸಿಟ್ಟು. ಮಕ್ಕಳಲ್ಲಿ ಭಾವೀ ಉತ್ಕರ್ಷದ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಲಾಭ ಮತ್ತು ಪ್ರತಿಷ್ಠೆ ಬಹಳ ಉತ್ತಮ. ಆದರೆ ವೆಚ್ಚದ ಹೆಜ್ಜೆ ಬಹಳ ಮುಂದೆ. ಉಳಿಕೆಯನ್ನು ಮುರಿಸಿ ಕೆಲ ವೆಚ್ಚ ಮಾಡುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವಲ್ಪ ಹಿಮ್ಮೆಡುವದು. ಆದರೆ ಪರಭಾರೆಯೇ ಶತ್ರು ಜರ್ಜರ ಆಗುವ ಪ್ರಸಂಗ. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಬಹಳ ಹಿತದ್ದು. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೯, ೩೦, ೩, ೪ ಅನುಕೂಲ.

೧ನೇ ತಾರೀಕಿಗೆ ಬರುವ ೧೧ನೇ ರಾಹು ಉತ್ಕರ್ಷಾನುಕೂಲ. ಮತ್ತು ಶ್ರೇಷ್ಠತ್ವವನ್ನು ಹೆಚ್ಚಿಸುವನು. ದ್ರವ್ಯಲಾಭಕ್ಕೆ ಉತ್ತಮ; ಆದರೆ ಮಕ್ಕಳಿಗೆ ಕಷ್ಟದಾಯಕ.

ಸಿಂಹ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಮಧ್ಯಮ. ಮನಸಿನಲ್ಲಿ ಹಿರಿಯರಿಂದ ನಿರ್ಭರ್ತ್ಸನೆ ಮತ್ತು ಹುರುಪು ಕಳೆಯುವಂಥ ಮಾತುಗಳು. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಆದರೆ ಅವರಲ್ಲಿಯ ಸಹಾಯಕರ್ತರಿಂದಲೆ ಮುದ್ದಾಮ ಅಂಜಿಸುವ ಪ್ರಸಂಗ. ಮಿತ್ರಸುಖ ಅನುಕೂಲ ಪ್ರವಾಸ ತೊಂದರೆಯದು ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪೂರ್ವಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧—೨—೩—೪ ಅನುಕೂಲ.

ತಾ ೧ಕ್ಕೆ ಬರುವ ೧೦ ನೇ ರಾಹು ಸತ್ತೆ ಪ್ರಭುತ್ವ ಅಧಿಕಾರ ದರ್ಜೆ ಇವುಗಳ ಬೆಳವಣಿಗೆಗೆ ಉತ್ತಮ ಆದರೆ ತಾಯಿ-ತಂದೆಗೆ ಕ್ಲೇಶ ಸ್ಥಾವರದಲ್ಲಿ ಸ್ವಲ್ಪ ಹಾನಿ. ಸಾಮಾಜಿಕ ಕಾರ್ಯದಲ್ಲಿ ಇಬ್ಬಣದ ಜೋರು ಹೆಚ್ಚಾಗುವದು.

ಕನ್ಯಾ

ಪ್ರಕೃತಿ ಉತ್ತಮ ಆದರೆ ಸ್ತ್ರೀ ಸುಖ ನೆಟ್ಟಗೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆಯೆ. ಮನೆಯವರಿಗಿಂತ ಅತಿಥಿಗಳದೆ ಸೆಡುವು ಸಂಭಾಳಿಸುವುದರಲ್ಲಿಯೆ ಬೇಜಾರಾಗಿ ಹೋಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಸ್ಥಾವರ ಜಂಗಮದಲ್ಲಿ ಹೆಚ್ಚಳ. ವಾದದಲ್ಲಿ ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಮಿತ್ರಸುಖ ಉತ್ತಮ. ಪ್ರವಾಸಾದಿ ಕೆಲಸ ಸುಖಕರ. ಉತ್ತರಾದಿ ಕೊನೆಯ ೨ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೯—೩—೪—೫ ಅನುಕೂಲ.

೧ ನೇ ತಾ. ಕ್ಕೆ ಬರುವ ೯ ನೇ ಗುರುವಿನಿಂದ ಲಾಭ ಉತ್ತಮ ಆದರೆ ಬುದ್ಧಿ ವಿಪರೀತ ವಿಘ್ನಗಳಲ್ಲಿಯೆ ವಿಘ್ನಗಳು ಇಲ್ಲವೆ ಅಪೂರ್ಣತೆ. ಮಕ್ಕಳಲ್ಲಿ ಕ್ಲೇಶ ಭಾಗ್ಯದಲ್ಲಿ ಆಗಾಗ ಮತ್ತು ಅಕಲ್ಪಿತ ಏರಿಳಿತ ಬಂಧುವರ್ಗದವರಲ್ಲಿ ವಿರೋಧ ಮತ್ತು ಶರೀರ ಕ್ಲೇಶ.

ತುಲಾ

ಪ್ರಕೃತಿ ಉತ್ತಮ ಸ್ತ್ರೀ ಸುಖ ಉತ್ತಮವೆ. ಮತ್ತು ಉಭಯತರಲ್ಲಿ ಮತೈಕ್ಯ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ ಆದರೆ ದ್ರವ್ಯಲಾಭ ಉತ್ತಮ. ವಾದದಲ್ಲಿ ಶತ್ರುಗಳದೆ ಜೋರು ಹೆಚ್ಚು. ಮಿತ್ರ ಸುಖ ಉತ್ತಮ ಶಕ್ತಿಮೀರಿ ಹೆಚ್ಚು ವೆಚ್ಚ. ಅವಚಿತ ಲಾಭದ ಸಂಭವವೂ ಇದೆ. ಪ್ರವಾಸಾದಿ ಕೆಲಸ ಬಹಳ ತೊಂದರೆಯದು. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೧, ೨, ೫ ಅನುಕೂಲ.

೧ನೇ ತಾರೀಕಿಗೆ ಬರುವ ೮ನೇ ರಾಹುವಿನಿಂದ ಒಮ್ಮೆ ಪ್ರಾಣಾಂತಿಕ ಕಾಯಿಲೆ ಹೆಂಡತಿಗೂಡ ಮೇಲಿಂದ ಮೇಲೆ ವಿರೋಧ ಇಲ್ಲ. ಕೆಲ ಅಪರಿಹಾರ್ಯ ಕಾರಣಗಳಿಂದ ಬಹಳ ಕಾಲ ವಿರಹ. ಕುಟುಂಬ ಏಕತ್ರವಿದ್ದರೆ ಅದು ಒಡೆಯುವ ಸಂಭವ. ಕಣ್ಣು ಮತ್ತು ಗುಹ್ಯೇಂದ್ರಿಯದ ಪೀಡೆ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಸಾವಕಾಶ ಕಡಮೆಯಾಗುತ್ತ ನಡೆಯುವ ಚಿಹ್ನಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ ಆದರೆ ಲಾಭವೂ ತುಂಬ. ಮಿತ್ರಸುಖ ಉತ್ತಮ ಪ್ರವಾಸಾದಿ ಕೆಲಸಗಳೂ ಹಿತದ್ದು. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೯, ೩೦, ೩, ೪ ಅನುಕೂಲ.

೧ನೇ ತಾರೀಕಿಗೆ ಬರುವ ೭ನೆ ರಾಹುವಿನಿಂದ ಹೆಂಡತಿಗೆ ಕ್ಲೇಶ ವಾದದಲ್ಲಿ ಹಿಮ್ಮೆಡುವದು ಆದರೆ ಲಾಭ ಮತ್ತು ಮಕ್ಕಳ ಉತ್ಕರ್ಷಕ್ಕೆ ಅನುಕೂಲ.

ಧನು

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ಸಾಮಾನ್ಯ. ಪರಸ್ತ್ರೀಗೂಡ ಶತ್ರುತ್ವ ಇಲ್ಲವೆ ಪಾಪ ಹೇತುವಿನಿಂದ ಮಿತ್ರರ ಪೇಚು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಬಹಳ ಹೆಚ್ಚು ಪ್ರತಿಷ್ಠೆ ಆದರೆ ಲಾಭ ಮಾತ್ರ ಬಹಳ ಕಡಮೆ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು ಅಲ್ಲವೆ ನಿಮ್ಮಲ್ಲಿಯೆ ಕೆಲ ಜನರು ಅವರಿಗೆ ಫಿತೂರ ಆಗುವರು. ಕೆಲ ಧಾರ್ಮಿಕ ಪ್ರಕಾರದ ವಿಶಿಷ್ಟ ಕೃತ್ಯಗಳು ಮಾಡಲ್ಪಡುವ ಯೋಗ. ಪ್ರವಾಸಾದಿ ಕೆಲಸ ಅನುಕೂಲ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲನೆ ೨ ಚರಣಗಳಿಗೆ ವಿಶೇಷ ತೊಂದರೆ. ತಾ. ೧, ೨, ೫ ಅನುಕೂಲ.

೧ನೇ ತಾರೀಕಿನಿಂದ ಬರುವ ೬ನೇ ರಾಹು ಉತ್ಕರ್ಷ ಶ್ರೇಷ್ಠತ್ವ ಸಾಹಸಗಳಲ್ಲಿ ಯಶಸ್ಸು ಎಲ್ಲರ ಮೇಲೆಯೂ „ಥಾಪು" ಶತ್ರು ಮತ್ತು ಸಂಕಟಗಳ ನಾಶಕ್ಕೆ ಉತ್ತಮ ಆದರೆ ತಾಯಿ ಮತ್ತು ಬಾಂಧವರ ಹಾಗು ಮಿತ್ರರ ಆಯುಷ್ಯಕ್ಕೆ ಅನುಕೂಲವಿಲ್ಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ ಆದರೆ ಮಕ್ಕಳಲ್ಲಿ ಬಹಳ ಉನ್ನತಿ. ಮಿತ್ರರು ಆಪ್ತರು ಹಿತಕೃತ್ಯ ಮಾಡುವರು. ಕೆಲವೊಬ್ಬ ಪ್ರಸಿದ್ಧ ವ್ಯಕ್ತಿ ನಿಮ್ಮ ಆತಿಥ್ಯ ಸ್ವೀಕರಿಸುವದಕ್ಕಾಗಿ ಮನೆಗೆ ಬರುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮನರಂಜನದ ಯೋಗ ಅನೇಕ ಸಲ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಜೋರು. ಉತ್ತರಾಷಾಢಾದ ಕೊನೆಯ ೨ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೯, ೩, ೪ ಅನುಕೂಲ.

೧ನೇ ತಾರೀಕಿಗೆ ಬರುವ ೫ನೇ ರಾಹುವಿನಿಂದ ಮಕ್ಕಳಿಗೆ ಕ್ಲೇಶ, ಕ್ವಚಿತ್ ವಿಯೋಗ ವಿಪರೀತ ಬುದ್ಧಿಯ ಕೃತ್ಯಮಾಡುವ ಹ್ಯಾವ. ಸುಳ್ಳು ಮಾತಾಡುವ ಪ್ರಸಂಗ ಹೆಚ್ಚು. ದೇವಧರ್ಮದ ಸ್ತೋಮ ಇಲ್ಲವೆ ಆದರ ಬಗ್ಗೆ ಅಶ್ರದ್ಧೆ. ದ್ರವ್ಯ ಲಾಭ ಅನುಕೂಲ ಆದರೆ ಅದಕ್ಕಿಂತ ವೆಚ್ಚ ಹೆಚ್ಚು.

ಕುಂಭ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಮನಸ್ಸಿನಂತೆ ಪ್ರಾಪಂಚಿಕ ಸುಖ ಸಾಮಾನ್ಯ ಆದರೆ ಸ್ಥಾವರದಲ್ಲಿ ಮತ್ತು ಮನೆಯಲ್ಲಿಯ ವೈಭವದಲ್ಲಿ ಬಹಳ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಅದಕ್ಕಾಗಿ ಎರಡನೆಯವರ ಮರ್ಜಿ ಹಿಡಿಯಬೇಕಾದ ಪ್ರಸಂಗ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನುಕೂಲತೆ. ಪ್ರವಾಸಾದಿ ಕೆಲಸ ಬಹಳ ಉತ್ತಮ. ಅದರಲ್ಲಿ ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಕೊನೆಯ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೩೦, ೧, ೨ ಅನುಕೂಲ.

೧ನೇ ತಾರೀಕಿಗೆ ಬರುವ ೪ನೆ ರಾಹು ಮಾತಾಪಿತೃ ವಿರೋಧಕ ಇಲ್ಲವೆ ವಿಘಾತಕ. ಆಶ್ರಯದಾತರ ಮತ್ತು ಸ್ಥಾವರದ ನಾಶ ಸುಖಹೀನಗೊಳಿಸುವಂಥ ಕೃತ್ಯಗಳು.

ಮೀನ

ಪ್ರಕೃತಿ ಉತ್ತಮ, ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಮಿತ್ರತ್ವದಲ್ಲಿ ಸ್ವಲ್ಪ ವಿರೋಧ ವಾದದಲ್ಲಿ ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೯, ೩೦, ೧, ೨ ಅನುಕೂಲ.

೧ನೇ ತಾರೀಕೀಗೆ ಬರುವ ೩ನೇ ರಾಹು ಪರಾಕ್ರಮಕ್ಕೆ ಯಶಸ್ಸಿಗೆ ಉತ್ಕರ್ಷಕ್ಕೆ ಮತ್ತು ಲಾಭಕ್ಕೆ ಉತ್ತಮ ಆದರೆ ಬಂಧುವರ್ಗದವರಿಗೆ ಕ್ಲೇಶಕರ.

ಕರ್ನಾಟಕದ ಅಂದು ಇಂದು

(೨ನೇ ಪುಟದಿಂದ ಮುಂದರಿದುದು)

ಭಿನ್ನ ಭಾಷೆಯ ಎರಡು ಜನಾಂಗಗಳ ಸಂಬಂಧ ಉಂಟಾದಾಗ ಕೆಲವೊಂದು ವರ್ಗದವರಿಗೆ ತಮ್ಮದಲ್ಲದ ಇನ್ನೊಂದು ಭಾಷೆಯ ಪರಿಚಯದ ಆವಶ್ಯಕತೆ ಉಂಟಾಗುತ್ತದೆ. ಆಗ ಅವರು ತಮ್ಮದಲ್ಲದ ಮತ್ತೊಂದು ಭಾಷೆಯನ್ನು ಕಲಿಯಲು ಯತ್ನಿಸುವರು. ತಮ್ಮಲ್ಲಿ ಇಲ್ಲದ ಅನೇಕ ಮಾತುಗಳನ್ನು ಸಂಬಂಧ, ಸಂಪರ್ಕಗಳು ಹೆಚ್ಚಾದಂತೆ ಎತ್ತಿಕೊಳ್ಳಬೇಕಾಗುವುದು. ಆರ್ಯರು ಪಂಜಾಬದಲ್ಲಿದ್ದಾಗ ರಚಿತವಾಯಿತೆಂದು ಹೇಳುವ ಛಾಂದೋಗ್ಯ ಉಪನಿಷತ್ತಿನಲ್ಲಿ 'ಮಟಚೀ ಹತೇಷ ಕುರುಷನಿ' ಎಂಬ ಮಾತು ಬರುತ್ತದೆ. ೧೩. ಮಟಚಿಯ ಹಾವಳಿಯಿಂದ ಕುರುದೇಶದೊಳಗಿನ ಬೆಳೆಗಳೆಲ್ಲ ಹಾಳಾದುವಂತೆ. ಈ ಮಟಚಿ ಎಂದರೆ ಏನು ? ಎಂಬುದು ಒಂದು ಸಮಸ್ಯೆ ಆಗಿತ್ತು. ಶ್ರೀ ಪಾಠಕ ಡಾ. ಭಾಂಡಾರಕರ ಮೊದಲಾದವರು ಅದು 'ಮಿಡಚೆಯಲ್ಲದೆ ಬೇರೆ ಪ್ರಾಣಿ ಅಲ್ಲವೆಂದು ನಿರ್ಧರಿಸಿದ್ದಾರೆ. ಹೀಗೆ ಮಿಡಚೆ ಎಂಬ ಕರ್ನಾಟಕದ ಮಾತು ಛಾಂದೋಗ್ಯದಲ್ಲಿ ಬಂದದ್ದು ಸೋಜಿಗವಲ್ಲವೇ ? ಚಂದ್ರಮಸ್ ಎಂಬುದು ಕೂಡಲ ಸಂಗಮವೆಂಬಂತೆ ಒಂದು ಜೋಡು ನುಡಿ. ಮಸ್, ಮಾಸ, (Month, Moon) ಮೊದಲಾದವು ಆರ್ಯ ಭಾಷಾವರ್ಗಕ್ಕೆ ಸೇರಿದ ಶಬ್ದಗಳು. ಆದರೆ ಚೆನ್, ಚೆಂದ, ಚೆಲುವು, ಎಂಬುವು ಕನ್ನಡ, ತಮಿಳು ಭಾಷಾವರ್ಗಕ್ಕೆ ಸಂಬಂಧಪಟ್ಟುವು. ೧೪ ಆದುದರಿಂದ ಋಗ್ವೇದದಿಂದಲೂ ನಾವು ಯದು ತುರುವಸರೊಡನೆ ಕರ್ನಾಟಕ ಮೊದಲಿಗರ ಪೂರ್ವಪೀಠಿಕೆಯನ್ನು ಈ ಬಗೆಯಾಗಿ ಕಂಡುಕೊಳ್ಳಬಹುದಾಗಿದೆ. (ಅಪೂರ್ಣ)

ಕಲ್ಲಿನ ಕರುಣೆ

(೧೫ನೇ ಪುಟದಿಂದ ಮುಂದರಿದುದು)

ಕಪ್ಪು ಕಲ್ಲಿನ ಕರುಣಾಮಯವಾದ ಈ ಮೂಕ ಕರೆಯಿಂದ ಇವನ ಹೃದಯ ಚಲಿಸಿತು; ಇವನಲ್ಲಿಯ ಕ್ರೋದಾಗ್ನಿಯನ್ನು ಕೆರಳಿಸಿತು. ಈ ಕರೆಯಲ್ಲಿ ದಾರುಣ ದೃಶ್ಯದ ಮೂಲಕ ಹೊರಬೀಳುವ ಕರುಣಾರಸದ ಝರಿಯ ಪ್ರಭಾವವನ್ನು ಕಂಡು ಚಕಿತನಾದನು. ಉಕ್ಕಿಬರುವ ರೋಷವನ್ನು ತಡೆಯಲಾರದೆ—

" ನೀವು ಈ ಕಲ್ಲುಗಳನ್ನು ಎಷ್ಟು ದಿನಗಳಿಂದ ಇಲ್ಲಿರಿಸಿರುವಿರಿ ? ಬೇಜಾರದಿಂದ ಅವುಗಳನ್ನು ಇಲ್ಲ ಕೆಡವಿ ನಿರ್ಲಕ್ಷಿಸುವುದಕ್ಕಿಂತಲೂ ಸುಂದರ ವಿಗ್ರಹಗಳನ್ನಾಗಿ ಕೆತ್ತಿದ್ದರೆ, ಏನಾಗುತ್ತಿತ್ತು ? ಹೀಗೆ ಮಾಡಿದ್ದರೆ ಯಾರಾದರೂ ಅವುಗಳನ್ನು ಕೊಳ್ಳುತ್ತಿದ್ದರು ನೋಡಿರಿ, ಈ ಮೂಕ ದೃಶ್ಯವನ್ನು ನಿಮಾಗಿ ಈ ಕಲ್ಲುಗಳು ಎಷ್ಟೋ ದಿನಗಳಿಂದ ದುಃಖಿಸುತ್ತ ಮೌನವಾಗಿರುವವು ? " ಎಂದು ಅಲ್ಲಿಯೇ ಕುಳಿತಿದ್ದ ಶಿಲ್ಪಿಯನ್ನು ಉದ್ದೇಶಿಸಿ ತನ್ನ ಹೃದಯದಲ್ಲಿಯ ಭಾವನೆಗಳನ್ನು ಬಿಚ್ಚಿ ಹೇಳಿದ.

ಇವನ ರಭಸದ ನುಡಿಯಲ್ಲಿ ಕಂಡುಬಂದ ಆವೇಶ, ಅವನ ಸಂತಾಪ, ಆದರ ಅಭಿಪ್ರಾಯವನ್ನು ಚೆನ್ನಾಗಿ ತಿಳಿದ ಶಿಲ್ಪಿಯು "ಮಹಾಶಯರೇ! ತಾವು ಶ್ರೀಮಂತರು, ಭಾಗ್ಯಶಾಲಿಗಳು ! ಕಗ್ಗಲ್ಲುಗಳ ಸಂತಾಪ, ತೆರೆಗಳ ಸಂಗೀತ, ಮಂದ ಮಾರುತನ ಹಾಸ್ಯ, ಇನ್ನೂ- ಎಷ್ಟೋ ಸೂಕ್ಷ್ಮ ಭಾಷೆಯನ್ನು ತಿಳಿಯುವ ಹೊಸ ಚೈತನ್ಯ ನಿಮ್ಮಲ್ಲಿರುವುದು. ಅವುಗಳನ್ನು ಕೇಳಿ ಅವುಗಳ ಕರೆಯಿಂದ ಆನಂದವನ್ನು ಹೊಂದುವುದಲ್ಲದೆ ಅವುಗಳಲ್ಲೇ ತಲ್ಲೀನರಾಗುವಿರಿ. ಆ ದೃಶ್ಯಗಳಿಂದ ಚಕಿತರಾಗಿ ಅವುಗಳ ಇಂಗಿತವನ್ನರಿತು ನಿಮ್ಮ ಅನುಭವನನ್ನು ಇನ್ನಿತರರಿಗೂ ನೀಡುವಿರಿ. ದುಃಖ ಹೃದಯಿಗಳ ನಿಶ್ಶಬ್ದ ಆಕ್ರಂದಗಳ ಕರುಣೆಯ ನಿಜರೂಪವನ್ನು ಸಹೃದಯ ಕವಿಗಳ ಅಂತರಾತ್ಮಕ್ಕೆ, ಕೇಳಿಸುವಂತೆ ಮಾಡುವ ಶಕ್ತಿಯನ್ನು ಸಂಪಾದಿಸಿರುವಿರಿ ಅದರಿಂದ ನಮಗೇನು ಉಪಯೋಗ'' ಎಂದು ನಗುತ್ತ ಹೇಳಿದನು.

ವಿಮಲ್‌ಪ್ರಸಾದನ ಹೃದಯದಲ್ಲಿ ಹೊರಚಿಮ್ಮಿದ ಈ ಸದ್ಭಾವಗಳು, ಹಣ ಪ್ರಪಂಚದಲ್ಲಿ ಬಿದ್ದು ಜೀವನದ ರಹಸ್ಯದ ಗುಟ್ಟನ್ನರಿಯದವರ ಪಾಲಿಗೆ ಏನೂ ಫಲಕಾರಿಯಾಗಲಿಲ್ಲ. ಮೇಲೆ ಹೇಳಿದ ಈ ಶಿಲ್ಪಿಯ ಮಾತುಗಳು ಇವನನ್ನು ಪುನಹ ಯೋಚನೆಯಲ್ಲಿ ಕೆಡವಿತು. ಅಷ್ಟುಹೊತ್ತಿಗೆ ರಾತ್ರಿಯು ಕರಾಳರೂಪವು ಭೂಮಿಯನ್ನಾವರಿಸಿತು ಅವನ ಯೋಚನೆ ವೇಗದಿಂದ ಹರಿಯುತ್ತಿದ್ದ ನದಿಯ ವೇಗದಂತೆ ಹರಿಯತೊಡಗಿತು. ಎಲ್ಲಿಯ ವರೆಗೆ ಅವನು ಆ ಸ್ಥಿತಿಯಲ್ಲಿದ್ದನೆಂಬುವುದು ತಿಳಿಯಲೇ ಇಲ್ಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು.